ಭೂಕಂಪ ಆದಾಗ ಮತ್ತೊಂದು ಕಡೆ ಆದಾಗ ಬಹಳ ಲಕ್ಷ್ಯ ವಹಿಸುತ್ತೇನೆ, ನಮ್ಮಲ್ಲಿ ನಮ್ಮ ಕರ್ನಾಟಕದಲ್ಲಿ ಅದರಲ್ಲೂ ನನ್ನ ತಾಲ್ಲೂಕಿನಲ್ಲಿ ಭೂಕಂಪನ ಆಗುತ್ತಿದೆ, ಅದರ ಕಡೆ ಸರ್ಕಾರ ವಿಶೇಷ ಲಕ್ಷ್ಯ ವಹಿಸಬೇಕು. ಈಗ ಕಳೆದ 4–5 ದಿವಸಗಳಿಂದ ಗುಲ್ಬರ್ಗಾ ಎಪಿಎಂಸಿ ಎದುರು, ಗುಲ್ಬರ್ಗಾ ಜಿಲ್ಲೆಯ ತೊಗರಿ ಬೆಳೆಗಾರರು ಅಮರಣ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಅವರದೂ ಅಮರಣ ಇದೆ. ಆದರೆ ಅವರಲ್ಲಿ ದೊಡ್ಡ ಲೀಡರ್ಸ್ ಇಲ್ಲ. ಅದರ ಬಗ್ಗೆ ಚರ್ಚೆಯಾಗುತ್ತಿಲ್ಲ. ಆಲಮಟ್ಟಿಯಲ್ಲಿ ದೊಡ್ಡ ಲೀಡರ್ಸ್ ಇದ್ದಾರೆ, ಅವರ ಬಗ್ಗೆ ಚರ್ಚೆಯಾಗುತ್ತಿದೆ, ಆದರೆ ತೊಗರಿ ಬೆಳೆಗಾರರ ಬಗ್ಗೆ ಲಕ್ಷ್ಯ ಕೊಡುತ್ತಿಲ್ಲ, ತೊಗರಿ ಬರುತ್ತವೆ ಅಲ್ಲಿ ಅವರಿಗೆ ಬರಾಬರಿ ಹೆರ್‍ಯಾಸ್‌ಮೆಂಟ್ ಆಗುತ್ತಿದೆ. ವಾಪಸ್ ಹೋಗುತ್ತಾರೆ ಪುನಃ ವ್ಯಾಪಾರಿ ಜನಗಳಿಗೆ ಮಾರುವಂಥ ಪರಿಸ್ಥಿತಿ ಬಂದಿದೆ. ತೊಗರಿ ಬೇಳೆ ಬೋರ್ಡ್ ಕೂಡ ಮಾಡಿದ್ದಾರೆ, ಆದರೆ ಆ ಬೋರ್ಡ್‌ನಿಂದ ಅದಕ್ಕೆ ಹಣ ಒದಗಿಸಿಲ್ಲ. ಖರೀದಿ ಆಗುವ ಹಾಗೆ ಇಲ್ಲ, ಅಲ್ಲಿ ಕೂಡ ಕೆಲವು ರೈತರದ್ದು ಸ್ಥಿತಿ ಬಹಳ ಚಿಂತಾಜನಕ ಇದೆ. ಆ ಕಡೆ ಲಕ್ಷ್ಯ ವಹಿಸದೆ ಬರೀ ದೊಡ್ಡ ದೊಡ್ಡ ಲೀಡರ್ಸ್, ಕೆಲವು ಪ್ರಮುಖ ಜನ ಎಲ್ಲಿ ಸತ್ಯಾಗ್ರಹ ಕೂಡುತ್ತಾರೆ, ಅಂಥದ್ದು ಮಾತ್ರ ಇಲ್ಲಿ ಚರ್ಚೆಯಾಗುತ್ತಿದೆ. ಗುಲ್ಬರ್ಗದಲ್ಲಿ ತೊಗರಿ ಬೆಳೆಗಾರರ ಏನು ಸಂಕಷ್ಟ ಇದೆ, ಅದರ ಬಗ್ಗೆ ಚರ್ಚೆಯಾಗುತ್ತಿಲ್ಲ ನಮ್ಮಲ್ಲಿ ಹಾರ್ಟಿಕಲ್ಚರ್ ಟ್ರೈನಿಂಗ್ ಸೆಂಟರ್ ಕಳೆದ 30 ವರ್ಷಗಳಿಂದ ಚಿಂಚೋಳಿಯ ಚಂದ್ರಪಳ್ಳಿಯಲ್ಲಿತ್ತು. ಅದನ್ನು ಏಕಾಏಕಿ ತೆಗೆದು ಬಿಟ್ಟಿದ್ದಾರೆ. ಅದನ್ನು ತೆಗೆದು ಮುನಿರಾಬಾದ್‌ಗೆ ಹಾಕಿದ್ದಾರೆ. ಬೀದರ್ ಮತ್ತು ಗುಲ್ಬರ್ಗಾ ರೈತರಿಗೆ ಏನು ಸೆಂಟರ್ ಇತ್ತು ಅದನ್ನು ಏಕಾಏಕಿ ತೆಗೆದು ಬಿಟ್ಟಿದ್ದಾರೆ. ಬೀದರ್–ಗುಲ್ಬರ್ಗಾ ರೈತರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಇಂಥ ಅನೇಕ ವಿಷಯಗಳ ಬಗ್ಗೆ ನಾನು ಮಾತನಾಡಬೇಕು ಎಂದರೆ ಮೊನ್ನೆ ನನಗೆ ಅವಕಾಶ ಸಿಕ್ಕಲಿಲ್ಲ, ತಾವು ಅವಕಾಶ ಕೊಟ್ಟಿದ್ದೀರಿ ಈಗ 371 ರ ಬಗ್ಗೆ ಚರ್ಚೆ ಮಾಡಲಿಕ್ಕೆ ಸಪರೇಟ್ ಟೈಂ ಕೊಟ್ಟಿದ್ದಾರೆ, ಅದರ ಬಗ್ಗೆ ನಂತರ ಮಾತನಾಡುತ್ತೇನೆ, ಇದರ ಬಗ್ಗೆ ಮಾತನಾಡಲಿಕ್ಕೆ ತಾವು ನನಗೆ ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11. ಪ್ರಕಟಣೆ

ವಿಧಾನ ಪರಿಷತ್ ಸಭಾಪತಿಯವರಿಂದ ಬಂದ ಸಂದೇಶ

ಛೇರ್ಮನ್: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ. "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 188 ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು, 2005 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

12.ವಿತ್ತೀಯ ಕಾರ್ಯಕಲಾಪಗಳು

2004–05ನೇ ಸಾಲಿನ ಪೂರಕ ಅಂದಾಜುಗಳ(ಎರಡನೆಯ ಕಂತು) ಮುಂದುವರಿದ ಚರ್ಚೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಛೇರ್ಮನ್‌ರವರೆ, ಭಾರತ ಸಂವಿಧಾನದ 205 (1)ನೇ ಅನುಚ್ಛೇದದ ಮೇರೆಗೆ 2004–2005ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತು) ಇದನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅನುಬಂಧ-1

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಛೇರ್ಮನ್‌ರವರೆ, ಈ ಪೂರಕ ಅಂದಾಜುಗಳನ್ನು ಅನಿವಾರ್ಯವಾಗಿ ವಿರೋಧ ಮಾಡಲೇಬೇಕಾಗಿದೆ. ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಅನೇಕ ಕ್ಷೇತ್ರಗಳಲ್ಲಿ ಒತ್ತಡಗಳು ಬಂದು, ಎಮರ್ಜೆನ್ಸಿ, ಎಕ್ಸ್‌ಜೆನ್ಸಿ ಬಂದು, ಸಪ್ಲಿಮೆಂಟರಿ ಡಿಮಾಂಡ್ಸ್‌ನ್ನು ಕೊಡಬೇಕಾಗುತ್ತದೆ. ಸರ್ಕಾರ ನಡೆಸಬೇಕಾದರೆ, ಅದು ಆಗುವುದಿಲ್ಲವೆಂದು ಹೇಳಿ ಅಂದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಇಷ್ಟೊಂದು ಪ್ರಮಾಣದಲ್ಲಿ 938.708 ಕೋಟಿ ರೂ. ಸೆಂಟ್ರೇಲ್ ಸ್ಕೀಂದು ಹೋಗಿ, 700 ಚಿಲ್ಲರೆ ಕೋಟಿ ರೂ ಪೂರಕ ಅಂದಾಜುಗಳನ್ನು ಬಹುಶಃ ಈ ಸದನದ ಇತಿಹಾಸದಲ್ಲಿ ಯಾವತ್ತೂ ಮಂಡಿಸಿರಲಿಲ್ಲವೇನೋ ಎಂದು ನಾನು ಅಂದುಕೊಳ್ಳುತ್ತೇನೆ. ಬಜೆಟ್ ಅಂಗೀಕಾರ ಆಗಿ ಕೇವಲ 4–5 ತಿಂಗಳಾಗಿಲ್ಲ. ರಾಜ್ಯ ಸರ್ಕಾರದ ಆರ್ಥಿಕ ವ್ಯವಸ್ಥೆಯಲ್ಲಿ ಶಿಸ್ತು ಇರಬೇಕಾಗುತ್ತದೆ. ಆ ಶಿಸ್ತಿನ ಪಾಲನೆ ಕೂಡ ಆಗಬೇಕಾಗುತ್ತದೆ, ಆ ಪಾಲನೆ ಆದರ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನ್ನು ಈ ಪ್ರಮಾಣದಲ್ಲಿ ಬರುವುದಿಲ್ಲವೆಂಬುದು ನನ್ನ ಭಾವನೆ. ಸಪ್ಲಿಮೆಂಟರಿ ಎಸ್ಟಿಮೆಂಟ್ಸನು ಯಾವುದೇ ಫೈನಾನ್ಸ್ ಮಿನಿಸ್ಟರ್ ಕೇಳುವಂಥ ಸ್ಥಿತಿಯನ್ನು ತಂದುಕೊಳ್ಳಬಾರದು ಎಂಬುದು ನನ್ನ ಅನಿಸಿಕೆ. ಈಗ ಸುನಾಮಿ ಬಂತು ಕೇಳಲೇಬೇಕು, ಈಗ ಯಾವುದೋ ಒಂದು ದೊಡ್ಡ ಉದ್ದೇಶದಿಂದ ದಿಢೀರ್ ಎಂದು ಕೊಡಬೇಕಾಗಿತ್ತು, ಅಂಥದ್ದನ್ನು ನಾವು ಬೇಡ ಎಂದರೆ ಬಹುಶಃ ನಮಗೆ ಗೌರವ ಬರುವುದಿಲ್ಲ. ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಎಲ್ಲಾ ಕ್ಷೇತ್ರದಲ್ಲಿ ಬಜೆಟ್ ಎಂದು ಈ ರಾಜ್ಯಕ್ಕೆ ನೀವು ಬಜೆಟ್ ಇಟ್ಟು, ಬಜೆಟ್‌ನಲ್ಲಿ ನೀವು ಪ್ರಾವಿಜನ್ ಮಾಡದೆ, ಈಗ ಅಲ್ಲಿ ಜಾಸ್ತಿ ಕೊಟ್ಟಿದ್ದೇನೆ, ಇಲ್ಲಿ ಜಾಸ್ತಿ ಕೊಟ್ಟಿದ್ದೆನೆ, ಎಂದು ಹೇಳುವುದು, ಸದನಕ್ಕೆ ಅಷ್ಟೊಂದು ಗೌರವ ತರುತ್ತೆ ಎಂದು ಭಾವಿಸುವುದಕ್ಕಾಗುವುದಿಲ್ಲ. ತಮಗೆ ಗೊತ್ತಿತ್ತು, ಮೂರು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುವ ಸ್ಕೀಂ, ನೀವು ಬಜೆಟ್‌ನಲ್ಲಿ ಹೇಳಿಬಿಟ್ಟಿದ್ದಿರಿ, But nothing prevented you in making a provision in the budget. ಅವತ್ತು ಪ್ರಾವಿಜನ್ ಮಾಡಲಿಕ್ಕೆ ನಿಮಗೇನೂ ಅಡಚಣೆಗಳು ಇರಲಿಲ್ಲ. ಪ್ರಾವಿಜನ್ ಮಾಡಿಕೊಂಡಿರಲಿಲ್ಲ ಎನ್ನುವುದಕ್ಕೆ ತಾವೇ ಹೊಣೆ ಹೊರತ್ತು ಈ ಸದನ ಹೊಣೆಯಲ್ಲ. ಈ ಸದನದಲ್ಲಿ ಹೇಳಿರುವಂಥ ಯೋಜನೆ ಅದು, ಈಗ ದಿಢೀರ್ ಎಂದು ನಾನು 300 ಕೋಟಿ ರೂ ಅಲ್ಲಿ ಕೊಡಬೇಕಾಯಿತು ಎಂದು ನೀವು ಹೇಳುತ್ತೀರಿ. ಅದರ ಜೊತೆಗೆ ರಸ್ತೆಗಳದ್ದು, ನಾವು ಪದೇ ಪದೇ ಕೇಳುತ್ತಾ ಬಂದೆವು, 3054 ಹೆಡ್'ರ್ ಗ್ರಾಂಟ್ ಅನ್ನು ರದ್ದು ಮಾಡಿದಿರಿ, ಅದರಲ್ಲಿ ಕೊಡಬೇಕಾದ ಹಣವನ್ನು ಕೊಡಲಿಲ್ಲ, ಬಾಕಿಯೇ ಸುಮಾರು 250 ರಿಂದ 270 ಕೋಟಿ ರೂ ಇದೆ, ಅದಕ್ಕೆ ಏನಾದರೂ ಒಂದು ಉತ್ತರ ಹೇಳಿ ಎಂದರೆ ಅದಕ್ಕೆ ನೀವು ಉತ್ತರ ಹೇಳಲಿಲ್ಲ. 2054 ಹೆಡ್‌ನಲ್ಲಿ ಗುತ್ತಿಗೆದಾರರಿಗೆ ಇನ್ನೂ 151 ಕೋಟಿ ರೂಪಾಯಿಗಳನ್ನು ಇವತ್ತಿನ ವರೆಗೆ ಕೊಟ್ಟಿಲ್ಲ. ಆದರೆ, ಈಗ 151 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಈ ಶಾಸನ ಸಭೆಯಲ್ಲಿ ಉತ್ತರ ಕೊಟ್ಟಿದ್ದೀರಿ. ಮತ್ತೆ 2054 ಹೆಡ್‌ನ್ನು ರದ್ದು ಮಾಡಿ ಸಿ.ಎಂ.ಸಡಕ್ ಯೋಜನೆಯಿಂದ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೊರಟಿದ್ದೀರಿ. what is the justification? ಒಂದು ಕಡೆ ರಸ್ತೆಗಳು ಕಿಲೋಮೀಟರ್ ವ್ಯಾಪ್ತಿಯಲ್ಲಿ ರಿಪೇರಿಗೆ ಕೊಡುವುದಕ್ಕೆ ಇದ್ದಂಥ ಹೆಡ್‌ನ್ನು ರದ್ದು ಮಾಡಿ ಇನ್ನೊಂದು ಕಡೆ ಮುಖ್ಯಮಂತ್ರಿ ಸಡಕ್ ಯೋಜನೆ ಎಂದು

ಇಂಟ್ರಡ್ಯೂಸ್ ಮಾಡುತ್ತೀರಿ. ಸ್ಟೇಟ್ ಹೈವೆ, ಓ.ಡಿ.ಆರ್., ಎಂ.ಡಿ.ಆರ್. ವಿಲೇಜ್ ರೋಡ್ ಎಷ್ಟಿತ್ತೆಂಬ ಲೆಕ್ಕ ತೆಗೆದುಕೊಳ್ಳುವುದಿಲ್ಲ. ಆದರೆ, ನೀವು ಸಂವಿಧಾನದ ವಿರುದ್ಧವಾಗಿ ಅಲ್ಲಿ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡಿ ಅವರ ಅಧ್ಯಕ್ಷತೆಯಲ್ಲಿ ಕೊಡಬೇಕೆಂದು ತಾವು ಹೇಳುತ್ತೀರಿ. ಆದ್ದರಿಂದ, ಯಾರ ಮರ್ಜಿನಲ್ಲಿ ಈ ಶಾಸನಸಭೆಯಲ್ಲಿ ಕೆಲಸ ಮಾಡಬೇಕೆಂಬುದು ನಮಗೆ ಗೊತ್ತಾಗುತ್ತಿಲ್ಲ. ಮತ್ತೆ ಈ ಶಾಸನಸಭೆಯಲ್ಲಿ ಯಾರ ಮರ್ಜಿನಲ್ಲಿ ಬಜೆಟ್ ಪಾಸ್ ಮಾಡಬೇಕೆಂಬುದು ನನಗೆ ಗೊತ್ತಾಗುತ್ತಿಲ್ಲ. ಸಿ.ಎಂ. ಸಡಕ್ ಯೋಜನೆಯಿಂದ ಹಿಡಿದು ಪಿಡಬ್ಲ್ಯೂಡಿಗೆ ಹೊಸದಾಗಿ ಕೊಟ್ಟಿರತಕ್ಕಂಥ ಗ್ರಾಂಟ್‌ನ್ನೂ ಕೂಡ ಈ ಸಪ್ಲಿಮೆಂಟರಿ ಡಿಮಾಂಡ್ಸ್ ಕೇಳುತ್ತಿದ್ದೀರಿ ಇದಕ್ಕೆ ಖಂಡಿತಾ ಜಸ್ಟಿಫಿಕೇಶನ್ ಇಲ್ಲ. ಈ ಸಂದರ್ಭದಲ್ಲಿ ಹೃದಯ ನೊಂದು ಹೇಳುವುದೇನೆಂದರೆ, ಎರಡು ಅಥವಾ ಮೂರು ಜಿಲ್ಲೆಗೆ ಸಹಾಯ ಮಾಡುವುದಕ್ಕೋಸ್ಕರ ಸಪ್ಲಿಮೆಂಟರಿಗ್ರಾಂಟ್ಸ್‌ನ್ನು ಈ ಸದನದಲ್ಲಿ ಕೊಡಲಾಗಿದೆ ಎಂಬುದು ನನ್ನ ಭಾವನೆಗೆ ಬಂದಿದೆ. ಅದ್ದರಿಂದ, ಇದಕ್ಕೆ ಅವರು ಜಸ್ಟಿಫೈ ಮಾಡಬೇಕು. ಈ 200 ಕೋಟಿ ರೂಪಾಯಿಗಳನ್ನು ಎಲ್ಲೆಲ್ಲಿ ಉಪಯೋಗ ಮಾಡಲಾಗಿದೆ ಎಂಬುದನ್ನು ಮತ್ತು What was the energency?

ಸಮುದ್ರದ ತೀರಕ್ಕೆ ಏನಾದರೂ ಖರ್ಚು ಮಾಡಲಾಗಿದೆಯೆ ಅಥವಾ ಎಲ್ಲಿಯಾದರೂ ರಸ್ತೆ ಕಡಿದು ಬಿದ್ದಿರುವುದಕ್ಕೆ ಉಪಯೋಗ ಮಾಡಲಾಗಿದೆಯೆ? ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿಯೇ ಎರಡು-ಮೂರು ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಕೆಲಸ ಮಾಡುವುದಾದರೆ ನಮ್ಮನ್ನು ಇಲ್ಲಿಗೆ ಆಯ್ಕೆ ಮಾಡಿ ಕಳುಹಿಸಿರತಕ್ಕಂಥ ಜನರಿಗೆ ನಾವೇನು ಉತ್ತರ ಹೇಳಬೇಕು? ನಿಮ್ಮ ಹಣ ಇದ್ದಾಗ ಅಥವಾ ಹಣ ಬರುತ್ತದೆಂದು ನಿರೀಕ್ಷೆ ಇದ್ದಂಥ ಸಂದರ್ಭದಲ್ಲಿ ಇದಕ್ಕೆ ಬಜೆಟ್‌ನಲ್ಲಿ ಏತಕ್ಕೆ ಪ್ರಾವಿಜನ್ ಮಾಡಲಿಲ್ಲ? ನಮ್ಮ ಜನರಿಗೆ ನಾವೇನು ಉತ್ತರ ಹೇಳಬೇಕು? ಇವತ್ತಿನದಿವಸ ಈ ಸಪ್ಲಿಮೆಂಟರಿ ಬಿಲ್ಸ್‌ನ್ನು ತಾವು ಪಾಸ್ ಮಾಡುತ್ತಿದ್ದೇವೆ. What due respect, ಮಾನ್ಯ ಹಣಕಾಸಿನ ಸಚಿವರಿಗೆ ನಾನು ಗೌರವವನ್ನು ಕೊಡುತ್ತೇನೆ. ನಾನು ಈ ಸಂದರ್ಭದಲ್ಲಿ ಕೇಳುವುದೇನೆಂದರೆ, ನಮ್ಮ ಜನರಿಗೆ ಇವತ್ತಿನ ದಿವಸ ನಾವೇನು ಉತ್ತರ ಕೊಡಬೇಕೆಂಬುದನ್ನು ಮಾನ್ಯ ಹಣಕಾಸಿನ ಸಚಿವರು ಹೇಳಬೇಕು. ಈ ಸದನದ ಮುಂದೆ ಇದರ ಬಗ್ಗೆ ಒಂದು ಹೇಳಿಕೆ ಕೊಡಬೇಕು. ಪಿ.ಡಬ್ಲ್ಯೂ.ಡಿ. ಗೆ ನೀವು ಕೊಟ್ಟಿರತಕ್ಕಂಥ ಗ್ರಾಟ್ ಅನ್ನು ಎಲ್ಲೆಲ್ಲಿಗೆ ಖರ್ಚು ಮಾಡಿದ್ದೀರೆಂದು ಮತ್ತು ಯಾವ ಆಧಾರದ ಮೇಲೆ ಖರ್ಚು ಮಾಡಲಾಗಿದೆ ಎಂಬುದನ್ನು ಮತ್ತು ಯಾವ್ಯಾವ ತಾಲ್ಲೂಕುಗಳಿಗೆ ಎಷ್ಟು ಖರ್ಚು ಮಾಡಲಾಗಿದೆ ಎಂಬ ಮಾಹಿತಿ ಬೇಕು. ಒಂದು ಕಡೆ ಡಾ: ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ನಾವು ಗ್ರಾಂಟ್ ಕೊಡುತ್ತೇವೆಂದು ಹೇಳುತ್ತಾರೆ. ಮತ್ತೆ ಇನ್ನೊಂದು ಕಡೆ ಸಿ.ಆರ್.ಎಫ್. ಫಂಡ್‌ನ್ನು ಬೇರೆ ಜಿಲ್ಲೆಗೆ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಪಿ.ಡಬ್ಲ್ಯೂ.ಡಿ. ಗ್ರಾಂಟ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಬೇಡಿಕೆಯ ಮೇಲೆ ನೀವು ಎಸ್ಟಿಮೇಟ್ ಮಾಡದೆ ಈಗ ಸಪ್ಲಿಮೆಂಟರಿ ಡಿಮಾಂಡ್‌ನಲ್ಲಿ ಇಟ್ಟುಕೊಂಡು ಖರ್ಚು ಮಾಡಿ, ನಾವು ಬೇಕಾದ ಕಡೆ ಕೆಲಸ ಮಾಡಬಹುದೆಂದು ಅಥವಾ ಕೆಲಸ ಆಗಬೇಕಾದರೆ ನಾವು ಮಂತ್ರಿಗಳ ಕೈಕಾಲು ಹಿಡಿಯತಕ್ಕಂಥ ಪರಿಸ್ಥಿತಿಯನ್ನು ಈ ಸದನದಲ್ಲಿ ನಿರ್ಮಾಣ ಮಾಡುವುದಾದರೆ, ಇದೊಂದು ರಾಜ್ಯದ ಆಡಳಿತ ಎಂದು ಕರೆಸಿಕೊಳ್ಳುತ್ತದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. You must come out with the/facts, ಪಿ.ಡಬ್ಲ್ಯೂ.ಡಿ. ಗೆ ಇವತ್ತಿನ ದಿವಸ 200 ಕೋಟಿ ರೂಪಾಯಿ ಏನು ಗ್ರಾಂಟ್ ಕೊಟ್ಟಿದ್ದೀರಿ. . .

ಶ್ರೀ ಎ.ವಿ.ಉಮಾಪತಿ:– ಮಾನ್ಯ ಛೇರ್ಮನ್‌ರವರೆ, ಎಲ್ಲಾ ವಿಷಯದ ಮೇಲೂ ಇವರೇ ಹೆಚ್ಚು ಮಾತನಾಡುತ್ತಾರೆ. ಆದ್ದರಿಂದ ನಮಗೂ ಕೂಡ ಅವಕಾಶ ಕೊಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಈ ವಿಷಯದ ಬಗ್ಗೆ ನಾವೇ ಮಾತನಾಡಬೇಕು. ಮಾನ್ಯ ಉಮಾಪತಿಯವರೆ, ತಾವೂ ಕೂಡ ಅನಂತರ ಮಾತನಾಡಿ. ಬೇಡವೆಂದು ನಾವೇನೂ ಹೇಳುವುದಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಮಾನ್ಯ ಛೇರ್ಮನ್‌ರವರೆ, ಈ ಬಿಲ್ ಮೇಲೆ ಆಡಳಿತ ಪಕ್ಷದ ಅವರೆ ಮಾತನಾಡಲಿ, ನಾವೆಲ್ಲಾ ಕುಳಿತುಕೊಳ್ಳುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ಛೇರ್ಮನ್‌ರವರೆ, ನಾವು ಮಾತನಾಡಬಾರದೆಂದು ಬಾಯಿ ಕಟ್ಟುವುದಾದರೆ ನಾವೇಕೆ ಇಲ್ಲಿ ಕುಳಿತುಕೊಳ್ಳಬೇಕು? ಪಿ.ಡಬ್ಲ್ಯೂ.ಡಿ. ಗೆ ಸಪ್ಲಿಮೆಂಟರಿ ಡಿಮಾಂಡ್ಸ್‌ನಲ್ಲಿ ಹಣ ಕೊಡುತ್ತಿರುವುದಕ್ಕೆ What is the justification? What was the emergency? ಬಜೆಟ್‌ನಲ್ಲಿ ಇದಕ್ಕೆ ಏತಕ್ಕಾಗಿ ಪ್ರಾವಿಜನ್ ಮಾಡದೆ ಈಗ ದಿಢೀರ್ ಎಂದು ಖರ್ಚು ಮಾಡಿ ಇಲ್ಲಿಗೆ ಬಂದಿದ್ದೀರಿ ಎಂಬ ಬಗ್ಗೆ ಮಾಹಿತಿ ಕೊಡಬೇಕು. ಉಳಿತಾಯ ಯೋಜನೆಯ ಏಜೆಂಟ್ಸ್‌ಗೆ ಪ್ರೋತ್ಸಾಹ ಧನಕ್ಕೋಸ್ಕರ 20 ಕೋಟಿ ರೂ ಖರ್ಚು ಮಾಡುತ್ತಿದ್ದೀರಿ. ಇದರಲ್ಲಿ ತಾವು ಏನು ಹೇಳಿದ್ದೀರೆಂದರೆ, ಆಯವ್ಯಯದಲ್ಲಿ ಒದಗಿಸಿರತಕ್ಕಂಥ ಅನುದಾನ ಸಾಲದೇ ಇರುವುದರಿಂದ ಸಣ್ಣ ಉಳಿತಾಯ ಏಜೆಂಟರ ಪ್ರೋತ್ಸಾಹಧನ ಪಾವತಿಸಲು 20 ಕೋಟಿ ರೂಪಾಯಿ ಹೆಚ್ಚುವರಿ ಅನುದಾನದ ಅಗತ್ಯತೆ ಇದೆ ಎಂದು ಹೇಳಿದ್ದೀರಿ. ಇವತ್ತಿನದಿವಸ 20 ಕೋಟಿ ರೂಪಾಯಿಗಳಷ್ಟು ಅವರಿಗೆ ಕಮೀಷನ್ ಕೊಡುವಾಗ ನಿಮಗೆ ಎಷ್ಟು ಆದಾಯ ಬರುತ್ತದೆ? What is the income? what is the receipts out of that? ಸಣ್ಣ ಉಳಿತಾಯದಿಂದ ಇಷ್ಟು ಹಣವನ್ನು ಶೇಖರಣೆ ಮಾಡಿದ್ದು, ಅವರಿಗೆ 20 ಕೋಟಿ ರೂಪಾಯಿಗಳಷ್ಟು ಕಮೀಷನ್ ಕೊಡ ಬೇಕಾಗಿದೆ ಎಂಬುದನ್ನು ತಾವು ನಮಗೆ ಹೇಳಬೇಕಾಗುತ್ತದೆ. ಏಕೆಂದರೆ, ಇದು ಜಸ್ಟಿಫೈಡ್ ಆಗಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದನ್ನು ನಾವು ನೋಡಬೇಕಾಗುತ್ತದೆ. ಸಣ್ಣ ಉಳಿತಾಯ ಏಜೆಂಟ್‌ಗಳಿಗೆ 20 ಕೋಟಿ ರೂಪಾಯಿ ಕಮೀಷನ್ ಹಣವನ್ನು ರಾಜಸ್ವದಿಂದ ತೆಗೆದು ಕೊಡುತ್ತಿರುವಾಗ ಇದರಿಂದ ನಮ್ಮ ರಾಜ್ಯಕ್ಕೆ ಎಷ್ಟು ವರಮಾನ ಬಂದಿದೆ ಎನ್ನತಕ್ಕಂಥದ್ದನ್ನು ತಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮತ್ತೆ ಇದನ್ನು ಎಲ್ಲಿಂದ ಕೊಡುತ್ತೀರಂಬುದೂ ಕೂಡ ಗೊತ್ತಿಲ್ಲ. ಇನ್ನೊಂದು ವಿಷಯವನ್ನು ಬಹಳ ನೋವಿನಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಬೆಂಗಳೂರಿನಲ್ಲಿ ಇರುವ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳ ಸಂಘದವರ ಭವನ ಕಟ್ಟಿಕೊಳ್ಳುವುದಕ್ಕೆ ಇವರು 1 ಕೋಟಿ ರೂಪಾಯಿ ಕೊಡುತ್ತಿರುವುದು ಸರಿಯೆ? ಶಾಸಕರು ಸಾಯಂಕಾಲ ಸಮಯದಲ್ಲಿ ಒಂದು ಕಡೆ ಕುಳಿತುಕೊಳ್ಳುವುದಕ್ಕೆ ಎಲ್ಲಿ ಯಾದರೂ ಒಂದು ಕಡೆ ಜಾಗ ಮಾಡಿಕೊಡಿ ಎಂದು ಕೇಳಿದರೂ ಕೂಡ ಇದಕ್ಕೆ ತಾವು ಆಸಕ್ತಿ ತೋರಿಸುತ್ತಿಲ್ಲ. ಆದರೆ, ಇವತ್ತಿನದಿವಸ ಅಧಿಕಾರಿಗಳ ಸಂಘ ಮತ್ತು ಐ.ಎ.ಎಸ್. ಅಧಿಕಾರಿಗಳ ಸಂಘಕ್ಕೆ ಲಕ್ಷಾನುಗಟ್ಟಲೆ ಹಣವನ್ನು ಕೊಡುತ್ತಿದ್ದೀರಿ. ಇವರು ಟ್ಯಾಕ್ಸ್ ಕಟ್ಟತಕ್ಕಂಥ ಹಣದಲ್ಲಿ ಸ್ವಲ್ಪ ಕಾಂಟ್ರಿಬ್ಯೂಷನ್ ಹಾಕಿಕೊಂಡು ಅವರೆ ಅಸೋಸಿಯೇಷನ್ ಮಾಡಿಕೊಳ್ಳ ಬಹುದಾಗಿತ್ತು. ಇವತ್ತಿನದಿವಸ ಐಎಎಸ್ ಮತ್ತು ಕಮರ್ಷಿಯಲ್ ಇಲಾಖಾಧಿಕಾರಿಗಳ ಸಂಘಗಳಿಗೆ ನೀವು ಲಕ್ಷ ಅಥವಾ ಕೋಟಿ ರೂಪಾಯಿಗಳನ್ನು ಸ್ಟೇಟ್ ಎಕ್ಸ್‌ಚೆಕ್ಕರ್‌ನಿಂದ ಕೊಡುತ್ತಾ ಹೋಗುತ್ತಿದ್ದರೆ, ಇವತ್ತಿನದಿವಸ ಕುಡಿಯುವ ನೀರಿಲ್ಲ ಮತ್ತು ಬೋರ್‌ವೆಲ್ ವ್ಯವಸ್ಥೆಯಿಲ್ಲವೆಂದು ಸಾಯುತ್ತಿರುವ

ರೈತರಿಗೆ ಈ ಸರ್ಕಾರ ಮಾಡುತ್ತಿರುವ ನ್ಯಾಯ ಇದೇನಾ? ಇದನ್ನು ಯಾರಾದರೂ ಕೇಳಬೇಕಲ್ಲವೇ? ಮಾನ್ಯ ಸಿದ್ಧರಾಮಯ್ಯನವರಿಂದ ಇದನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. With due respect, ನೀವು ಅವರಿಗೆ 5, 10 ಲಕ್ಷ ರೂಪಾಯಿ ಕೊಡುತ್ತೀರೆಂದು ಇಡೀ ನನ್ನ ಜೀವಮಾನದಲ್ಲಿ ತಿಳಿದುಕೊಳ್ಳುವಂಥ ಪರಿಸ್ಥಿತಿಗೆ ಹೋಗುತ್ತಿರಲಿಲ್ಲ. ಇದನ್ನು ಕೊಡತಕ್ಕಂಥ ಸ್ಥಿತಿ ಏಕೆ ಬಂದಿತೆಂದೂ ಕೂಡ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ:– ಅನೇಕ ಸಾರಿ ಇಲ್ಲಿಂದ ಕೊಟ್ಟಾಗಲೆ ತಾವೆಲ್ಲಾ ಒಪ್ಪಿ ಕೊಂಡಿದ್ದೀರಿ. ಮೊದಲಿನಿಂದಲೂ ಕೊಡುತ್ತಾ ಬರಲಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಈ ಆರ್ಗನೈಜೇಷನ್ ಬಡವರದೇ ಎಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅಥವಾ ಇದು ಅಂಗವಿಕಲರು ಅಥವಾ ಶೆಡ್ಯೂಲ್ಡ್ ಕ್ಯಾಸ್ಟ್ ಅಥವಾ ಡೌನ್ ಟ್ರಾಡನ್ ಕ್ಯಾಸ್ಟ್‌ಗೆ ಸಂಬಂಧಪಟ್ಟದೆಯೆ? To whom you are supposed to pay government amount, subsidies? ಸರ್ಕಾರದ ಸಬ್ಸಿಡಿಯ ಹಣವನ್ನು ನಾವು ಯಾರಿಗೆ ಕೊಡಬೇಕಾಗಿತ್ತು? ಇವತ್ತಿನದಿವಸ ಅಂಗವಿಕಲರ ಶಾಲೆ ನಡೆಸತಕ್ಕಂಥವರಿಗೆ ಅಥವಾ ದಲಿತರನ್ನು ಉದ್ಧಾರಮಾಡುತಕ್ಕಂಥ ಕಾರ್ಯಕ್ರಮಗಳಿಗೆ ಹಣ ಕೊಟ್ಟರೆ ಯಾರು ಏನೂ ಹೇಳುವುದಿಲ್ಲ. ಒಂದು ಕ್ಷೇತ್ರಕ್ಕೆ ಎಸ್‌ಸಿ:ಎಸ್‌ಟಿ ಜನರಿಗೋಸ್ಕರ ಸುಮಾರು 17 ಅಥವಾ 18 ಬೋರ್‌ವೆಲ್ ಸ್ಯಾಂಕ್ಷನ್ ಮಾಡುತ್ತಿದುದ್ದನ್ನು ಈಗ ಹಣ ಇಲ್ಲವೆಂದು ಹೇಳಿ ಇದನ್ನು 8–9 ಬೋರ್‌ವೆಲ್‌ಗೆ ಇಳಿಸಿದ್ದೀರಿ. ಆದರೆ, ನೀವು ಇಲ್ಲಿ ಬಂದು ಲಕ್ಷ ಅಥವಾ ಕೋಟಿಗಟ್ಟಲೆ ಹಣವನ್ನು ಇಂಥವರಿಗೆ ಗ್ರಾಂಟ್‌ನ್ನು ರಿಲೀಜ್ ಮಾಡುವಂಥ ಅಭಿಯಾನವನ್ನು ನಾವು ಪಾಸ್ ಮಾಡಬೇಕು. ಇದರಿಂದ ನನಗೆ ಬಹಳ ನೋವಾಗುತ್ತಿದೆ. ಸುಮ್ಮನೆ ವಿರೋಧ ಮಾಡುವುದಕ್ಕೋಸ್ಕರ ನಾನು ನಿಂತುಕೊಂಡಿಲ್ಲ. ಇದು ಎಲ್ಲಿಗೆ ಹೋಗುತ್ತದೆ ಎಂಬುದೂ ಕೂಡ ನಮಗೆ ಗೊತ್ತಿಲ್ಲ. ಮತ್ತೆ ಬಳ್ಳಾರಿ ಜಿಲ್ಲೆಯ ವಿಶೇಷ ಪ್ಯಾಕೇಜ್ ಎಂದು ಗ್ರಾಂಟ್ ರಿಲೀಸ್ ಮಾಡಿದ್ದೀರಿ. ನೀವೇಕೆ ಇದಕ್ಕೆ ಕೊಟ್ಟಿದ್ದೀರಿ ಎಂದು ಕೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ, ಬಜೆಟ್ ಆದಮೇಲೆ ಆದಂಥ ಪ್ಯಾಕೇಜ್ ಅಲ್ಲ. ಒಂದು ವೇಳೆ ಆ ಪ್ಯಾಕೇಜ್‌ನಲ್ಲಿ ನಿಮ್ಮ ಕಮಿಟ್‌ಮೆಂಟ್ ಏನಾದರೂ ಇದ್ದಿದ್ದರೆ ಇದನ್ನು ಬಜೆಟ್‌ನಲ್ಲಿ ಏಕೆ ತರಲಿಲ್ಲವೆಂಬುದು ನನ್ನ ಪ್ರಶ್ನೆ. If at all you are committed to that package, Yes, you are the State Government. ಜನ ನಿಮಗೆ ವೋಟ್ ಕೊಟ್ಟಿದ್ದಾರೆ. ಆದ್ದರಿಂದ, ಯಾವ ಜಿಲ್ಲೆಗೆ ಪ್ಯಾಕೇಜ್ ಅಥವ ಯಾವ ಜಿಲ್ಲೆಯ ಅಭಿವೃದ್ಧಿಗೆ ಅದ್ಯತೆ ಕೊಡತಕ್ಕಂಥದ್ದು ಅಥವಾ ಯಾವ ಜಿಲ್ಲೆಗೆ ಅದ್ಯತೆ ಕೊಡುತ್ತಿಲ್ಲ ಎಂಬುದು ತಮ್ಮ ವಿವೇಚನೆಗೆ ಮತ್ತು ಜನರ ಮ್ಯಾಂಡೇಟರಿಗೆ ಬಿಟ್ಟ ವಿಚಾರವಾಗಿದೆ. I, as a member of this House, I have every right to know, way it was not included in the budget? ಇದನ್ನು ಬಜೆಟ್‌ನಲ್ಲಿ ಸೇರಿಸಿಕೊಳ್ಳುವುದಕ್ಕೆ ನೀವ್ಯಾಕೆ ವಿಫಲರಾಗಿದ್ದೀರಿ? ಅವತ್ತಿನದಿವಸ ನಿಮಗೆ ಇದು ಗೊತ್ತಿರಲಿಲ್ಲವೇ? ಅದು ಬಜೆಟ್‌ನಲ್ಲಿ ಪ್ರಕಟಗೊಂಡಂಥ ಪ್ಯಾಕೇಜ್ ಎಂದು ನನಗೆ ಗೊತ್ತಿದೆ. ಆದ್ದರಿಂದ, ಬಜೆಟ್‌ನಲ್ಲಿ ಸೇರಿಸಿಕೊಂಡು ಇದನ್ನು ಹೇಳಬೇಕಾಗಿತ್ತು. ಇದು ಎಲ್ಲಿಯವರೆಗೆ ಹೋಗುತ್ತದೆ ಎಂಬುದೂ ಕೂಡ ಗೊತ್ತಿಲ್ಲ. ಆದ್ದರಿಂದ, ದಯಮಾಡಿ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಮತ್ತೆ ಈ ಸಂದರ್ಭದಲ್ಲಿ ಹುಲಿಕೋಟೆಗೆ ಸಂಬಂಧಪಟ್ಟಂತೆ I demand an explaination. ಮಾನ್ಯ ಡಿ.ಆರ್.ಪಾಟೀಲ್‌ರವರು ಇವತ್ತಿನದಿವಸ ಅಧ್ಯಕ್ಷರ ಪೀಠದಲ್ಲಿದ್ದಾರೆ.

ಆದ್ದರಿಂದ ಒಂದು ವಿಷಯವನ್ನು ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಹುಲಿಕೋಟೆಯಲ್ಲಿರುವ ಪ್ರತಿಯೊಂದು ಸಹಕಾರಿ ಸಂಘ ಸಂಸ್ಥೆಗೆ ಮತ್ತು ಮಿಲ್‌ಗಳಿಗೆ ಎಷ್ಟು ಸರಕಾರಿ ಅನುದಾನ ಹೋಗಿದೆ ಎನ್ನತಕ್ಕಂಥ ಮಾಹಿತಿ ನಮಗೆ ಬೇಕು. ಕನಿಷ್ಠ 10 ಅಥವಾ 20 ವರ್ಷಗಳಿಂದ ಈ ರೀತಿಯಾದ ಗ್ರಾಂಟ್‌ಗಳನ್ನು ಎಷ್ಟು ಸಲ ಕೊಟ್ಟಿದ್ದೀರಿ ಎನ್ನತಕ್ಕಂಥ ಮಾಹಿತಿಯನ್ನು ತಾವು ಈ ಸಭೆಗೆ ಕೊಡಬೇಕು. ಅಲ್ಲಿ ಒಂದೇ ಒಂದು ನೂಲಿನ ಗಿರಣಿ ಅಥವಾ ಅಲ್ಲಿ ಒಂದೇ ಒಂದು ಕ್ಯಾಟಲ್ ಫೀಲ್ಡ್ ಪ್ಲಾಂಟ್ ಅಥವಾ ಅಲ್ಲಿ ಒಂದೇ ಒಂದು ಸಹಕಾರ ಸಂಸ್ಥೆ ಎಂದು ತಮ್ಮ ಭಾವನೆಯಲ್ಲಿದ್ದರೆ ಬೇರೆ ಎಲ್ಲವನ್ನೂ ಮುಚ್ಚಿಬಿಡಿ. If at all you take a decision to assist a co-operative society, assist the entire societies of the state ಇವತ್ತಿನದಿವಸ ನಮ್ಮ ಊರಿನಲ್ಲಿರತಕ್ಕಂಥ ಕಂಬಳಿ ಸೊಸೈಟಿ ಮುಚ್ಚಿ ಹೋಗುತ್ತಿದೆ. ಆದ್ದರಿಂದ ಅಲ್ಲಿಗೆ ಬಂದು ಹಣ ಕೊಟ್ಟು ಇದನ್ನು ರೀ ಜನರೇಟ್ ಮಾಡಿ. 103 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈ ಹಣ ನಿಮಗೆ ಎನ್‌ಸಿಡಿಸಿ ಯಿಂದ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಆದರೆ ನಾವು ಕೊಟ್ಟಿದ್ದೇವೆಂದು ಸುಮ್ಮನೆ ಕುಳಿತುಕೊಂಡು ಬಿಟ್ಟರೆ ಹೇಗೆ? ಇದರ ಬಗ್ಗೆ I demand an explanation from this government ಎಲ್ಲಿಯವರೆಗೆ ತಾವು ಗ್ರಾಂಟ್‌ನ್ನು ತೆಗೆದುಕೊಂಡು ಕೊಡುತ್ತೀರಿ ಎಂಬ ಪ್ರಶ್ನೆಗೆ ತಾವು ಉತ್ತರ ಹೇಳಬೇಕಾಗಿದೆ. ಮತ್ತೆ ಇವರು ವಸತಿ ಶಾಲೆಗಳಿಗೆ ಹೆಚ್ಚುವರಿ ಕಟ್ಟಡ ಕಟ್ಟುವುದಕ್ಕೆ ಆದ್ಯತೆ ಕೊಟ್ಟು ಈಗ ಅನುದಾನ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವತ್ತಿನದಿವಸ ಹಾಸ್ಟೆಲ್‌ಗಳಿಗೆ ಬಹಳ ಬೇಡಿಕೆ ಇದೆ. ಆದ್ದರಿಂದ, ವಸತಿ ಶಾಲೆಗಳನ್ನು ಕಟ್ಟುವುದಕ್ಕೋಸ್ಕರ ನೀವು ಖರ್ಚು ಮಾಡುವ ಬದಲು ಸ್ವಲ್ಪ ಹಾಸ್ಟಲ್ ಕಟ್ಟಡಗಳು ನಿರ್ಮಾಣ ಮಾಡುವುದಕ್ಕೂ ಗ್ರಾಂಟ್ ಕೊಡಬಹುದಾಗಿತ್ತೆಂದು ಮಾನ್ಯ ಸಿದ್ದರಾಮಯ್ಯ ನವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಎಲ್ಲಾ ತಾಲ್ಲೂಕುಗಳಲ್ಲಿ ಹಾಸ್ಟಲ್‌ಗಳಿಗೆ ಒತ್ತಡ ಜಾಸ್ತಿ ಆಗಿದೆ. ಮತ್ತೆ ಇವತ್ತಿನದಿವಸ ಹಾಸ್ಟೆಲ್‌ನಲ್ಲಿರುವ ಮಕ್ಕಳಿಗೆ ಸ್ಕಾಲರ್‌ಶಿಪ್ ಮತ್ತು ಫ್ರೀಶಿಪ್ ಕೊಡತಕ್ಕಂಥದ್ದು ಈಗ ಕಷ್ಟವಾಗಿದೆ. ಆದರೆ, ಇವತ್ತಿನದಿವಸ ಹಾಸ್ಟಲ್‌ನಲ್ಲಿರತಕ್ಕಂಥ ಸೀಟ್‌ಗಳನ್ನು ಜಾಸ್ತಿ ಮಾಡಿ ಅಡ್ಮಿಷನ್‌ನ್ನೂ ಕೂಡ ಜಾಸ್ತಿ ಮಾಡಿದ್ದರೆ ಅಲ್ಲಿರತಕ್ಕಂಥ ಶಾಲೆಗಳಿಗೆ ಸ್ಟ್ರೆಂಥ್ ಜಾಸ್ತಿ ಆಗುವುದಲ್ಲದೆ ಅಲ್ಲಿ ಮಕ್ಕಳನ್ನು ಜಾಸ್ತಿ ಸೇರಿಸಬಹುದಾಗಿತ್ತು. ಆದರೆ, ಇವತ್ತಿನದಿವಸ ಒಂದು ಕಡೆ ಇರತಕ್ಕಂಥ ಹಾಸ್ಟಲ್‌ಗಳು ಕೈವಶವಾಗುತ್ತಿದೆ ಮತ್ತು ಇರತಕ್ಕಂಥ ಶಾಲೆಗಳು ರದ್ದು ಆಗುವ ಸ್ಥಿತಿಗೆ ಬಂದಿದೆ. ಆದರೆ, ಈಗ ಒಂದೊಂದು ಯೋಜನೆಯಲ್ಲಿ ವಸತಿ ಶಾಲೆಗಳನ್ನು ಮಾಡುತ್ತೇವೆಂದು ತಾವು ಹೇಳತಕ್ಕಂಥದರಲ್ಲಿ ಅಗತ್ಯತೆ ಏನಿದೆ ಎಂಬುದು ನನಗೆ ಗೊತ್ತಿಲ್ಲ. ಇದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ. ರಾಜ್ಯದಲ್ಲಿ ತಾವು 6 ಶುಗರ್ ಫ್ಯಾಕ್ಟರಿಗಳನ್ನು ಐಡೆಂಟಿಫೈ ಮಾಡಿ ಇವುಗಳಿಗೆ ಕಾಯಕಲ್ಪ ನೀಡಬೇಕೆಂದು ಹೇಳಿ ಅವುಗಳಿಗೆ ನೀವು ಅನುದಾನವನ್ನು ಸಂಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಕೊಟ್ಟಿರುತ್ತೀರಿ. ಇದರಂತೆ ಬೇರೆ ಸಕ್ಕರೆ ಫ್ಯಾಕ್ಟರಿಗಳಿಗೂ ಕೊಡಬಹುದಾಗಿತ್ತು ಅಲ್ಲವೆ? ನಾವು ಬ್ರಹ್ಮಾವರ ಶುಗರ್ ಫ್ಯಾಕ್ಟರಿಗೆ ಕೇಳುತ್ತಿದ್ದೆವು.

ಕೆ.ಜಯಪ್ರಕಾಶ್ ಹೆಗ್ಡೆ: ಎಕ್ಸ್‌ಪೋರ್ಟ್ಸ್ ಸಬ್ಸಿಡಿ ಅಲ್ಲದೆ, ಶುಗರ್ ಫ್ಯಾಕ್ಟರೀಸ್‌ಗೆ ಕೂಡ ಕೊಟ್ಟಿದ್ದೀರಿ ನೋಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಏಕೆ ಕೊಟ್ಟಿರಿ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಕೊಡುವುದಾರೆ ಎಲ್ಲದ್ದಕ್ಕೂ ಕೊಡಿ, ಎಲ್ಲವನ್ನೂ ಒಂದೇ ತರಹ ಟ್ರೀಟ್ ಮಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಛೇರ್ಮನ್‌ರೆ, With due respects. ಕುಮಾರಿ ಜಯಲಲಿತಾರವರ ಕೇಸ್‌ನ್ನು ಬೆಂಗಳೂರಿನಲ್ಲಿ ನಡೆಸಬಾರದೆಂದು ನಮಗೇನೂ ಇಚ್ಛೆ ಇಲ್ಲ. If this is the safest place for the trial, ಅದಕ್ಕೆ ನಾವು ಏನೂ ಅಡ್ಡಿ ಮಾಡುವುದಿಲ್ಲ. ರಾಜ್ಯಸರ್ಕಾರ ಅದಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಲ್ಲಿ ನಿಮಗೆ ಕೇಂದ್ರ ಸರ್ಕಾರ ರೀಇಂಬರ್ಸ್‌ಮೆಂಟ್ ಮಾಡುತ್ತದೂ ಇಲ್ಲವೋ ಮಾಡುವುದಿಲ್ಲವೆಂದರೆ ನೀವು ಟ್ರಯಲ್ ಕಂಡಕ್ಟ ಮಾಡುವುದಿಲ್ಲವೆಂದು ಹೇಳಿ, ನಮಗೇನು ಆಗಬೇಕಾಗಿದೆ? 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ "ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ತೆಗೆದುಕೊಂಡು ಬಂದಾತಾಗುತ್ತದೆ. 50 ಲಕ್ಷ ರೂಪಾಯಿಗಳನ್ನು ನಾವು ಇವತ್ತು ಖರ್ಚುಮಾಡಿ ಕುಮಾರಿ ಜಯಲಲಿತಾರವರ ಕೇಸ್‌ನ್ನು ನೀವು ಬೆಂಗಳೂರಿನಲ್ಲಿ ನಡೆಸಬೇಕೆ ಸ್ವಾಮಿ? If it is reimbursable, please convey us. ಯಾವ ಸುಪ್ರೀಂಕೋರ್ಟ್ ನಿಮಗೆ ಬೆಂಗಳೂರಿನಲ್ಲಿ ನಡೆಸು ಎಂದು ಆದೇಶವನ್ನು ಕೊಟ್ಟಿತೋ ಅವರು ನಮಗೆ ಎಲ್ಲಿಂದಲಾದರೂ ಕೊಡಿಸಬೇಕಲ್ಲವೆ? ತಮಿಳುನಾಡಿನ ಕೊಳೆಯುಲ್ಲವನ್ನೂ ತೆಗೆದುಕೊಂಡು ಬಂದು ನಮ್ಮಗಳ ಹೆಗಲಮೇಲೆ ಎಳೆದುಕೊಳ್ಳಬೇಕಾಯಿತಲ್ಲವೆ? 50 ಲಕ್ಷ ರೂಪಾಯಿಗಳನ್ನು ನಾವು ಇವತ್ತು ಜುಡಿಷಿಯರಿಗೆ ರಿಲೀಸ್ ಮಾಡುತ್ತಿರುವುದು to conduct the case against Kum.Jayalalitha. ಇದು ನಮಗೆ ಬೇಕಾ? ಆ ಸ್ಥಿತಿನಲ್ಲಿ ನಾವು ಇದ್ದೇವಾ? ಕುಮಾರಿ ಜಯಲಲಿತಾರವರ ಕೇಸ್‌ನ್ನು ನಾವು ಬೆಂಗಳೂರಿನಲ್ಲಿ ನಡೆಸಬೇಕೆಂದು ಹೇಳಿ 50 ಲಕ್ಷ ರೂಪಾಯಿಗಳ ಅನುದಾನವನ್ನು ನೀವು ಏಕೆ ರಿಲೀಸ್ ಮಾಡುತ್ತಿದ್ದೀರಾ? ನನಗೆ ಗೊತ್ತಿಲ್ಲ. You tell Supreme Court. ಇದಕ್ಕೆ ಬರುವ ಹಣವನ್ನು ನೀವು ರೀ–ಇಂಬರ್ಸ್‌ಮೆಂಟ್ ಮಾಡಿ ಎಂದು ಕೇಳಿ ಸರ್, ಅದನ್ನು ಕೇಂದ್ರ ಸರ್ಕಾರದವರು ಕೊಡಲಿ. Federal structure, ಅಂದರೆ, ಈ ತರಹ ನೀವು ಕಷ್ಟ ಮಾಡಿಕೊಂಡು 50 ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳನ್ನು ಕಳೆದುಕೊಂಡು ಮೊನ್ನೆ ಆಂಧ್ರಪ್ರದೇಶದಲ್ಲಿ ಒಂದು ಮರ್ಡ್‌ರ್ ಕೇಸ್ ಆಗಿದೆ, ಅಲ್ಲಿ ಸೇಫ್ಟಿಯಿಲ್ಲ ಈ ಕೇಸ್‌ನ್ನು ನಡೆಸುವುದಕ್ಕೆ ಬೆಂಗಳೂರಿಗೆ ಶಿಫ್ಟ್ ಮಾಡುತ್ತೇವೆ, ಇನ್ನೊಂದು ದಿವಸ ಗೋವಾದಲ್ಲಿ ಅದೇ ತರಹ ಕೇಸ್ ಆಗುತ್ತದೆ, You tell us that, ತಾವು ಹೇಳಲಿಲ್ಲವೆ? ನಾನು ಸ್ಪಷ್ಟವಾಗಿ ನಿಮಗೆ ಕೇಳುತ್ತಿದ್ದೇನೆ, ಇದರಲ್ಲಿ ನೀವು ಹೇಳಬೇಕಾಗಿತ್ತು. ರೀ–ಇಂಬರ್ಸ್‌ಮೆಂಟ್ ಮಾಡುತ್ತದೆ, ಈಗ ಕೊಟ್ಟಿರುವ ಹಣ ನಾಳೆ ಬರುತ್ತದೆ ಎಂದರೆ ನನಗೆ ಅರ್ಥವಾಗುತ್ತಿತ್ತು. ಆದರೆ ತಾವು ಹೇಳಲಿಲ್ಲ. ಅಗತ್ಯ ಇರುವ ಅನುದಾನವನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿರುತ್ತೇವೆಂದು ಹೇಳಿದ್ದೀರಿ. ಇದನ್ನು ನೀವು ಎಲ್ಲಿಂದ ಯಾವ ಹೆಡ್‌ನಿಂದ ಯಾವ ಸರ್ಕಾರ ನಮಗೆ ರೀ–ಇಂಬರ್ಸ್‌ಮೆಂಟ್ ಮಾಡುತ್ತದೆ ಎಷ್ಟು ಪ್ರಮಾಣದಲ್ಲಿ ಮಾಡುತ್ತದೆ, ನಮ್ಮ ಕೋರ್ಟ್‌ಗಳಿಗೆ ನಾವು ಇವತ್ತು ಸೇಫ್ಟಿಗೋಸ್ಕರ ಮಾಡುವ ಎಲ್ಲಾ ಮೆಷರ್‌ಮೆಂಟ್‌ಗಳಿಗೆ ಮಾಡುತ್ತದೆಯೆ? ನಾವು ಕೊಡುವ ಪೋಲೀಸ್‌ಗೆ ಅಷ್ಟೇ ಮಾಡುತ್ತದೆಯೇ ಅವರು ಚೆನ್ನೈ ನಿಂದ ಇಲ್ಲಿಗೆ ಬಂದು ಹೋಗುವುದಕ್ಕೆ ಕೂಡ ವ್ಯವಸ್ಥೆಯನ್ನು ಮಾತ್ರ ಮಾಡುತ್ತದೆಯೇ? There are norms in Government of India. ಎಷ್ಟು ಪ್ರಮಾಣದಲ್ಲಿ ಅವರು

ರೀ–ಇಂಬರ್ಸ್‌ಮೆಂಟ್ ಮಾಡುತ್ತಾರೆನ್ನುವ ಬಗ್ಗೆ ನೀವು ನಮಗೆ ಹೇಳಬೇಕಲ್ಲವೆ? ಎಲ್ಲವನ್ನೂ ತುಂಬಿ ಕೊಡುತ್ತಾರೆಂದರೆ ನಮ್ಮದೇನೂ ತಕರಾರು ಇಲ್ಲ. ಎಲ್ಲಾ·ಇಂಡಿಯಾ ದೇಶದ ಮೇನ್ ಕ್ರಿಮಿನಲ್ ಕೇಸೆಸ್‌ಗಳನ್ನೆಲ್ಲಾ ಬೆಂಗಳೂರಿನಲ್ಲಿಯೇ ನಡೆಸಿ. ನಾವು ಏನೂ ಬೇಡವೆನ್ನುವುದಿಲ್ಲ. ದಯಮಾಡಿ ಈ ದೇಶದ ಬಡ ಬೋರೇಗೌಡನ ಹೆಸರಿನಲ್ಲಿ ಇವರನ್ನೆಲ್ಲಾ ಕರೆದುಕೊಂಡು ಬಂದು ಟ್ರಯಲ್‌ಗಳನ್ನು ಮಾಡಿಸಬೇಡಿ. ನಮಗೇನೂ ಈ ಸ್ಥಿತಿ ಬೇಕಾಗಿಲ್ಲ. ನಾವು ನೆಮ್ಮದಿಯಾಗಿದ್ದೇವೆ, ಬೆಂಗಳೂರು ಶಾಂತವಾಗಿದೆ ಎಂದರೆ, ಇಡೀ ಇಂಡಿಯಾದೇಶದ ಪಾತಕಿಗಳನ್ನೆಲ್ಲಾ ಕರೆಸಿ ಇಲ್ಲಿ ನೆಲೆ ಕೊಡಬೇಕು ಅವರ ಕೇಸ್‌ಗಳನ್ನೆಲ್ಲಾ ಬೆಂಗಳೂರಿನಲ್ಲಿ ನಡೆಸಬೇಕು ಎಂದು ನಾವು ಅಂದುಕೊಳ್ಳಬಾರದು. ದಯಮಾಡಿ ಇಂತಹ ವೆಚ್ಚಗಳನ್ನು ನೀವು ಮಾಡಬೇಕಾದರೆ, ನೀವು ಮೊದಲೇ ಗೌರ್ನಮೆಂಟ್ ಆಫ್ ಇಂಡಿಯಾಗೆ ಪತ್ರವನ್ನು ಬರೆಯಬೇಕು, No, we cannot incur any expenditure on this ಎಂದು ಹೇಳಬೇಕು. It is not our job. There is no statutory obligation on the part of the State Government to conduct the case. ಅವರು ಹೇಳಿದ್ದಾರೆಂದರೆ, they have their own security. ನಾವು ಏಕೆ ಸರ್ ಇದಕ್ಕೆ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು? ನಮಗೆ ಅರ್ಥವಾಗುತ್ತಿಲ್ಲ. ದಯಮಾಡಿ ಇಂತಹ ಅಭಿಯೊಚನೆಗಳನ್ನು ಮಾನ್ಯ ಸಿದ್ದರಾಮಯ್ಯನವರು ಕೈಬಿಡಬೇಕಾಗುತ್ತದೆ, ರೀ–ಇಂಬರ್ಸ್‌ಮೆಂಟ್ ಮಾಡಿಕೊಳ್ಳುವುದನ್ನು ಮಾಡಿಕೊಳ್ಳಬೇಕಾಗುತ್ತದೆ. ತಾವು ತಪ್ಪು ತಿಳಿದುಕೊಳ್ಳಬಾರದು, ನಿಮ್ಮ ಒಂದು ಕಾರ್ಯಕ್ರಮದ ಮೇಲೆ ನಾವು ಟೀಕೆಯನ್ನು ಮಾಡುವುದಿಲ್ಲ. ಸರ್ ನಮಗೆ ಒಂದು ಭಾವನೆ ಇದೆ, ನೀವು 3 ರೂಪಾಯಿಗಳಿಗೆ ಏನು ಅಕ್ಕಿಯನ್ನು ಕೊಟ್ಟಿದ್ದೀರಿ, ಅದರ ಬದಲಿಗೆ 6 ರೂಪಾಯಿಗಳ ಅಕ್ಕಿಯನ್ನು ಕೊಟ್ಟಿದ್ದೀರಿ, ಅದರ ಬದಲಿಗೆ 6 ರೂಪಾಯಿಗಳ ಅಕ್ಕಿಯನ್ನು ವಿಸ್ತಾರ ಮಾಡಿ ಇನ್ನೊಂದಿಷ್ಟು ಜನರಿಗೆ ಕವರ್ ಮಾಡಿದ್ದರೆ ಇವತ್ತು ಈ ಹಳದಿ ಕಾರ್ಡ್ ಹಸಿರು ಕಾರ್ಡ್‌ದು ಇಷ್ಟೊಂದು ಗೊಂದಲ ಸೃಷ್ಟಿಯಾಗುತ್ತಿರಲಿಲ್ಲ, ಈ ಸ್ಟೇಟಿನಲ್ಲಿ. ಖಂಡಿತಾ, I am giving you an example ಬಡವರಿಗೆ ಕೊಡಿ. ಬಡವರಿಗೆ 6 ರೂಪಾಯಿಗಳಿಗೆ ಏನು ಅಕ್ಕಿಯನ್ನು ಕೊಡುತ್ತಿದ್ದೀರಿ, ಅದರಲ್ಲಿಯೇ ನೀವು ಹೆಚ್ಚು ಬಡವರನ್ನು ಕವರ್ ಮಾಡಿದ್ದರೆ ಈಗ ಒಂದು ತಾಲ್ಲೂಕಿಗೆ 5 ಸಾವಿರ ಕಾರ್ಡ್‌ಗಳನ್ನು ಕಟ್ ಮಾಡಿ 6 ಸಾವಿರ ಕಾರ್ಡ್‌ಗಳನ್ನು ಕಟ್ ಮಾಡಿ ಅಲ್ಲಿಗೆ ಹೋಗುವುದು, ಇಲ್ಲಿಗೆ ಹೋಗುವುದು ನಿಮಗೆ ಕೊಡುವುದಿಲ್ಲವೆನ್ನುವ ಒಂದು ಸ್ಥಿತಿಯನ್ನು ನಿರ್ಮಾಣ ಮಾಡಿ ಏನು ಕಾರ್ಡ್‌ಗಳನ್ನು ಕೊಟ್ಟಿದ್ದೀರಿ, ಅವುಗಳನ್ನು ಹಿಡಿಯುವುದಕ್ಕೆ ಈಗ ಬಂದಿದ್ದೀರಿ 3 ರೂಪಾಯಿದು ಹೆಚ್ಚಿಗೆ ಕೊಡುವುದಕ್ಕೆ ನಿಮಗೆ ಶಕ್ತಿ ಇಲ್ಲದಿರುವುದರಿಂದ ನೀವು ಹಿಡಿಯುತ್ತಿರುವುದು. ಬಡವರಿಗೆ ಕೊಡಿ, ಮೊದಲಿನಿಂದ ಕಾರ್ಡ್ ಇರುವಂಥ ಎಲ್ಲರಿಗೂ ಕೊಡುವುದಾದರೆ ಕೊಡಿ. ಇಲ್ಲವೆಂದರೆ ಅದನ್ನೆ ನೀವು ಸ್ಪ್ರೆಡ್ ಮಾಡಿ 1 ಅಥವಾ 2 ರೂಪಾಯಿಗಳು ಇವತ್ತು ಭಾರವಾಗುವುದಿಲ್ಲ. ಎಲ್ಲಾ ಮನೆಗೂ 20 ಕೆಜಿ ಅಕ್ಕಿ ಬೇಕಾಗುವುದಿಲ್ಲ, ನಾವು ಒಂದಿಷ್ಟು ವೈಜ್ಞಾನಿಕವಾಗಿ ಮಾತನಾಡಬೇಕಾಗುತ್ತದೆ. ಒಂದು ಮನೆಯಲ್ಲಿ ಒಬ್ಬರು ಇದ್ದರೂ 20 ಕೆಜಿ, ಇಬ್ಬರಿದ್ದರೂ 20 ಕೆ.ಜಿ.ಅಕ್ಕಿ 3 ಜನ ಇದ್ದರೂ 20 ಕೆ.ಜಿ. 6ಜನ ಇದ್ದರೂ 20 ಕೆ.ಜಿ. ಅಕ್ಕಿ 15 ಜನ ಇದ್ದರೂ 20 ಕೆ.ಜಿ. ಅಕ್ಕಿ ಎಂದು ನಿಗದಿ ಮಾಡಿದ್ದೀರಿ, ಅದು ಏನು ವೈಜ್ಞಾನಿಕವಾದ ತೀರ್ಮಾನವೆಂದು ಅನಿಸುವುದಿಲ್ಲ. ದಯಮಾಡಿ ಯೋಚನೆ ಮಾಡಬೇಕು, ಮೊದಲು ಇದನ್ನೆಲ್ಲಾ ಮಾಡುತ್ತಿದ್ದರು. ಮೊದಲು ರೇಷನ್ ಕಾರ್ಡ್ ಕೊಡುತ್ತಿದ್ದೀರಿ,

number of persons in that family, ಕಾರ್ಡ್‌ನಲ್ಲಿ ಲೆಕ್ಕವನ್ನು ಹಾಕಿ ಗುರುತು ಹಾಕಿ ಕೊಡುವವರು. ಇಂತಿಷ್ಟು ಕೆ.ಜಿ. ಅಕ್ಕಿಯನ್ನು ಇವರಿಗೆ ಕೊಡಬೇಕು, ಈಗ ಕೊಡುತ್ತಿದ್ದಾರೆ, ಅದು ಅಗತ್ಯ ಇದೆಯೇ ಯೋಚನೆ ಮಾಡಿ. ಇವತ್ತು ಇಬ್ಬರಿದ್ದವರಿಗೆ 20 ಕೆ.ಜಿ. ಅಕ್ಕಿ ಬೇಕೇ ಎಂದು ಯೋಚನೆ ಮಾಡಿ, ನಾವು ಕೊಡಬಾರದೆಂದು ಹೇಳುವುದಿಲ್ಲ, Let it not be mis-used. ಆ ಮನೆಯಲ್ಲಿ ಇರುವ ಜನಗಳ ಆಧಾರದ ಮೇಲೆ ಎಲ್ಲರನ್ನೂ ಲೆಕ್ಕಾಚಾರ ಮಾಡಿ ನೀವು ಕೊಡಬೇಕು ಸಾರಾಸಗಟಾಗಿ ನೀವು ಇವತ್ತು 20 ಕೆ.ಜಿ. ಅಕ್ಕಿ ಕೊಡುವುದು ಎಂದು ನಿಗದಿ ಮಾಡುತ್ತೀರಿ. 20 ಕೆ.ಜಿ. ಅಕ್ಕಿ ಒಂದು ಫ್ಯಾಮಿಲಿಗೆ ಎಂದು ಹೇಳಿದ್ದೀರಿ. 15 ರಿಂದ 20 ಜನ ಇರುವವರಿಗೆ 20 ಕೆ.ಜಿ. ಅಕ್ಕಿ ಸಾಲುತ್ತದೆಯೆ? ಇಬ್ಬರು ಇರುವವರಿಗೆ 20 ಕೆ.ಜಿ. ಅಕ್ಕಿ ಬೇಕೇ ಈ ಕಡೆ ಇದರ ಬಗ್ಗೆ ಒಂದು ಆಲೋಚನೆಯನ್ನು ಮಾಡಿ ಇಂತಹ ಯೋಜನೆಗಳನ್ನು ತಾವು ತರಬೇಕಾಗಿತ್ತು. ಈಗ ನಾನು ಕೇಳುವುದು, ಈಗ ನನ್ನ ಅನುಭವದಲ್ಲಿ ಆಗಿರುವುದು, 3 ರೂಪಾಯಿಗಳ ಅಕ್ಕಿಗಿಂತ ನೀವು 6 ರೂಪಾಯಿ ಅಕ್ಕಿಯನ್ನು ಕೊಟ್ಟು ಇನ್ನೊಂದಿಷ್ಟು ಫ್ಯಾಮಿಲಿಗಳನ್ನು ಇದರಲ್ಲಿ ಒಳಪಡಿಸಿದ್ದರೆ ಈ ರಾಜ್ಯ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತಿತ್ತು. ಗ್ರಾಮೀಣ ಪ್ರದೇಶದಲ್ಲಿ ಏನು ಇವತ್ತು ಬಹಳ ಸಂಘರ್ಷ ಆರಂಭವಾಗಿದೆ, ಇದಕ್ಕೆ ಒಂದು ಮುಕ್ತಾಯ ಆಗುತ್ತಿತ್ತು. 6 ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿ ತೆಗೆದುಕೊಳ್ಳುವುದು ಏನೂ ಬಹಳ ದುಬಾರಿ ಆಗುವುದಿಲ್ಲ. ಇವತ್ತು ತಾವು ಮಿನಿಮಮ್ ವೇತನವನ್ನು 62–63 ರೂಪಾಯಿಗಳೆಂದು ನಿಗದಿ ಮಾಡಿದ್ದೀರಿ. ಒಂದು ದಿವಸ ಕೂಲಿ ಮಾಡುವವರಿಗೆ 10 ಕೆ.ಜಿ. ಅಕ್ಕಿ ಬರುತ್ತದೆ. ಇಂದು ಆ ಸ್ಥಿತಿ ಇದೆ. 6 ರೂಪಾಯಿಗಳಿಗೆ ಕೊಡಲಾರದಂಥ ಸ್ಥಿತಿ ಈ ರಾಜ್ಯಕ್ಕೆ ಇರಲಿಲ್ಲ. ನೀವು ಪ್ರಚಾರಕ್ಕೋಸ್ಕರ 3 ರೂಪಾಯಿಗಳಿಗೆ ಮಾಡುತ್ತೇವೆಂದರೆ ಅದು ನಿಮ್ಮಿಷ್ಟ. ಫ್ರೀಯಾಗಿ ಆದರೂ ಕೊಡಿ ಬಡವರಿಗೆ ಕೊಡುವ ಅಕ್ಕಿ ನಾವು ಏಕೆ ಬೇಡ ಎನ್ನಬೇಕು? ಒಂದು ಸಲ ನೀವು ಆಲೋಚನೆಯನ್ನು ಮಾಡಿ, ಜಾಸ್ತಿ ಜನರನ್ನು ಕವರ್ ಮಾಡಿ, ಇಷ್ಟೇ ಸಬ್ಸಿಡಿ ಹಣದಲ್ಲಿ, ಎಂದು ನಾವು ಕೇಳಿಕೊಂಡು, ಇದು ಸರಿಯಾದ ವರ್ತನೆಯಲ್ಲ. 900 ಕೋಟಿ ರೂಪಾಯಿ ಕೇಳುವುದು 700 ಕೋಟಿ ರೂಪಾಯಿ ಭಾರತ ಸರ್ಕಾರಕ್ಕೆ ರೀ–ಇಬರ್ಸ್‌ಮೆಂಟ್ ಮಾಡುವುದನ್ನು ಬಿಟ್ಟು 700 ಕೋಟಿ ರೂಪಾಯಿಗಳಿಗೆ ನೀವು ಅಪ್ರೂವಲ್ ಕೊಡಿ ಎಂದು ಬಜೆಟ್ ಆದ 3–4 ತಿಂಗಳಲ್ಲಿ ಈ ಮಟ್ಟದ ಸಪ್ಲಿಮೆಂಟ್‌ರಿ ಎಸ್ಟಿಮೇಟ್‌ನ್ನು ಸದನಕ್ಕೆ ತರುವ ಸ್ಥಿತಿ ಖಂಡಿತವಾಗಿ ಬರಬಾರದು. ನಾನು ಬಹಳ ನಿಖರವಾಗಿ ಹೇಳುತ್ತಿದ್ದೇನೆ. ತಾವು ಇವತ್ತು ಏನು ಆಫೀಸರ್ಸ್‌ಗಳನ್ನು ಓಲೈಸುವುದಕ್ಕೋಸ್ಕರ ಮಾಡುತ್ತಿದ್ದೀರಿ, ದಯಮಡಿ ಅದನ್ನು ಕೈಬಿಡಬೇಕು. ಇವರ್ಯಾರು ಬಡವರು ಅಲ್ಲ, ಇವರಿಗೆ ಇದೊಂದೇ ಕ್ಲಬ್ ಅಲ್ಲ. ಬೆಂಗಳೂರಿನಲ್ಲಿರುವ ಯಾವ್ಯಾವ ಕ್ಲಬ್‌ನಲ್ಲಿ ಐಎಎಸ್ ಆಫೀಸರ್ಸ್‌ಗಳು ಮೆಂಬರ್ ಅಲ್ಲ ಎಂಬ ಬಗ್ಗೆ ನಾನು ಇದನ್ನು ಪ್ರೂವ್ ಮಾಡುತ್ತೇನೆ. ಹೇಳಿ, ಇದ್ದಾರೆಂದು ಒಂದು ಲಿಸ್ಟ್‌ನ್ನು ತಾವು ಇಟ್ಟುಬಿಡಿ. ಎಷ್ಟು ಕ್ಲಬ್‌ಗಳಲ್ಲಿ ಇವರಿಗೆ ಮೆಂಬರ್‌ಶಿಫ್ ಇದೆ. ಟರ್ಫ್‌ಕ್ಲಬ್‌ನಿಂದ ಹಿಡಿದು ಕರ್ನಾಟಕ ಕ್ರಿಕೆಟ್ ಅಸೋಸಿಯೇಶನ್‌ನವರೆಗೆ, ಸೆಂಚುರಿ ಕ್ಲಬ್‌ವರೆಗೆ ಬೆಂಗಳೂರು ಕ್ಲಬ್‌ನಿಂದ ಗಾಲ್ಫ್‌ಕ್ಲಬ್‌ನಿಂದ ದಯಮಾಡಿ ಒಂದು ಪಟ್ಟಿಕೊಡಿ, ಯಾರ್‍ಯಾರು ಮೆಂಬರ್ ಅಲ್ಲವೆಂದು ಇಲ್ಲಿ ಪ್ರೂವ್ ಆಗಲಿ. ಎಷ್ಟು ಕ್ಲಬ್‌ಗಳಲ್ಲಿ ಇವರಿಗೆ ಮೆಂಬರ್‌ಶಿಫ್ ಬೇಕು. ವಿಜಯನಗರ ಕ್ಲಬ್ ಕೂಡ ನಿಮ್ಮ ಐಎಎಸ್ ಮತ್ತು ಕೆಎಎಸ್ ಆಫೀಸರ್ಸ್‌ಗಳೆ ಸ್ಟಾರ್ಟ್ ಮಾಡಿದ್ದು. ಇವರು ಎಷ್ಟು ಕ್ಲಬ್‌ನ್ನು ಮಾಡಿಕೊಳ್ಳುತ್ತಾರೆ, ಈ ಕ್ಲಬ್‌ಗಳಿಗೆ ಸರ್ಕಾರದಿಂದ ನೀವು ಏಕೆ ಅನುದಾನವನ್ನು ಕೊಡುವ

ಸ್ಥಿತಿಗೆ ಬಂದಿದ್ದೀರಿ, ನಮಗೆ ಅರ್ಥವಾಗುತ್ತಿಲ್ಲ. ಲೆಜಿಸ್ಲೇಟರ್ಸ್‌ಗಳು ಎಲ್ಲಿಯಾದರೂ ಕುಳಿತುಕೊಳ್ಳುತ್ತೇವೆಂದಾಗ ಅದರ ಬಗ್ಗೆ ನಿಮಗೆ ಕಷ್ಟವಾಗುತ್ತದೆ. ಏನು ಸರ್ ಇದು, What is the difference? ಶಾಸಕರ ಸ್ಥಿತಿಗೂ ಐಎಎಸ್ ಆಫೀಸರ್ಸ್‌ಗಳ ಸ್ಥಿತಿಗೂ ತಮಗೇ ವ್ಯತ್ಯಾಸ ಗೊತ್ತಿಲ್ಲವೆ? ಬೆಂಗಳೂರಿಗೆ ಬಂದಾಗ ಒಂದು ಸಾಯಂಕಾಲ ಕುಳಿತುಕೊಳ್ಳಬೇಕೆಂದರೆ, ನಿಮ್ಮ ಆಫೀಸರ್ಸ್ ಹೇಳುತ್ತಾರೆ, ಹಾಗೆಲ್ಲಾ ಜಾಗವನ್ನು ಕೊಡುವುದಕ್ಕಾಗುವುದಿಲ್ಲ. ಇವರು ಪಾತಕಿಗಳು ಅವರು ಕುಳಿತುಕೊಂಡರೆ ಹಾಗೆ ಆಗಿಬಿಡುತ್ತದೆ ಹೀಗೆ ಆಗಿ ಬಿಡುತ್ತದೆ, ನಾವು ಮಾತ್ರ ಈ ದೇಶದ ಪ್ರತಿಷ್ಠಿತ ಜನ ಎಂದು ಅನ್ನುವವರಿಗೆ ಎಷ್ಟು ಕ್ಲಬ್ ನೀವು ಮಾಡುತ್ತೀರಿ. ಕೆಎಎಸ್ ಆಫೀಸರ್ಸ್‌ಗೆ ಕ್ಲಬ್, ಐಎಎಸ್ ಆಫೀಸರ್ಸ್‌ಗಳಿಗೆ ಕ್ಲಬ್ ನೀವು ಮಾಡುತ್ತೀರಿ. ಕೆಎಎಸ್ ಆಫೀಸರ್ಸ್‌ಗೆ ಕ್ಲಬ್, ಐಎಎಸ್ ಆಫೀಸರ್ಸ್‌ಗಳಿಗೆ ಕ್ಲಬ್, ಇವರು ಕೆಎಸ್‌ಐಸಿ ನಲ್ಲಿ ಮೆಂಬರ್‌ಗಳು. ಈ ಊರಿನಲ್ಲಿರುವ ಎಲ್ಲಾ ಮೇಜರ್ ಕ್ಲಬ್‌ಗಳಲ್ಲಿ ಇವರಿಗೆ ಮೆಂಬರ್‌ಶಿಫ್ ಇದೆ. ಕೆಲವರು ಎಕ್ಸ್ ಆಫಿಷಿಯೊ ಮೆಂಬರ್‌ಗಳಾಗಿದ್ದಾರೆ. ಇದನ್ನು ದಯಮಾಡಿ ನಿರ್ಬಂಧ ಮಾಡಬೇಕು. ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್‌ಗಳಿಗೆ ನೀವು ಅವರ ಅಸೋಸಿಯೇಶನ್‌ಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ ಇದು ನಿಜವಾಗಲೂ ಒಂದು ಒಳ್ಳೆಯ ಕಾರ್ಯಕ್ರಮವಲ್ಲ. ಈ ರಾಜ್ಯದ ಒಬ್ಬ ರೈತರ ಪರವಾಗಿ ಇರುವಂಥ ಒಬ್ಬ ಫೈನಾನ್ಸ್ ಮಿನಿಸ್ಟರ್‌ಗೆ ಘನತೆ ತರುವಂಥದ್ದು ಅಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಮಾನ್ಯ ಛೇರ್ಮನ್‌ರೆ, ನಾನು ನೊಂದು ಒಂದು ಮಾತನ್ನು ಹೇಳುತ್ತೇನೆ. ಪೂರಕ ಬಜೆಟ್‌ನ್ನು ಇಲ್ಲಿ ಇಟ್ಟಿದ್ದೀರಿ. ನಾನು ಇಲ್ಲಿ ಕುಳಿತುಕೊಂಡಿದ್ದೆ, ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದೆ, ಮಾನ್ಯ ಮಾಧುಸ್ವಾಮಿಯವರು ಮಾತನಾಡಲು ಎದ್ದು ನಿಂತರು. ನಾನು ಹೇಳುವಂಥದ್ದು, ಇಲ್ಲಿ ಒಂದು ಸಂಪ್ರದಾಯ ಇದೆ, ನಾನು ಮಾತನಾಡುವುದಿಲ್ಲವೆಂದು ಹೇಳಿದ್ದೇನಾ? ನಾವು ಧಾರಾಳ ಮನಸ್ಸಿನಿಂದ ಎಲ್ಲಾ ಪ್ರತಿಪಕ್ಷದವರು ಹೊಂದಿಕೊಂಡು ಕೆಲಸ ಮಾಡಬೇಕೆಂದು ಅಪೇಕ್ಷೆಪಟ್ಟರೆ, ನಿಮ್ಮ ಎಲ್ಲಾ ಅಧಿಕಾರವನ್ನು ಚಲಾವಣೆ ಮಾಡಿ ಪ್ರತಿಪಕ್ಷದ ನಾಯಕರಿಗೆ ಮಾತನಾಡಲು ಅವಕಾಶವನ್ನು ಕೊಡದೆ ಇದ್ದರೆ, ನನಗನಿಸುತ್ತದೆ, ಇದು ಎಲ್ಲೋ ಒಂದು ಕಡೆ ತುದಿಗೆ ಹೋಗಿ ಮುಟ್ಟುತ್ತಿದೆ, ವ್ಯವಸ್ಥೆಯನ್ನು ಏನೋ ಮಾಡುವುದಕ್ಕೆ ಹೊರಟ್ಟಿದ್ದೀರಿ. No, I am very sorry.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಛೇರ್ಮನ್‌ರೆ, ಬೆಳಿಗ್ಗೆ ಇದರ ಬಗ್ಗೆ ನಾನು ಚರ್ಚೆಯನ್ನು ಆರಂಭ ಮಾಡಬೇಕೆಂದು ಇದ್ದೆ, ಅದಕ್ಕಾಗಿ ಎದ್ದು ನಿಂತು ಮಾತನಾಡಿದ್ದೇನೆ. ಇದರಲ್ಲಿ ಏನೂ ತಪ್ಪಾಗಿರುವುದಿಲ್ಲ. ಬಿಲ್‌ಗಳ ಮೇಲೆ ಎಸ್ಟಿಮೇಟ್ ಮೇಲೆ ಮಾತನಾಡಬಾರದಾ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಛೇರ್ಮನ್‌ರಿಗೆ ನಾನು ಹೇಳುತ್ತಿದ್ದೇನೆ, ಯಾರೂ ಮಾತನಾಡಬೇಡಿ ಎಂದು ನಾನು ಹೇಳಲಿಲ್ಲ. ನಾನು ಮಾನ್ಯ ಛೇರ್ಮನ್‌ರಿಗೆ ಇದರ ಬಗ್ಗೆ ಹೇಳುತ್ತಿದ್ದೇನೆ. ನಾನು ಅವರ ಹತ್ತಿರ ಮಾತನಾಡುತ್ತಿಲ್ಲ. ಕೆಲವು ತನ್ನದೇ ಅದ ಪದ್ಧತಿಗಳು ಇದ್ದಾವೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಛೇರ್ಮನ್‌ರೆ, ಇಂತಹ ವಿಷಯಗಳು ಬೇಕಾದಷ್ಟು ಸಲ ನಡೆದಿವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗಲೂ ಕೂಡ ನಾವು ಅನೇಕ ಸಲ ಮಾತನಾಡಿದ್ದೇವೆ. ಇದರಲ್ಲಿ ಹೊಸದೇನೂ ಅಗಿಲ್ಲವಲ್ಲಾ.

ಶ್ರೀ ಡಿ.ಮಂಜುನಾಥ್(ಉನ್ನತ ಶಿಕ್ಷಣ ಸಚಿವರು): ಮಾನ್ಯ ಛೇರ್ಮನ್‌ರೆ, ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಛೇರ್ಮನ್‌ರೆ, ನಾನು ಹೇಳುವಂಥದ್ದು, ಯಾವುದು take it for granted ಅಂಥ ಆಗುವುದಿಲ್ಲ. ಕೆಲವು ಪದ್ಧತಿಗಳನ್ನು ಇಲ್ಲಿ ಅನುಸರಿಸಬೇಕಾಗುತ್ತದೆ. ನಾನು ಮುಂಚೆ ಮಾತನಾಡುತ್ತೇನೆಂದು ಹೇಳಬೇಕಾಗುತ್ತದೆ. ನಾನು ಅವರ ಬಗ್ಗೆ ಅಬ್ಜೆಕ್ಷನ್ ಮಾಡುತ್ತಿಲ್ಲ, ನಾನು ಚೇರ್‌ಗೆ ವಿನಂತಿಯನ್ನು ಮಾಡುತ್ತಿದ್ದೇನೆ, ಇಂತಹದ್ದಕ್ಕೆ ಅವಕಾಶ ಕೊಡಬಾರದೆಂದು. ಪೂರಕ ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ಎರಡು–ಮೂರು ಗಂಟೆಗಳ ಮೊದಲು ನಮಗೆ ಪುಸ್ತಕ ಸಿಗಲಿಲ್ಲ. ನಾಳೆ ದಿವಸ ನಾವು ಅಧಿವೇಶನವನ್ನು ಮುಗಿಸಿ ಹೋಗಬೇಕಾಗಿದೆ. ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ, ಗ್ರಾಮ ಪಂಚಾಯಿತಿ ಎಲೆಕ್ಷನ್‌ಗೆ ಹೋಗಬೇಕೆಂದು ನಾವು ಅಪೇಕ್ಷೆ ಪಡುತ್ತಿದ್ದೇವೆ. ನಾಳೆ ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಟ್ಟಮೇಲೆ ಅಧಿವೇಶನವನ್ನು ಮುಗಿಸುತ್ತಿದ್ದೇವೆ. ನಾವು ತರಾತುರಿ ಇದ್ದರೂ ಕೂಡ ಸರ್ಕಾರಕ್ಕೆ ಸಹಕಾರವನ್ನು ಕೊಟ್ಟು ಎಲ್ಲವನ್ನೂ ಮಾಡುತ್ತಿದ್ದೇವೆಂದರೆ, ಪೂರಕ ಅಂದಾಜುಗಳ ಬಗ್ಗೆ ನಮಗೆ ಮಾಹಿತಿಯನ್ನು ಕೊಟ್ಟಿದ್ದರೆ ನೋಡಿಕೊಂಡು ಬಂದು ಅದರ ಬಗ್ಗೆ ನಮ್ಮ ಸಲಹೆಗಳು ಏನಾದರೂ ಇದ್ದರೆ ಕೊಡುವುದಕ್ಕೆ ನಮಗೆ ಅವಕಾಶವಾಗುತ್ತಿತ್ತು. ಬಹುಶಃ ನನಗೆ ಗೊತ್ತಿರುವ ಪ್ರಕಾರ ಮಾನ್ಯ ಹಣಕಾಸು ಸಚಿವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. 93,873.07 ಲಕ್ಷ ರೂಪಾಯಿಗಳ ಒಟ್ಟು ಮೊತ್ತದ ಪೂರಕ ಅಂದಾಜು, ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ. ಬಹುಶಃ ನನಗೆ ನೆನಪಿರುವ ಹಾಗೆ ಇದು ಹೈಯೆಸ್ಟ್ ಅಮೌಂಟ್, ನಾನು ಇಲ್ಲಿ ಕಾರ್ಯಕಲಾಪದಲ್ಲಿ ಭಾಗವಹಿಸಿದ್ದೆ. ಯಾವ ತುರ್ತು ಕಾರ್ಯಕ್ಕಾಗಿ ಈ ರೀತಿಯ ಪೂರಕ ಬಜೆಟ್‌ನಲ್ಲಿ ನೀವು ಬಜೆಟ್‌ನಲ್ಲಿ ಆಲೋಕೇಶನ್ ಮಾಡಿಕೊಳ್ಳದೆ ಖರ್ಚು ಮಾಡುವಂಥ ವಿಶೇಷವಾದಂಥ ಸಂದರ್ಭ ಏನಿತ್ತು? ಪೂರಕ ಅಂದಾಜು ಬಜೆಟ್ ಎಂದರೆ ನಾವು ವಿರೋಧವನ್ನು ಮಾಡುವುದಕ್ಕಾಗುತ್ತದೆಯೆ? ಸುನಾಮಿ ಸಂತ್ರಸ್ಥರ ಸಲುವಾಗಿ ಮಾನ್ಯ ಪ್ರಧಾನ ಮಂತ್ರಿಗಳ ರಿಲೀಫ್ ಫಂಡ್‌ಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅದನ್ನು ಕೊಡಬೇಕಾಗುತ್ತದೆ. ಸ್ವಲ್ಪಜ್ಞಾನ ಇರುವಂಥವರು ಇದನ್ನು ಯಾರೂ ವಿರೋಧ ಮಾಡುವುದ ಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ, ಶಿವಮೊಗ್ಗ ಜಿಲ್ಲೆ ಸೇರಿ 6 ಮೆಡಿಕಲ್ ಕಾಲೇಜುಗಳು, ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳವರು ಏನು ಲೂಟಿ ಮಾಡಿಕೊಂಡು ನಮ್ಮ ಮಕ್ಕಳ ಮೆಡಿಕಲ್ ಶಿಕ್ಷಣಕ್ಕೆ ಅಡ್ಡಿ ಮಾಡುತ್ತಿದ್ದರು, ಅದರ ಬಗ್ಗೆ ಒಂದು ಧೈರ್ಯ ಮಾಡಿ ಒಂದು ತಿರ್ಮಾನವನ್ನು ತೆಗೆದುಕೊಂಡು 6 ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಹೊರಟಿದ್ದೀರಿ, ಇದಕ್ಕಾಗಿ 600 ಲಕ್ಷ ರೂಪಾಯಿಗಳನ್ನು ತೆಗೆದು ಇಟ್ಟಿದ್ದೀರಿ, ಇದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇದು ಅಗತ್ಯ ಇದೆ, ಶಿವಮೊಗ್ಗ ಜಿಲ್ಲೆಯ ಜನರ ಪರವಾಗಿ ತಮಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಆ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿ, ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಪ್ರಶ್ನೆ ಇರುವಂಥದ್ದು, ಆಟೋರಿಕ್ಷಾಗಳಿಗೆ ಎಲ್‌ಪಿಜಿ ಕಿಟ್ ಬಗ್ಗೆ ಹೇಳಿದ್ದೀರಿ, ಇಲ್ಲಿರುವ ನಮಗೆ ಯಾರಿಗೂ ಏನು ಎಂದು ಗೊತ್ತಿಲ್ಲ, ಯಾರಿಗೆ ಕೊಟ್ಟಿದ್ದೀರಿ? ಎಲ್ಲಿ ಕೊಟ್ಟಿದ್ದೀರಿ? ಎಲ್ಲಿ ಕೊಡಬೇಕೆಂದು ಇದ್ದೀರಾ? ಈ ಮನೆಯ ಸದಸ್ಯರೆ, ಯಾರಿಗದರೂ ಇದರ ಬಗ್ಗೆ ಗೊತ್ತಿದೆಯಾ ಆ ಕಾರ್ಯಕ್ರಮ ಏನು? ಬಹಳ ಮುಖ್ಯವಾಗಿ ನೊಂದು

ನಾನು ಒಂದು ಮಾತನ್ನು ಹೇಳುತ್ತೇನೆ. ಅಭಿಯಾಚನೆ–9, ಹುಲಿಕೋಟೆ; ಏನು ನಡೆಸಿದ್ದೀರಿ ಸ್ವಾಮಿ. ಒಂದೇ ಒಂದು ಊರಿಗೆ ಎನ್‌ಸಿಡಿಸಿ ರೈತರ ಸಹಕಾರಿ ನೂಲಿನ ಗಿರಣಿ ನಿಗಮ, ಹುಲಿಕೋಟೆ 543.23 ಲಕ್ಷ ರೂಪಾಯಿಗಳು, ಇನ್ನೊಂದಕ್ಕೆ 500 ಲಕ್ಷ ರೂಪಾಯಿಗಳು, ಇನ್ನೊಂದಕ್ಕೆ 785 ಕೋಟಿ ರೂಪಾಯಿಗಳ ಎನ್‌ಸಿಡಿಸಿ ರೈತರ ಸಹಕಾರಿ ಎಣ್ಣೆ ಗಿರಣಿ ನಿಗಮ. ಇದು ಎಲ್ಲಾ ಎಷ್ಟು ಆಯಿತು ಸ್ವಾಮಿ. ನೀವು ಕೊಟ್ಟಿದ್ದೀರಿ, ಇದಕ್ಕೆ ನಾವು ಹೇಳುವಂಥದ್ದು, ಈ ರಾಜ್ಯದಲ್ಲಿ ಸಹಕಾರಿ ನೂಲಿನ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು ಮುಳುಗಿ ಹೋಗುತ್ತಿವೆ. ನಿಮಗೆ ಉಡುಪಿ, ಮಂಗಳೂರಿ ನಲ್ಲಿರುವಂಥ ಬ್ರಹ್ಮಾವರ್ ಸಕ್ಕರೆ ಕಾರ್ಖಾನೆಯನ್ನು ಉಳಿಸಬೇಕೆಂದು ನಿಮಗೆ ಅನಿಸಲಿಲ್ಲವೆ? ಅದಕ್ಕೆ ದುಡ್ಡನ್ನು ಬಿಡುಗಡೆ ಮಾಡಿ ಕಾರ್ಖಾನೆಯನ್ನು ಉಳಿಸಿ ರೈತನನ್ನು ಉಳಿಸಬೇಕೆಂದು ಅನಿಸಲಿಲ್ಲ? ನಿಮಗೆ ನಾನು ಒಂದು ವಿಷಯವನ್ನು ಸಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ, ಕಳೆದ 8–10 ವರ್ಷಗಳಲ್ಲಿ ಈ ಹುಲಿಕೋಟೆಗೆ ಇದಕ್ಕೆ ನೀವು ಎಷ್ಟೆಷ್ಟು ಅನುದಾನವನ್ನು ಕೊಟ್ಟಿದ್ದೀರಿ. ನೀವು ಉತ್ತರವನ್ನು ಕೊಡುವ ಸಮಯದಲ್ಲಿ ಕೊಡಿ.

ಶ್ರೀ ಕೆ.ಶ್ರೀನಿವಾಸಗೌಡ(ಕೃಷಿ ಸಚಿವರು): ಮಾನ್ಯ ಛೇರ್ಮನ್‌ರೆ, ಮಾನ್ಯ ಯಡಿಯೂರಪ್ಪನವರೆ, ಒಂದು ನಿಮಿಷ, ನೀವು ಎನ್‌ಸಿಡಿಸಿ ಬಗ್ಗೆ ಹೇಳಿರುವುದರಿಂದ ಹೇಳುತ್ತೇನೆ. ಇವತ್ತು ಸಹಕಾರ ಸಂಘಗಳಲ್ಲಿ ಯಾರು ಕೇಳುತ್ತಾರೆ ಸರ್ಕಾರದ ಮೂಲಕ ಎನ್‌ಸಿಡಿಸಿಗೆ ಅದು ಹೋಗುತ್ತದೆ. ಪ್ರಪೋಸಲ್ಸ್ ನೀವು ಮಂಗಳೂರಿನದ್ದು ಹೋಗಿಲ್ಲವೆಂದ ಮೇಲೆ ಅವರು ಹೇಗೆ ಕೊಡುತ್ತಾರೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಛೇರ್ಮನ್‌ರೆ, ಕೊಡಬೇಕು ಎನ್ನುವ ಮನಸ್ಸು ಇರಬೇಕಲ್ಲವೆ? ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಬಗ್ಗೆ ನಾವು ಭಿಕ್ಷೆ ಬೇಡುತ್ತಿದ್ದೇವೆ. ನೀವು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಬೇಕಾದರೆ ಕೊಡಿ. ಬೇಕಾದವರಿಗೆ ನೀವು ಕೊಟ್ಟು ನೀವು ಹಾಳಾಗಿ ಹೋಗಿ ಎಂದು ಮಾಡುತ್ತಿದ್ದೀರಿ ಏನು?

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಛೇರ್ಮನರೆ, ಹುಲಿಕೋಟೆಯವರು ಕೇಳಿರುವ ಸಲುವಾಗಿ ಸಹಕಾರ ಸಂಘಗಳನ್ನು ಬೆಳೆಸಬೇಕೆನ್ನುವ ದೃಷ್ಟಿಯಿಂದ ಸರ್ಕಾರದ ಗ್ಯಾರಂಟಿ ಕೊಡಲಾಗಿದೆ. ನೀವು ಕೇಳಿದರೂ ಸಹಿತ ಕೊಡುತ್ತೇವೆ.

(ಗೊಂದಲ)

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಛೇರ್ಮನ್‌ರೆ, ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಶ್ರೀನಿವಾಸಗೌಡರಿಗೆ ವಿಷಯ ಗೊತ್ತಿಲ್ಲ, ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ರೈತರಿಗೆ ಕಾರ್ಮಿಕರುಗಳಿಗೆ ಸೊಸೈಟಿಗಳಿಗೆ ದುಡ್ಡು ಕೊಡಲಿಕ್ಕೆ ಜಾಗವನ್ನು ಮಾರಿ ದುಡ್ಡು ಕೊಡುವುದು ಎಂದು ತೀರ್ಮಾನ ಮಾಡಿದಿರಿ, ಉಳಿದ ಸಹಕಾರಿ ಸಂಸ್ಥೆಗಳಿಗೆ ಸರ್ಕಾರದಿಂದ ಕೊಡುತ್ತಿದ್ದೀರಿ. ಬೇರೆ ಸಂಸ್ಥೆಗಳಿಗೆ ಕೊಡಲು ಸರ್ಕಾರದಲ್ಲಿ ದುಡ್ಡಿದೆ, ಹಾಗಾದರೆ ನೀವು ಒಂದು ಕೆಲಸವನ್ನು ಮಾಡಿ, ಬ್ರಹ್ಮಾವರಕ್ಕೂ ಇಲ್ಲಿ ದುಡ್ಡನ್ನು ಕೊಡಿ, ಏನು ಅದರ ಜಾಗವನ್ನು ಮಾರುತ್ತೀರಿ, ಆ ಹಣವನ್ನು ಅಲ್ಲಿ ಆಡ್ಜೆಸ್ಟ್ ಮಾಡಿಕೊಳ್ಳಿ. ರೈತರು ಏನು ಸಾಲವನ್ನು ಪಡೆದಿದ್ದಾರೆ, ಅವರಿಗೆ ಬಡ್ಡಿ ಏರುತ್ತಿದೆ. ಸಕ್ಕರೆ ಕಾರ್ಖಾನೆಯವರಿಗೆ ಇದನ್ನು ಕೊಟ್ಟಿಲ್ಲ, ಸಕ್ಕರೆ ಕಾರ್ಖಾನೆಯವರಿಗೆ ದುಡ್ಡನ್ನು ಕೊಟ್ಟಿದ್ದರೆ ಅವರು ಬಡ್ಡಿಯನ್ನು ಕೊಡುವ ಪರಿಸ್ಥಿತಿ ಬರುತ್ತಿರಲಿಲ್ಲ. ಇವತ್ತು ಸಕ್ಕರೆ ಕಾರ್ಖಾನೆಯ ತಪ್ಪಿಗಾಗಿ, ಅವರು ಬಡ್ಡಿ ಕಟ್ಟಬೇಕು. ಅದಕ್ಕೆ ಫಸ್ಟ್ ವ್ಯವಸ್ಥೆ ಮಾಡಿ, ಆಮೇಲೆ ನೀವು ಹಣವನ್ನು ಅಡ್ಜೆಸ್ಟ್ ಮಾಡಿಕೊಳ್ಳಿ.

ಶ್ರೀ ಕೆ.ಶ್ರೀನಿವಾಸಗೌಡ(ಕೃಷಿ ಸಚಿವರು): ಮಾನ್ಯ ಛೇರ್ಮನ್‌ರೆ, ನಾನು ಅದನ್ನೆ ಹೇಳಿರುವುದು. ಎನ್‌ಸಿಡಿಸಿ ಯಿಂದ ಯಾವುದೇ ಸಹಕಾರ ಸಂಘ ಹಣವನ್ನು ಸಾಲ ತೆಗೆದುಕೊಂಡು ಬರಬಹುದು. ಅದಕ್ಕೆ ಮೊದಲು ಸರ್ಕಾರ ಗ್ಯಾರಂಟಿಯನ್ನು ಕೊಡಬೇಕು ಅಷ್ಟೆ. ಅದಕ್ಕೊಂದಕ್ಕೆ ಕೊಟ್ಟಿದ್ದಾರೆಂದರೆ, ಅವರು ಕೇಳಿರುವುದರಿಂದ ಅದಕ್ಕೆ ಗ್ಯಾರಂಟಿಯನ್ನು ಕೊಟ್ಟಿದ್ದಾರೆ. ಮಾನ್ಯ ಈಶ್ವರಪ್ಪನವರೆ, ಒಂದು ನಿಮಿಷ, ಆ ಎನ್‌ಸಿಡಿಸಿಯಲ್ಲಿ ನಾನೂ ಕೂಡ ಒಬ್ಬ ನಿರ್ದೇಶಕನಾಗಿದ್ದೇನೆ. ಅಲ್ಲಿ ಏನು ನಡೆಯುತ್ತಿದೆ ಎನ್ನುವುದು ನನಗೂ ಗೊತ್ತಿದೆ. ಇಡೀ ದೇಶದಲ್ಲಿ ಎನ್‌ಸಿಡಿಸಿಯ ವ್ಯವಹಾರ ನನಗೆ ಗೊತ್ತಿದೆ. ಅದ್ದರಿಂದ ನಾನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಯಾವುದೇ ಸಹಕಾರ ಸಂಸ್ಥೆ ಸರ್ಕಾರದ ಮೂಲಕ ಹೋದರೆ ಅದಕ್ಕೆ ಸ್ಯಾಂಕ್ಷನ್ ಆಗುತ್ತದೆ. ಅದರ ಪ್ರಕಾರ ಅವರು ಕೊಡಲೇಬೇಕಾಗುತ್ತದೆ. ಬ್ರಹ್ಮವರ್ ಸಕ್ಕರೆ ಕಾರ್ಖಾನೆ ಇರಬಹುದು, ಅದರ ಜೊತೆಗೆ ಅದು ಎಲಿಜಿಬಿಲಿಟಿ ಇರಬೇಕಾಗುತ್ತದೆ. ಅದಕ್ಕೆ ಕೆಲವೊಂದು ನಾರ್ಮ್ಸ್ ಇದೆ, ಯಾವುದೇ ಸಹಕಾರ ಸಂಘ ಇದ್ದರೂ ಅದಕ್ಕೆ ಕೊಡಲಿಕ್ಕೆ ತಯಾರಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಎಲ್ಲಾ ಗೊತ್ತಿದೆ, ನಾವು ಎಷ್ಟು ವರ್ಷದಿಂದ ಕೇಳುತ್ತಿದ್ದೇವೆ.

ಶ್ರೀ ಕೆ.ಶ್ರೀನಿವಾಸಗೌಡ(ಕೃಷಿ ಸಚಿವರು): ಮಾನ್ಯ ಛೇರ್ಮನ್‌ರೆ, ಈಗ ನೀವು ಹೇಳಿದ್ದೀರಿ ನಾನೂ ಕೂಡ ಇಲ್ಲೇ ಇದ್ದೇನೆ ನನಗೆ ಗೊತ್ತಾಗಿದೆ. ಇದೇ ತಿಂಗಳೂ 2ನೇ ತಾರೀಖು ಎನ್‌ಸಿಡಿಸಿ ಮೀಟಿಂಗ್ ಇತ್ತು ಅದಕ್ಕೆ ನನಗೆ ಹೋಗುವುದಕ್ಕಾಗಲಿಲ್ಲ. ನಾನು ತಮಗೆ ಒಂದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಸಹಕಾರ ವ್ಯವಸ್ಥೆಯಲ್ಲಿ ಚೆನ್ನಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುವುದಕ್ಕೆ ನೀವು ಎನ್‌ಕ್ರೇಜ್ ಮಾಡಿ, ನಿಮಗೆ ಬೇಕಾಗಿದ್ದರೆ ಬೇಕು ಎಂದು ಕೇಳಿ. ಅದಕ್ಕೆ ಕೊಟ್ಟಿದ್ದೀರಿ, ನಮಗೆ ಕೊಡಲಿಲ್ಲ ಎನ್ನುವುದಕ್ಕಿಂತ ನೀವು ಕೇಳಿದ್ದರೆ ಅದಕ್ಕೆ ಸರ್ಕಾರ ಕೊಡುವ ಪ್ರಯತ್ನವನ್ನು ಮಾಡುತ್ತದೆ. ಎನ್‌ಸಿಡಿಸಿ ಯವರು ಲೋನ್ ಕೊಡುತ್ತಾರೆ, ಯಾವುದೋ ಒಂದು ಮಾಡಿಬಿಟ್ಟಿದ್ದೇವೆ ಅದರಿಂದ ನಮಗೆ ಕೊಟ್ಟಿಲ್ಲವೆಂದು ಹೇಳುವಂಥದ್ದು ಸರಿಯಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ನಮಗೂ ಕೊಡಿ, ನಾವು ಬೇರೆಯವರದ್ದರ ಬಗ್ಗೆ ಕೇಳುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಛೇರ್ಮನ್‌ರೆ, ನಾನು ಹೇಳುವುದಕ್ಕೆ ಹೊರಟಿರುವಂಥದ್ದು, ಯಾರಿಗೆ ಇನ್‌ಫ್ಲೂಯೆನ್ಸ್ ಇದೆ, ಅವರು ಪ್ರಬಲವಾಗಿ ಬೆಳೆಯಬೇಕು, ಅಂಥವರಿಗೆ ಎಲ್ಲಾ ರೀತಿಯ ಹಣಕಾಸು ನೆರವು ಸಿಗಬೇಕು. ಅದನ್ನು ನೀವು ಎಲ್ಲಿಂದ ಅನುಮತಿ ತೆಗೆದುಕೊಳ್ಳಬೇಕಾದರೂ ಅದಕ್ಕೆ ಇನ್‌ಫ್ಲೂಯೆನ್ಸ್ ಬೇಕು. ಏನು ಎಲಿಜಿಬಿಲಿಟಿ ಇರಬೇಕು, ಮಾನ್ಯ ದೇಶಪಾಂಡೆಯವರೆ, ಅದಕ್ಕಾಗಿ ನಾನು ಕೇಳುವುದು ಕಳೆದ 7–8 ವರ್ಷಗಳಲ್ಲಿ ಎಷ್ಟೆಷ್ಟು ಹಣವನ್ನು ಯಾವ್ಯಾವ ರೂಪದಲ್ಲಿ ಹುಲಿಕೋಟೆಗೆ ಬಿಡುಗಡೆ ಮಾಡಿದ್ದೀರಿ ಅದರ ಫಿಗರ್ಸ್‌ನ್ನು ಮುಂದಿಡಿ. ಆಗ ನಿಮಗೆ ಗೊತ್ತಾಗುತ್ತದೆ, ಏನು ನಡೆದಿದೆ ಎಂದು.

ಶ್ರೀ ಸಿದ್ದರಾಮಯ್ಯ(ಹಣಕಾಸು ಸಚಿವರು): ಮಾನ್ಯ ಛೇರ್ಮನ್‌ರೆ, ಹುಲಿಕೋಟೆದು ಇರಬಹುದು ಅಥವಾ ಇನ್ನೊಂದು ಇರಬಹುದು, ಎನ್‌ಸಿಡಿಸಿ ಯಿಂದ ಲೋನ್ ಕೊಡುತ್ತಾರೆ. ನಾವು ಸುಮ್ಮನೆ ನಮ್ಮಿಂದ ಕೊಡುತ್ತೇವೆ ಅಷ್ಟೆ. ನಮ್ಮ ಮೂಲಕ ಕೊಡುವುದರಿಂದ ಗೌರ್ನಮೆಂಟ್ ಗ್ಯಾರಂಟಿ ಕೊಡುತ್ತೇವೆ. ಇದನ್ನು ಮಾಡಿಸತಕ್ಕಂಥವರು ಎಲ್ಲರೂ ಕೂಡ ಹುಲಿಕೋಟೆ ಅಷ್ಟೇ ಅಲ್ಲ,

ಇನ್ನು ಅನೇಕ ಸೊಸೈಟಿಗಳಿಗೆ 48 ಕೋಟಿ ರೂಪಾಯಿಗನ್ನು ಶುಗರ್ ಫ್ಯಾಕ್ಟರಿಗಳಿಗೆ ಸರ್ಕಾರ ಗ್ಯಾರಂಟಿ ಕೊಟ್ಟಿದೆ, ಲೋನ್ ಆಗಿದೆ, ಅದಕ್ಕೆ ಲೋನ್ ಬಿಡುಗಡೆ ಮಾಡಿದ್ದೇವೆ. ಹುಲಿಕೋಟೆಗೆ ಒಂದಕ್ಕೆ ಮಾಡಿದ್ದೇವೆ, ಅದಕ್ಕೆ ಬಹಳ ಪ್ರೀತಿ ಎಂದು ಏನೂ ಅಲ್ಲ. ಇನ್ನೂ 6 ಸೊಸೈಟಿಗಳಿಗೆ 1999ನೇ ಇಸ್ವಿಯಲ್ಲಿ ತೀರ್ಮಾನವಾಗಿರುವಂಥವುಗಳಿಗೆ ಕೊಟ್ಟಿದ್ದೇವೆ. ಎಲ್ಲೆಲ್ಲಿ ಯಾವ್ಯಾವ ಶುಗರ್ ಫ್ಯಾಕ್ಟರಿಗಳು ಲೋನ್ ತೆಗೆದುಕೊಂಡಿವೆ ಎಲ್ಲವುಗಳಿಗೆ ಸರ್ಕಾರ ಗ್ಯಾರಂಟಿ ಕೊಟ್ಟಿದೆ. ಕೋ–ಅಪರೇಟಿವ್‌ದು ಎಲ್ಲಾ ಮಾಡಿದ್ದೇವೆ. ಯಾವುದೋ ಒಂದನ್ನು ಹಿಡಿದುಕೊಂಡು ಏಕೆ ಹೀಗೆ ಮಾಡಿದ್ದೀರೆಂದು ಹೇಳುವುದಕ್ಕೆ ಹೋಗಬಾರದು. ಯಾರಿಗೋ ಒಬ್ಬರಿಗೆ ಮಾತ್ರ ಸರ್ಕಾರ ಫೇವರ್ ಮಾಡುತ್ತಿದೆ, ಎಂದು ಹೇಳುವುದು It is not correct. ಎಲ್ಲಾ ಕೋ–ಅಪರೇಟಿವ್ ಶುಗರ್ ಫ್ಯಾಕ್ಟರಿಗಳು ಎನ್‌ಸಿಡಿಸಿ ಯಿಂದ ಲೋನ್ ತೆಗೆದುಕೊಂಡಿರುವುದಕ್ಕೆ ಸರ್ಕಾರದ ಗ್ಯಾರಂಟಿಯನ್ನು ಕೊಟ್ಟಿದ್ದೇವೆ. ಎನ್‌ಸಿಡಿಸಿ ಯಿಂದ ಲೋನ್ ಕೊಡುವುದಿದ್ದರೆ ನಾವು ಗ್ಯಾರಂಟಿ ಬೇಡವೆಂದು ಹೇಗೆ ಹೇಳುವುದಕ್ಕಾಗುತ್ತೇ, ಅದಕ್ಕೆ ಗ್ಯಾರಂಟಿಯನ್ನು ಕೊಡುತ್ತಿದ್ದೇವೆ.

ಶ್ರೀ ಸಿ.ಎಂ.ಉದಾಸಿ(ಹಾನಗಲ್): ಮಾನ್ಯ ಛೇರ್ಮನ್‌ರೆ, ಇದಕ್ಕೆ ಅಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಿರುವ ನಿಮಿತ್ತ ಎನ್‌ಸಿಡಿಸಿಯಿಂದ 154.74 ಲಕ್ಷ ರೂಪಾಯಿಗಳ ಸಬ್ಸಿಡಿ ಮೊತ್ತವಾಗಿದೆ. ಇದಕ್ಕೆ ಅವಕಾಶವನ್ನು ಕಲ್ಪಿಸಿರುವ ನಿಮಿತ್ತ ಈ ಹಣವನ್ನು ಸಾದಿಲ್ವಾರನಿಧಿಯಿಂದ ಬಿಡುಗಡೆ ಮಾಡಲಾಗಿದೆ ಎಂದು ಆಗಿದೆ. ಈ ಸಬ್ಸಿಡಿಯನ್ನು ಬಿಡುಗಡೆ ಮಾಡಿದ್ದೀರಿಲ್ಲಾ, ಇದು ಒಂದೇ ಫ್ಯಾಕ್ಟರಿಗೆ ಇದಕ್ಕೆ ಬಹಳ ಸಲ ಹಣವನ್ನು ಬಿಡುಗಡೆ ಮಾಡಿದ್ದೀರಿ ಎನ್ನುವ ಅಪಾದನೆ ಇರುವುದರಿಂದ ಹುಲಿಕೋಟೆಗೆ ಕಳೆದ 15 ವರ್ಷಗಳಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎನ್ನುವುದರ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ(ಉಪಮುಖ್ಯಮಂತ್ರಿಗಳು): ಮಾನ್ಯ ಛೇರ್ಮನ್‌ರೆ, ಯಾವ್ಯಾವ ಶುಗರ್ ಫ್ಯಾಕ್ಟರಿಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಸರ್ಕಾರದಿಂದ ಅದು ಏನೇನು ನಷ್ಟ ಅನುಭವಿಸಿದೆ, ಏನೇನು ನಷ್ಟವಾಯಿತು. ಇದರ ಬಗ್ಗೆ ಒಂದು ಸಲ ಚರ್ಚೆ ಮಾಡೋಣ. ಇಡೀ ರಾಜ್ಯದಲ್ಲಿ ಕೋ–ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್‌ಗಳು ಎಷ್ಟೆಷ್ಟು ಇವೆ, ಯಾವ್ಯಾವಾಗ ಸಬ್ಸಿಡಿಯನ್ನು ಕೊಟ್ಟಿದ್ದೇವೆ, ಯಾರ್ಯಾರಿಗೆ ಗ್ಯಾರಂಟಿಯನ್ನು ಕೊಟ್ಟಿದ್ದೇವೆ. ಯಾರ್ಯಾರಿಗೆ ಎಷ್ಟೆಷ್ಟು ಎನ್‌ಸಿಡಿಸಿ ಯಿಂದ ಲೋನ್‌ಗಳು ಬಂದಿವೆ, ಎಲ್ಲದ್ದರ ಬಗ್ಗೆ ಒಂದು ಸಲ ಚರ್ಚೆಯನ್ನು ಮಾಡೋಣ. ಇದು ಬಂದಿರುವುದರಿಂದ ಬಿಡುಗಡೆ ಮಾಡಿ ಕೊಡಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಮಾನ್ಯ ಛೇರ್ಮನ್‌ರೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಿಮ್ಮ ಅಧ್ಯತೆ ಯಾವುದು? ಈಗ ಹೇಳುತ್ತೇನೆ, ನಿಮಗೆ ಗೊತ್ತಾಗುತ್ತದೆ. ಕಳೆದ ಎರಡು ವರ್ಷಗಳಿಂದ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಅದು ಬಡ ರೈತರದ್ದಲ್ಲವೇ ಅವರು ಬದುಕಬಾರದೆ? ನಿಮ್ಮ ಈ ಪೂರಕ ಬಜೆಟ್‌ನಲ್ಲಿ ಬ್ರಹ್ಮಾವರ್ ಸಕ್ಕರೆ ಕಾರ್ಖಾನೆಯನ್ನು ಉಳಿಸುವುದಕ್ಕೋಸ್ಕರ 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಹೇಳಿದ್ದರೆ ಅದಕ್ಕೆ ನಾನು ಸಂತೋಷ ಪಡುತ್ತಿದ್ದೆನು. ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಗಂಗಾ ಕಲ್ಯಾಣ ಯೋಜನೆಗೆ ನಾವು ಇರುವ ಹಣವನ್ನು ಖರ್ಚು ಮಾಡಿದ್ದೇವೆ, ಇನ್ನೂ ಎರಡು ಕೋಟಿ ರೂಪಾಯಿಗಳು ಬೇಕಾಗಿತ್ತು, ಅದಕ್ಕೆ ನಾವು ಪೂರಕ ಅಂದಾಜಿನಲ್ಲಿ ಒದಗಿಸಿಕೊಟ್ಟಿದ್ದೇವೆಂದರೆ

ಅದಕ್ಕೆ ನಾನು ಒಪ್ಪುತ್ತಿದ್ದೆ. ಎಸ್‌ಸಿ:ಎಸ್‌ಟಿ ಯವರ ಮಕ್ಕಳಿಗೆ ಸ್ಕಾಲರ್‌ಶಿಫ್‌ಗೆ ಕೊಟ್ಟಿರುವಂಥ ಹಣ ಒಂದು ಪೈಸೆ ಖರ್ಚಾಗಲಿಲ್ಲ. ಅದಕ್ಕೆ ಅಗತ್ಯ ಇರುವಂಥ ಹಣವನ್ನು ನಾವು ಖರ್ಚು ಮಾಡುವುದಕ್ಕಾಗಲಿಲ್ಲ. ಅದನ್ನು ಖರ್ಚು ಮಾಡಿದ್ದೇವೆ, ಇನ್ನೂ ಹೆಚ್ಚಿಗೆ ಹಣ ಬೇಕಾಗಿದೆ ಎಂದು ಕೇಳಿದ್ದರೆ ಅದು ಆದ್ಯತೆ ಎಂದು ನಾನು ಅರ್ಥ ಮಾಡಿಕೊಳ್ಳುತ್ತಿದ್ದೆ. ನಾನು ಏನು ಹೇಳುತ್ತಿದ್ದೇನೆಂದರೆ, ಪೂರಕ ಬೇಡಿಕೆಗಳನ್ನು ಇಟ್ಟಂಥ ಕಾಲದಲ್ಲಿ ಯಾವುದು ಅನಿವಾರ್ಯವಾಗಿ ಇದು ಆದ್ಯತೆ ಮೂಲಕ ಆಗಲೇಬೇಕು ಎಂದು ಹೇಳುತ್ತಿರೋ ಅದಕ್ಕೆ ಹಣವನ್ನು ಇಟ್ಟರೆ ಅದಕ್ಕೊಂದು ಅರ್ಥವಿದೆ. ಉದಾಹರಣೆಗೆ ಜಯಲಲಿತಾ ಕೇಸ್ ಬಗ್ಗೆ. ಅದಕ್ಕೆ ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ. ಒಂದು ವರ್ಷವಾಯಿತು, ಏನಾಗಿದೆ ಸ್ವಾಮಿ? ಪ್ರೋಗ್ರೆಸ್ ಆಗಿದೆಯಾ? ಜಡ್ಜ್‌ನ್ನು ಅಲ್ಲಿ ಕೂಡಿಸಿದ್ದೀರಿ. ಅವರು ಒಬ್ಬರೇ ಅಲ್ಲಿಬಂದು ಕುಳಿತುಕೊಂಡು ಕೋರ್ಟಿನಿಂದ ಎದ್ದುಹೋಗುತ್ತಿದ್ದಾರೆ. ಒಂದು ಹೆಜ್ಜೆ ಪ್ರೋಗ್ರೆಸ್ ಆಗಿದೆಯಾ? ಕಳೆದ ನಾಲ್ಕೈದು ತಿಂಗಳಿಂದ 20 ಜನ ಪ್ರೊಫೆಸರ್‌ಗಳನ್ನು ಅಲ್ಲಿ ತೆಗೆದುಕೊಂಡು ಹೋಗಿ ಇಟ್ಟಿದ್ದೀರಿ. . . . . .

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ(ಸಹಕಾರ ಮಂತ್ರಿ):– ತಾವು ವಿರೋಧ ಪಕ್ಷದ ನಾಯಕರು ಇದ್ದೀರಿ. ಸುಪ್ರೀಂ ಕೋರ್ಟು ಆದೇಶದ ಪ್ರಕಾರ ಕೋರ್ಟುಗಳು ಆಗಿವೆ. ಅದನ್ನು ಕರ್ನಾಟಕ ಸರ್ಕಾರ ಮಾಡಿದೆಯಾ?

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ದೇಶಪಾಂಡೆಯವರೇ, ನಾನು ಹೇಳುತ್ತಿದ್ದೇನೆ ಕೇಳಿ. ಇವತ್ತು ಪ್ರೋಗ್ರೆಸ್ ಏನಾಗಿದೆ? ಪಬ್ಲಿಕ್ ಪ್ರಾಸಿಕ್ಯೂಟರ್‌ಸ್ನು ಎರಡು–ಮೂರು ದಿವಸ ಹಿಂದೆ ನೇಮಕ ಮಾಡಿದಿರಿ. ಅದೂ ಆರು ತಿಂಗಳ ನಂತರ. ಅಲ್ಲಿ ಜಡ್ಜ್ ಬಂದು ಕುಳಿತುಕೊಂಡು ಹೋಗುತ್ತಾರೆ. ನಾನು ಹೇಳುವಂಥಾದ್ದು ಏನೆಂದರೆ ನೀವು ಕೋರ್ಟು ಮಾಡಿದ ಮೇಲೆ, ಐವತ್ತು ಲಕ್ಷ ರೂ ತೆಗೆದಿಟ್ಟಮೇಲೆ, ಅಷ್ಟು ಹಣ ಖರ್ಚು ಮಾಡಿದಮೇಲೆ. . . . .

ಶ್ರೀ ಆರ್.ವಿ.ದೇಶಪಾಂಡೆ:– ಅದು ರೀ–ಇಂಬರ್ಸ್‌ಮೆಂಟ್ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ರೀ–ಇಂಬರ್ಸ್‌ಮೆಂಟ್ ಆಗಲಿ. ನಾವು ಬೇಡವೆಂದು ಹೇಳುವುದಿಲ್ಲ . . . .

ಶ್ರೀ ಕೆ.ಎಸ್.ಈಶ್ವರಪ್ಪ:– ಸರ್, ಸುಪ್ರೀಂ ಕೋರ್ಟು ಬೈಂಡಿಂಗ್‌ನಲ್ಲಿ ನಾವು ದುಡ್ಡು ಇಡಬೇಕೆಂದು ಏನೂ ಇಲ್ಲ. ನಾವು ಒಪ್ಪಿಗೆ ಕೊಡಲೇಬೇಕು ಅಂತೇನೂ ಇಲ್ಲ. ನಾವು ದುಡ್ಡು ತೆಗೆದಿಟ್ಟಿದ್ದು ದಾನ ಕೊಡಬೇಕು ಅಂತೇನಿಲ್ಲ. ಇಷ್ಟು ಹಣ ಬಿಡುಗಡೆ ಮಾಡಬೇಕೆಂದು ನಮ್ಮ ಮೇಲೆ ಒತ್ತಡ ಮಾಡಲೇಬೇಕೆಂದು ಕೂಡ ಇಲ್ಲ. ನಮ್ಮ ನಾಯಕರು ಹೇಳಿದಹಾಗೆ ನೀವು ಬಡವರ ಬಗ್ಗೆ ವಿಶೇಷವಾದ ಆಸಕ್ತಿಯನ್ನು ವಹಿಸದೇನೇ ಈ ರೀತಿಯಲ್ಲಿ ಹಣ ಹಾಳುಮಾಡಿ ಬಡವರಿಗೆ ಅನ್ಯಾಯ ಮಾಡಿದ್ದೀರಿ ವಿನಹ ನೀವು ಏನೋ ಉತ್ತರ ಕೊಟ್ಟುಕೊಂಡು ಸಮಾಧಾನ ಪಡೆದುಕೊಳ್ಳುವ ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಹೇಳುವಂಥಾದ್ದು ಏನೆಂದರೆ, ಮಾನ್ಯ ಸಿದ್ದರಾಮಯ್ಯನವರೆ, ಏನೋ ಹಾಗೆ ಮಾತನಾಡಿಕೊಂಡು ಹೋಗುತ್ತಾರೆ, ಹೋಗಲಿ ಬಿಡಿ ಎನ್ನುವ ಅರ್ಥ ಅಲ್ಲ. ನಾನೇನು ಹೇಳುತ್ತಿದ್ದೇನೆ ಎಂದರೆ . . . . .

ಶ್ರೀ ಸಿದ್ದರಾಮಯ್ಯ(ಉಪ ಮುಖ್ಯಮಂತ್ರಿ):- ಹಾಗೆ ನಾನು ಹೇಳಿದ್ದೀನಾ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮ್ಮ ಬಗ್ಗೆ ಅಲ್ಲ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆ ಎಂದರೆ ನೀವು ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ನಾಳೆ ಅದು ರೀಯಿಂಬರ್ಸ್ ಆಗುತ್ತದೆ. ಅದು ರಾಜ್ಯಸರ್ಕಾರದ ಜವಾಬ್ದಾರಿ ಇದೆ ಮತ್ತು ಅದನ್ನು ನೀವು ನಿರ್ವಹಿಸಲೇಬೇಕು. ಇದು ನನಗೆ ಅಥವಾಗುತ್ತದೆ. ಆದರೆ ನಾನು ಹೇಳುವಂಥಾದ್ದು ಏನು ಎಂದರೆ ಕೋರ್ಟು ಮಾಡಿದಮೇಲೆ ಅದು ಕೇಂದ್ರಸರ್ಕಾರದ ದುಡ್ಡಿರಲಿ, ರಾಜ್ಯಸರ್ಕಾರದ ದುಡ್ಡು ಇರಲಿ, ಅಲ್ಲಿ ಖರ್ಚು ಮಾಡಿದಮೇಲೆ ಅದು ಸದ್ವಿನಿಯೋಗ ಆಗಬೇಕಲ್ಲಾ? ಅಲ್ಲಿ ಕಾರ್ಯಕಲಾಪಗಳು ಪ್ರಾರಂಭ ಆಗಬೇಕಲ್ಲಾ? ಒಂದು ವರ್ಷದ ಹಿಂದೆ ಸುಪ್ರೀಂ ಕೋರ್ಟು ಹೇಳಿತು. ಆರೇಳು ತಿಂಗಳ ಹಿಂದೆ ನ್ಯಾಯಾಧೀಶರನ್ನು ನೇಮಕ ಮಾಡಿದರು. ಆದರೆ ಒಂದು ಸಿಟ್ಟಿಂಗ್ ಕೂಡ ಆಗಿಲ್ಲ. ಅವರು ಬರುತ್ತಾರೆ, ಕುಳಿತುಕೊಂಡು ಹೋಗುತ್ತಾರೆ. ಟ್ರಾನ್ಸಲೇಷನ್ ಮುಗಿದಿಲ್ಲ, ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ನ್ನು ಇನ್ನೂ ನೇಮಕ ಮಾಡಿಲ್ಲ ಅಂದರೆ ಏನು ಅರ್ಥ? ಇದು ಹೇಗೆ ಬೇಕಾದರೂ ನಡೆದುಕೊಂಡು ಹೋಗಬಹುದಾ? ಹೇಳುವವರು ಕೇಳುವವರು ವ್ಯವಸ್ಥೆಯಲ್ಲಿ ಯಾರೂ ಇಲ್ಲವೇನು? Is it not your duty? ಒಂದು ಸಾರಿ ಸ್ಪೆಶಲ್ ಕೋರ್ಟ್ ಆದಮೇಲೆ ಕೂಡಲೇ ಟ್ರಾನ್ಸಲೇಷನ್ ತಮಿಳಿನಿಂದ ಕನ್ನಡಕ್ಕೆ ಆಗುವ ಹಾಗೆ ನೋಡಬೇಕು. ಅಲ್ಲಿ ಕಾರ್ಯಕಲಾಪ ನಡೆಯುವುದಕ್ಕೆ ಯಾವ ಕಾಣದಕ್ಕೈ ಅದನ್ನು ತಡೆಯುತ್ತಾ ಇದೆ? What is your intention? ಇನ್‌ಡೈರೆಕ್ಟ್ ಆಗಿ ಒಂದು ರೀತಿಯಿಂದ ನಾವು ಸಮ್ಮಿಶ್ರ ಸರ್ಕಾರ ಇರುವವರೆಗೆ ಅಡ್ಜಸ್ಟ್ ಮಾಡಿಕೊಂಡು ಹೋಗುತ್ತೇವೆ, ಈ ಕಾರ್ಯಕಲಾಪಗಳು ನೆಪಮಾತ್ರಕ್ಕೆ, ಕೋರ್ಟು ಅಂತ ಇರುತ್ತದೆ ಅಂತ ಮಾಡಿಕೊಂಡಿದ್ದೀರಾ? ಇದನ್ನು ನಾನು ಕೇಳುವುದಕ್ಕೆ ಹೊರಟಿರುವಂಥಾದ್ದು. ನೀವು ಪ್ರೋಗ್ರೆಸ್ ಬೇಕಾದರೆ ನೋಡಿ. ಯಡಿಯೂರಪ್ಪ ಹೇಳುತ್ತಿರುವುದು ಸರಿಯೇ ಅಲ್ಲವೇ ಎಂಬುದು ಗೊತ್ತಾಗುತ್ತದೆ. ಇದು ಎರಡು-ಮೂರು ದಿವಸಗಳ ಹಿಂದೆ ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ನ್ನು ನೇಮಕ ಮಾಡಿರುವಂಥಾದ್ದು. ನಾನು ವಿನಂತಿ ಮಾಡುವಂಥಾದ್ದು ಏನೆಂದರೆ ಯಾವುದು ಆದ್ಯತಾ ಕ್ಷೇತ್ರ ಇದೆ, ಎಸ್‌ಸಿ:ಎಸ್‌ಟಿ ಮತ್ತೊಂದು ಮಗದೊಂದು ಇದೆ, ಪ್ರಮುಖವಾದಂಥಾದ್ದು ಏನು? ಏನು ದುರಂತವಾಯಿತು ಅದಕ್ಕೆ ನಾವು ಖರ್ಚುಮಾಡಿದ್ದೇವೆ ಎಂದಿದ್ದರೆ ಪೂರಕ ಬೇಡಿಕೆಯಲ್ಲಿ ಇಡಬೇಕು ಎಂದರೆ ನೀವು ಕೇಳಲೇ ಬೇಕು. ಯಾವುದೇ ಸರ್ಕಾರ ನಡೆಸುವವರು ಅದನ್ನು ಮಾಡಬೇಕು. ಆದರೆ ನೀವು ಬಜೆಟ್ ಮಾಡುವಂತಹ ಸಂದರ್ಭದಲ್ಲಿ ಆರ್ಥಿಕ ಇಲಾಖೆಯವರಿಗೆ ಬುದ್ಧಿ ಇಲ್ಲವೇನು? ಯಾವ ಇಲಾಖೆಗೆ ಏನು ಅಗತ್ಯವಿದೆ, ಮುಂದಿನ ಕಾರ್ಯಕ್ರಮಗಳು ಏನು, ಅದಕ್ಕೆ ಬೇಕಾದಂಥ ಅನುದಾನವನ್ನು ತೆಗೆದಿಡಬೇಕೆಂದು ಬಜೆಟ್ ಮಾಡುವಂತಹ ಕಾಲದಲ್ಲಿ ಅನ್ನಿಸುವುದಿಲ್ಲವೇನು? ಯಾವುದೇ ವಿಶೇಷವಾದಂಥ ಸಂದರ್ಭದಲ್ಲಿ ನೀವು ಮಾಡಬೇಕು ಎಂದರೆ ಅದಕ್ಕೆ ಒಂದು ಅರ್ಥ ಇದೆ. ಆದ್ದರಿಂದ ಇನ್ನು ಮುಂದೆಯಾದರೂ ಹೀಗೆ ಮಾಡದಂತೆ ನೋಡಿಕೊಳ್ಳಿ. ಮಾನ್ಯ ಮಾಧುಸ್ವಾಮಿಯವರು ಮಾತನಾಡಿದರು. ಏನು ಆದ್ಯತೆ ಇರುವಂಥಾದ್ದು ನಿಮಗೆ? ಇದು ಯಾರೋ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಸಂಘಕ್ಕೆ ತೆರಿಗೆಭವನವನ್ನು ಕೊಡುವಂಥಾದ್ದು. ಅವರು ಏನು ಮಾಡುತ್ತಾರೆ ಅಲ್ಲಿ? ಇದು ಆದ್ಯತೇನಾ? ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿ ಒಂದುಕಡೆ ಕುಡಿಯುವ ನೀರಿನ ಹಾಹಾಕಾರ ಇದ್ದು ಅದಕ್ಕೆ ಬೇಕಾದ ಹಣವನ್ನು ಬಿಡುಗಡೆ ಮಾಡದೇನೇ

ಅದನ್ನು ನಿಮ್ಮ ಗೂಡಲ್ಲಿ ಇಟ್ಟುಕೊಂಡು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿ ಶಾಸಕರುಗಳೆಲ್ಲಾ ತಲೆತಗ್ಗಿಸಿಕೊಂಡು ಓಡಾಡುವಂತಹ ದುಸ್ಥಿತಿ ಬಂದಿದೆ. ಅದಕ್ಕೆ ಖರ್ಚು ಮಾಡಲಿಕ್ಕೆ ನಿಮ್ಮ ಹತ್ತಿರ ದುಡ್ಡು ಇಲ್ಲ. ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗದ ಏಳಿಗೆಗೆ ಹಣ ಖರ್ಚು ಮಾಡುವುದಕ್ಕೆ ನಿಮಗೆ ಆದ್ಯತೆ ಇಲ್ಲ. ಮಾನ್ಯ ಸಿದ್ಧರಾಮಯ್ಯನವರೆ, ಬಜೆಟ್ ಸಮಯದಲ್ಲಿ ನಾವು ಮಾತನಾಡೋಣ. ಎಸ್‌ಸಿ:ಎಸ್‌ಟಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುವಂಥಾದ್ದು, ಅದಕ್ಕೆ ಯಾವ ಪರಿಸ್ಥಿತಿ ಬಂದಿದೆಯೆಂದು ಹೇಳಿ. ಈ ಒ.ಬಿ.ಸಿ. ವಿದ್ಯಾರ್ಥಿಗಳದ್ದು ಏನಾಗಿದೆ ಎಂದು ತೆಗೆದುನೋಡಿ. ಆದ್ದರಿಂದ ದಯಮಾಡಿ ನಿಮ್ಮಂಥವರು ಅಲ್ಲಿ ಹಣಕಾಸಿನ ಸಚಿವರಾಗಿ, ಅನುಭವ ಇರುವಂಥ ವ್ಯಕ್ತಿ ಅಲ್ಲಿ ಕೂತಾಗ ಈ ರೀತಿ ಯಾವ್ಯಾವುದಕ್ಕೋ ಪೂರಕ ಬೇಡಿಕೆಗಳಿಗೆ ಖರ್ಚು ಮಾಡಿದ್ದೇವೆ ಎಂದು ಹೇಳದೆ ಅದನ್ನು ಆ ಒಂದು ಅಚ್ಚುಕಟ್ಟಿನಲ್ಲಿ ಇತಿಮಿತಿಯಲ್ಲಿ ಹಣಕಾಸನ್ನು ಬಿಗಿಯಾಗಿ ನಿರ್ವಹಿಸುವಂಥಾದ್ದು ನಿಮ್ಮ ಕರ್ತವ್ಯ ಇದೆ. ಇನ್ನು ಮುಂದಾದರೂ ಇದಕ್ಕೆ ಅವಕಾಶ ಮಾಡಿಕೊಡದೆ ತಾವು ಜಾಗ್ರತೆ ವಹಿಸಬೇಕೆಂದು ತಮ್ಮಲ್ಲಿ ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ **ಕೆ.ಎಸ್.ಈಶ್ವರಪ್ಪ(ಶಿವಮೊಗ್ಗ)**:– ಮಾನ್ಯ ಅಧ್ಯಕ್ಷರೆ . . . . .

ಶ್ರೀ **ಸಿದ್ಧರಾಮಯ್ಯ**:– ನಿಮ್ಮ ನಾಯಕರು ಮಾತನಾಡಿದ್ದಾರೆ.

ಶ್ರೀ **ಕೆ.ಎಸ್.ಈಶ್ವರಪ್ಪ**:– ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಸಣ್ಣ ಕೈಗಾರಿಕೆಗಳ ಬಗ್ಗೆ ಸಬ್ಸಿಡಿಯನ್ನು ರಿಲೀಸ್ ಮಾಡುತ್ತಿದ್ದೀರಿ. ಏಕೆಂದರೆ ಯಾವುದೇ ಸಣ್ಣ ಕೈಗಾರಿಕೆ ನಡೆಯಬೇಕಾದರೆ ಇಡೀ ರಾಜ್ಯದಲ್ಲಿ ತಮಗೆ ಗೊತ್ತಿದೆ, ಅದಕ್ಕೆ ಅವರ ಕಾಂಟ್ರಿಬ್ಯೂಶನ್ ಎಷ್ಟು, ಬ್ಯಾಂಕುಗಳ ಲೋನ್ ಎಷ್ಟು ಮತ್ತು ಸರ್ಕಾರ ಕೊಡುವ ಸಬ್ಸಿಡಿ ಎಷ್ಟು ಅಂತ. ಸಣ್ಣ ಕೈಗಾರಿಕೆಯನ್ನು ಶುರುಮಾಡುವ ವ್ಯಕ್ತಿ ಸಾಕಷ್ಟು ಸಾಲಸೋಲಗಳನ್ನು ಮಾಡಿರುತ್ತಾನೆ. ಅವುಗಳಿಗೆ ಏನು ಸಬ್ಸಿಡಿಯನ್ನು ಸರ್ಕಾರದಿಂದ ಕೊಡಬೇಕೋ, ಅದನ್ನು ಕಾಲಕಾಲಕ್ಕೆ ಕೊಡದೇ ಇದ್ದರೆ ಈ ಕೈಗಾರಿಕೆಗಳು ಹಾಳಾಗಿ ಹೋಗುತ್ತವೆ. ತಾವು ಇವತ್ತು ವಿಶೇಷವಾಗಿ ಇದಕ್ಕೆ 65 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೀರಿ. ನಿಜಕ್ಕೂ ರಾಜ್ಯದ ಸಣ್ಣ ಕೈಗಾರಿಕೋದ್ಯಮಿಗಳ ಪರವಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ **ಸಿದ್ಧರಾಮಯ್ಯ(ಉಪಮುಖ್ಯಮಂತ್ರಿಗಳು)**:– ಕಳೆದ ನಾಲ್ಕೈದು ವರ್ಷಗಳಿಂದ 309 ಕೋಟಿ ರೂಪಾಯಿ ಬಾಕಿ ಇತ್ತು. ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾದಂಥ ಸಬ್ಸಿಡಿಯನ್ನು ಕೊಟ್ಟಿರಲಿಲ್ಲ. ನಾವು ಈ ಸಾರಿ ಬಜೆಟ್‌ನಲ್ಲಿ 82 ಕೋಟಿ ರೂಪಾಯಿಗಳನ್ನು ಕೆ.ಎಸ್.ಎಫ್.ಸಿ.ಯಿಂದ ಸಾಲದ ಮೂಲಕ ತಂದು ಕೊಡುವ ತೀರ್ಮಾನವನ್ನು ಮಾಡಿದ್ದೆವು. ಇನ್ನು 65 ಕೋಟಿ ರೂಪಾಯಿಗಳನ್ನು ಮಾರ್ಕೆಟ್‌ನಿಂದ ಬಾರೋ ಮಾಡಿ ಕೊಡಬೇಕೆಂದು ಇತ್ತು. ಆದರೆ ಮಾರ್ಕೆಟ್‌ನಿಂದ ಬಾರೋ ಮಾಡುವುದು ಬೇಡವೆಂದು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೊಡುತ್ತಿದ್ದೇವೆ. ಸಾಲ ಮಾಡುವುದು ಬೇಡವೆಂದು ನಮ್ಮ ಉದ್ದೇಶ ಇದು ನಿಮಗೆಲ್ಲಾ ಗೊತ್ತಾಗಲಿ. ಸಾಲಕ್ಕೆ ಹೋಗುವುದು ಬೇಡವೆಂದು ರಿಸೋರ್ಸಸ್ ಮೊಬಲೈಸ್ ಮಾಡಿ ಪೂರಕ ಬೇಡಿಕೆಯಲ್ಲಿ ಕೊಟ್ಟಿದ್ದೇವೆ.

ಶ್ರೀ **ಜೆ.ಸಿ.ಮಾಧುಸ್ವಾಮಿ**:– ಆದರೆ ಕೋಳಿ ಫಾರಂಗೆ, ಇಟ್ಟಿಗೆ ಉದ್ಯಮಕ್ಕೆ ಕೊಡಬೇಡಿ ಎಂದು ನಿರ್ಬಂಧನೆಯನ್ನು ಹಾಕಿದ್ದೀರಿ.

ಶ್ರೀ ಸಿದ್ದರಾಮಯ್ಯ:– ಕೋಳಿ ಫಾರಂಗೆ ಕೊಡಬಾರದು ಎಂದು ಕೈಗಾರಿಕೆ ಇಲಾಖೆಯವರು ತೆಗೆದುಕೊಂಡಂಥ ನೀತಿ ಅದು. ಅದು ನಾನು ಮಾಡಿದ್ದು ಅಲ್ಲ. ಯಾರಿಗೆ ಸಬ್ಸಿಡಿ ಕೊಡಬೇಕು, ಯಾರಿಗೆ ಕೊಡಬಾರದು ಎಂದು ಅವರು ತೆಗೆದುಕೊಂಡ ತೀರ್ಮಾನ. ಮೊದಲು ಯಾರಿಗೆ ಕೊಡುವುದು ಬಾಕಿ ಉಳಿದಿದೆ, ಅವರಿಗೆ ಕೊಟ್ಟು ಆಮೇಲೆ ಉಳಿದವರಿಗೆ ಪರಿಶೀಲನೆ ಮಾಡಿ ಎಂದು ಕೈಗಾರಿಕಾ ಮಂತ್ರಿಗಳು ಹೇಳಿದ್ದಾರೆಯೇ ಹೊರತು ನಾನು ಕೊಡಬಾರದು ಎಂದು ಹೇಳಿಲ್ಲ. It is for the Industries Department to take a decision. ಹೀಗೆ ಕೊಟ್ಟಿದ್ದನ್ನು ತಾವು ಅಪ್ರೀಷಿಯೇಟ್ ಮಾಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ನೊಂದುಕೊಂಡು ಮಾತನಾಡಿದ್ದೇನೆ ಎಂದು ಹೇಳಿದರು. ಇದು ನೊಂದುಕೊಳ್ಳುವುದಲ್ಲ, ಖುಷಿಯಿಂದ ಮಾತನಾಡಬೇಕಿತ್ತು. ಅವರು ಏಕೆ ನೊಂದುಕೊಂಡಿದ್ದರೋ ಎಂಬುದು ನನಗೆ ಗೊತ್ತಾಗಲಿಲ್ಲ. ಇಲ್ಲಿ ನೊಂದುಕೊಳ್ಳುವ ಅವಶ್ಯಕತೆ ಇಲ್ಲ. For the information of all the Members of this House, ನಾವು ಬಜೆಟ್‌ನಲ್ಲಿ ಇರತಕ್ಕಂಥ ಪ್ಲಾನ್ ಕಟ್ ಮಾಡುವುದಕ್ಕೆ ಹೋಗಿಲ್ಲ. ಇದು ನಂಬರ್ ಒನ್. ನಂಬರ್ ಎರಡು, ಸಾಲ ತೆಗೆದುಕೊಂಡುಬಂದು ಇಲ್ಲಿ ಕೊಟ್ಟಿಲ್ಲ. ನಂಬರ್ ಮೂರು, ಇದು ಅಡಿಶನಲ್ಲ ಮೊಬಲೈಸೇಶನ್ ಆದಮೇಲೆ ಹೆಚ್ಚಿಗೆ ಕೊಡಬೇಕೆಂದು ತೀರ್ಮಾನ ಮಾಡಿರುವುದು. You must appreciate all these things. ಇನ್ನೂರು ಕೋಟಿ ರೂ ಏಕೆ ಹೆಚ್ಚಾಗಿ ಕೊಟ್ಟಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಹಾಗಾದರೆ ಬಾಕಿಗಳನ್ನು ತೀರಿಸಿ. ಕಂಟ್ರಾಕ್ಟರುಗಳಿಗೆ ಕೊಡಬೇಕಾಗಿರುವ ಬಾಕಿಗಳನ್ನು ತೀರಿಸಿ. ಕಾವೇರಿಯಲ್ಲಿರುವ ಬಾಕಿ, ಹೇಮಾವತಿಯಲ್ಲಿರುವ ಬಾಕಿಗಳನ್ನು ತೀರಿಸಿ.

ಶ್ರೀ ಸಿದ್ದರಾಮಯ್ಯ:– ಈಗ ಏನು ಮಾಡಿದ್ದೇವೆ ಎಂದರೆ 40 ಪರ್ಸೆಂಟ್ ಬಾಕಿ ಬಿಲ್ಲುಗಳಿಗೆ ಕೊಡಿ, 60 ಪರ್ಸೆಂಟ್ ಹೊಸ ಕೆಲಸಗಳಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. You must appreciate all these things. ಈ ಸರ್ಕಾರ ಬಂದಮೇಲೆ ರಿಸೋರ್ಸಸ್ ಮೊಬಲೈಸೇಶನ್ ಚೆನ್ನಾಗಿ ಆಗಿದೆ. 26.52 ಪರ್ಸೆಂಟ್. . growth never in the history of Karnataka.

ಶ್ರೀ ವಾಟಾಳ್ ನಾಗರಾಜ್:– ಓಹೋ . . . .

ಶ್ರೀ ಸಿದ್ದರಾಮಯ್ಯ:– ಓಹೋ ಎಂದು ವ್ಯಂಗ್ಯವಾಗಿ ಹೇಳುವುದಕ್ಕಿಂತ ಇದನ್ನು ನೀವು ದಯವಿಟ್ಟು ಒಪ್ಪಿಕೊಳ್ಳಬೇಕು. ಕರ್ನಾಟಕದಲ್ಲಿ ತೆರಿಗೆ ಸಂಗ್ರಹದಲ್ಲಿ ಬೆಳವಣಿಗೆ ಆಗಿರುವಷ್ಟು ಇಡೀ ದೇಶದಲ್ಲೇ ಆಗಿಲ್ಲ. Karnatka is No.1 Planning Commission has appreciated the Plan performance of the Karnataka Government.

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾವು ಸಹ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಶ್ರೀ ಸಿದ್ದರಾಮಯ್ಯ:– ಅದುಬಿಟ್ಟು ನಮಗೆ ನೋವಾಗಿಬಿಟ್ಟಿದೆ ಎಂದು ಹೇಳಿದರೆ ಹೇಗೆ? ಹೆಚ್ಚುವರಿಯಾಗಿ ದುಡ್ಡು ಕೊಟ್ಟರೂ ನೋವಾಗಿ ಬಿಟ್ಟಿದೆ, ಕೊಡದೇ ಹೋದರೂ ನೋವಾಗುತ್ತದೆ. ಎಲ್ಲಾ ಪ್ಲಾನ್ ಕಟ್ ಮಾಡಿ ಕೊಟ್ಟಿಲ್ಲ. ಹೋದಸಲ 25 ಪರ್ಸೆಂಟ್ ಪ್ಲಾನ್ ಕಟ್ ಆಗಿತ್ತು. ಅದರ ಹಿಂದಿನವರ್ಷ 30 ಪರ್ಸೆಂಟ್ ಪ್ಲಾನ್ ಕಟ್ ಆಗಿತ್ತು. This year no plan cut. ಬಜೆಟ್‌ನಲ್ಲಿ ನಾವು ಏನು ಹೇಳಿದ್ದೇವೆ ಅದರ ಪ್ರಕಾರ ಕಾರ್ಯಕ್ರಮಗಳಿಗೆ ದುಡ್ಡು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. In addition to that, addtionality has been given because ರಿಸೋರ್ಸಸ್ ಮೊಬಿಲೈಸೇಶನ್ ಜಾಸ್ತಿಯಾಗಿರುವುದರಿಂದ ಕೊಟ್ಟಿದ್ದೇವೆ ಎನ್ನುವುದನ್ನು You must appeciate this.

ಶ್ರೀ **ಬಿ.ಎಸ್.ಯಡಿಯೂರಪ್ಪ:**– ಮಾನ್ಯ ಹಣಕಾಸು ಸಚಿವರೆ, ನೀವು ತೆರಿಗೆ ಸಂಗ್ರಹ ಮಾಡುವುದರಲ್ಲಿ ಸಾಕಷ್ಟು ಶ್ರಮವಹಿಸಿದ್ದೀರಿ, ಸಾಕಷ್ಟು ಪ್ರಗತಿಯಾಗಿದೆ. ಪ್ಲಾನಿಂಗ್ ಕಮಿಷನ್ ಈ ಬಗ್ಗೆ ಅಪ್ರೀಷಿಯೇಟ್ ಮಾಡಿದೆ. ನಾವೂ ಕೂಡ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದರೆ ಅಭಿವೃದ್ಧಿ ಕಾರ್ಯಕ್ಕೆ ಹಣವನ್ನು ಕೊಡುವುದರಲ್ಲಿ, ಆ ದುಡ್ಡು ಎಲ್ಲಿಟ್ಟಿದ್ದೀರಿ ಅಂತ ನಮಗೆ ಸಂಶಯ. ಇಷ್ಟು ದೊಡ್ಡ ಪ್ರಮಾಣದಲ್ಲಿ ತೆರಿಗೆ ಹಣವನ್ನು ಇಟ್ಟಿದ್ದೀರಲ್ಲಾ, ಅದನ್ನು ಎಲ್ಲಿ ಇಟ್ಟಿದ್ದೀರಿ ಮತ್ತು ಅದು ಹೇಗೆ ಅಭಿವೃದ್ಧಿ ಕೆಲಸಗಳಿಗೆ ಖರ್ಚಾಗುತ್ತದೆ? ಮಾನ್ಯ ಹಣಕಾಸು ಸಚಿವರಲ್ಲಿ ನಾನು ಒಂದು ವಿನಂತಿಯನ್ನು ಮಾಡುತ್ತೇನೆ. ತಾವು ಒಂದು ಕೆಲಸ ಮಾಡಿ. ತಾವು ಹೇಗೂ ಮುಂದಿನ ತಿಂಗಳು ಬಜೆಟ್ ಮಂಡಿಸುವವರಿದ್ದೀರಿ. ತಾವು ಈ ಸಾರಿ ಪ್ರಮುಖವಾದಂಥ ಕ್ಷೇತ್ರಗಳಿಗೆ ಏನು ಬಜೆಟ್ ಅಲೋಕೇಷನ್ ಮಾಡಿದ್ದೀರಿ, ಆದ್ಯತೆಯ ಕ್ಷೇತ್ರಗಳಿಗೆ ಎಷ್ಟು ಇಟ್ಟಿದ್ದೀರಿ, ಎಷ್ಟು ಖರ್ಚು ಮಾಡಿದ್ದೀರಿ. ಇದನ್ನು ನೀವು ತೆಗೆದು ನೋಡಿಬಿಟ್ಟರೆ ನಿಮಗೆ ಗೊತ್ತಾಗುತ್ತದೆ. ನೀವು ಕೊನೇಪಕ್ಷ ವಿರೋಧ ಪಕ್ಷದ ಮಿತ್ರರ ಸಲಹೆಗಳನ್ನು ಪರಿಶೀಲನೆ ಮಾಡಿದರೆ ಇರುವ ಒಂದೂಮುಕ್ಕಾಲು ತಿಂಗಳಲ್ಲಿ ಪ್ರೋಗ್ರೆಸ್ ಆಗಬಹುದು ಎಂದು ನಾನು ನಿಮಗೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ **ಸಿದ್ಧರಾಮಯ್ಯ:**– ನಾನು ರಿಪೋರ್ಟನ್ನು ಸದನದ ಮುಂದೆ ಇಡುತ್ತಿದ್ದೇನೆ. ಫಿಸಿಕಲ್ ರೆಸ್ಪಾನ್ಸಿಬಲಿಟಿ ಆಕ್ಟ್ ಒಳಗೆ ಇಲ್ಲಿಯವರೆಗೆ ಅಂದರೆ ಡಿಸೆಂಬರ್‌ರವರೆಗೆ ಏನೇನಾಗಿದೆ ಅದನ್ನೂ ಕೂಡ ಇಲ್ಲಿಡುತ್ತೇವೆ. ಪ್ಲಾನ್‌ನಲ್ಲಿ ಎಷ್ಟು ಹಣ ಖರ್ಚಾಗಿದೆ, ನಾನ್ ಪ್ಲಾನ್‌ನಲ್ಲಿ ಎಷ್ಟು ಹಣ ಖರ್ಚಾಗಿದೆ ರಿಸೋರ್ಸಸ್ ಎಷ್ಟು ಮೊಬಲೈಸ್ ಆಗಿದೆ ಇತ್ಯಾದಿ ಎಲ್ಲವನ್ನೂ ಕೂಡ ಸದನದ ಮುಂದೆ ಇಡುತ್ತೇವೆ.

ಶ್ರೀ **ಬಿ.ಎಸ್.ಯಡಿಯೂರಪ್ಪ:**– ಯಾವರೀತಿ ಆದ್ಯತಾ ಕ್ಷೇತ್ರದಲ್ಲಿ ನೀವು ಹಿಂದೆ ಬಿದ್ದಿದ್ದೀರಿ ಎಂಬುದು ನಿಮಗೇ ಮನವರಿಕೆಯಾಗುತ್ತದೆ. ಇದರಿಂದ ಮುಂದೆ ಇಂಪ್ರೂವ್ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತೆ. ನಾನು ಹೇಳುತ್ತಿರುವಂಥಾದ್ದು, ಎಂಟೇ ತಿಂಗಳಲ್ಲಿ ದೊಡ್ಡ ಕ್ರಾಂತಿ ಆಗಬೇಕೆಂದು ನಾವೇನೂ ನಿರೀಕ್ಷೆ ಮಾಡುವುದಿಲ್ಲ. ನೀವು ಯಾವರೀತಿಯಲ್ಲಿ ತೆರಿಗೆ ಸಂಗ್ರಹದಲ್ಲಿ ಹೆಚ್ಚು ಒತ್ತುಕೊಟ್ಟು ಯಶಸ್ವಿಯಾಗಿದ್ದೀರೋ ಹಾಗೆಯೇ ನೀವು ಮನಸ್ಸು ಮಾಡಿದರೆ, ಟೋಲ್‌ಗೇಟ್ ಬಿಗಿ ಮಾಡಿದರೆ, ಆ ಲೂಪ್ ಹೋಲ್ಸ್ ಇನ್ನೂ ಸ್ವಲ್ಪ ಟೈಟ್ ಮಾಡಿದರೆ ಒಂದು ಸಾವಿರ ಕೋಟಿ ರೂ ನಿಮ್ಮ ಬೊಕ್ಕಸಕ್ಕೆ ಬರುತ್ತದೆ. ಮುಂದೆ ಬರುವ ದಿನಗಳಲ್ಲಿ ಅದನ್ನು ಮಾಡಿ. ಅದೇರೀತಿ ಆದ್ಯತಾ ಕ್ಷೇತ್ರಕ್ಕೆ ಹಣವನ್ನು ಬಿಡುಗಡೆ ಮಾಡುವಂಥ ಪ್ರಯತ್ನ ಮಾಡಿ. ಅಧಿಕಾರಿಗಳಿಗೆ ಸೂಚನೆ ಕೊಡಿ. 20 ವರ್ಷಗಳ ನನ್ನ ಅನುಭವದಲ್ಲಿ ಮಾನ್ಯ ರಮೇಶ್ ಕುಮಾರ್‌ರವರೆ, ತಮಗೆ ಗೊತ್ತಿದೆ. ಮಾರ್ಚ್ ಕೊನೆಯೊಳಗೆ ಪೂರ್ಣ ಮಾಡಿ ಎಂದು ಅಧಿಕಾರಿಗಳಿಂದ ಪತ್ರ ಹೋಗುತ್ತಾ ಇತ್ತು. ಆ ಕೆಲಸಗಳು ಏಕೆ ಆಗುತ್ತಾ ಇಲ್ಲ, ಆದರೆ, ಈಗೇನಾಗುತ್ತಾ ಇದೆ, ಗೋ ಸ್ಲೋ. ನಾನು ಕೇಳುತ್ತೇನೆ. 50 ಪರ್ಸೆಂಟ್ ಆದ್ಯತಾ ಕ್ಷೇತ್ರಗಳಲ್ಲಿ ಇನ್ನೂ ನೀವು ಆಡಳಿತಾತ್ಮಕ ಮಂಜೂರಾತಿ ಕೊಟ್ಟಿಲ್ಲ. ಅವರು ಏನು ಕೆಲಸ ಮಾಡುತ್ತಾರೆ? ಜಿಲ್ಲಾ ಪಂಚಾಯ್ತಿಗಳಿಗೆ, ತಾಲ್ಲೂಕು ಪಂಚಾಯ್ತಿಗಳಿಗೆ ಪೂರ್ಣ ಹಣ ಬಿಡುಗಡೆಯಾಗಿಲ್ಲ. ಅವನೇನು ಅಭಿವೃದ್ಧಿ ಮಾಡುತ್ತಾನೆ? ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಮಾತನಾಡುತ್ತಾ ಗ್ರಾಮ ಪಂಚಾಯ್ತಿಗಳಿಗೆ ಅಭಿವೃದ್ಧಿ ಹಣ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ನಿಮಗೇನು ತೊಂದರೆ? ದಯಮಾಡಿ, ಇದನ್ನೆಲ್ಲಾ ಯೋಚನೆಮಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ಹಣಕಾಸು ಸಚಿವರಿಗೆ ಅಭಿನಂದನೆ ಸಲ್ಲಿಸಿದೆ. ಸಣ್ಣ ಕೈಗಾರಿಕೆಗಳಿಗೆ 65 ಕೋಟಿ ರೂ ಬಿಡುಗಡೆ ಮಾಡಿದ್ದೀರಿ, ತುಂಬಾ ಸಂತೋಷ ಎಂದು. ಜೊತೆಜೊತೆಗೆ ನಾನು ಅವರಿಗೆ ಮನವಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ವುಮೆನ್ ಎಂಟರ್‌ಪ್ರೈಸಸ್ ಹೆಣ್ಣುಮಕ್ಕಳೂ ಕೂಡ ರಾಜ್ಯದಲ್ಲಿ ಪ್ರಾರಂಭ ಮಾಡಿರುವಂಥಾದ್ದು ಅನೇಕ ವರ್ಷಗಳಿಂದ, ಅವರ ಸ್ವಂತ ಕೈಯಿಂದ ಹಣ ಹಾಕಿದ್ದಾರೆ, ಬ್ಯಾಂಕ್ ಲೋನ್ ತಂದಿದ್ದಾರೆ, ರಾಜ್ಯಸರ್ಕಾರ ಇನ್ನೂ ಕೂಡ ಸಬ್ಸಿಡಿ ಕೊಡದೇ, ಆ ವುಮೆನ್ ಎಂಟರ್‌ಪ್ರೈಸಸ್ ಇಂಡಸ್ಟ್ರೀಗಳು ಕೂಡ ಮುಚ್ಚಿ ಹೋಗುತ್ತಾ ಇವೆ. 65 ಕೋಟಿರೂಯನ್ನು ಸಾಲ ತರದೇ ಮಾಡಿದ್ದೇನೆ, ನೀವು ಅಭಿನಂದನೆ ಸಲ್ಲಿಸಬೇಕು ಎಂದರು. ಇನ್ನೂ ಹತ್ತಿರ ಹತ್ತಿರ 300 ಕೋಟಿ ರೂಗಿಂತ ಜಾಸ್ತಿ ಸಬ್ಸಿಡಿ ಕೊಡುವುದಕ್ಕೆ ಬಾಕಿ ಇದೆ. ನೀವು 160 ಕೋಟಿ ರೂ ಎಂದು ಹೇಳುತ್ತಿದ್ದೀರಿ, ತುಂಬಾ ಸಂತೋಷ. ಆ 160 ಕೋಟಿ ರೂ ರಾಜ್ಯಸರ್ಕಾರಕ್ಕೆ ಬಹಳ ಚಿಕ್ಕದು. 10–20–50 ಸಾವಿರ 1 ಲಕ್ಷ, 2 ಲಕ್ಷ ರೂ ಸಬ್ಸಿಡಿ ಬರದೇ ಕಂಡಕಂಡವರ ಹತ್ತಿರ ಆ ಹೆಣ್ಣುಮಕ್ಕಳು ಅವರ ಬಂಗಾರವನ್ನು ಒತ್ತೆ ಇಟ್ಟು 2–3–5 ರೂ.ಗಳಂತೆ ಬಡ್ಡಿ ಕಟ್ಟಿ, ಆ ಕೈಗಾರಿಕೆಗಳು ಮುಚ್ಚುವಂಥ ಸ್ಥಿತಿಗೆ ಬಂದಿವೆ. ಬಹಳ ಸಂತೋಷ, ನೀವೇನೋ ಸಾಲ ತರದೇ ಮಾಡಿದ್ದೀರಿ ಎಂದು ಹೇಳಿದಿರಿ. ಸಾಲ ತಂದಾದರೂ ಕೂಡ ಅವರಿಗೆ ತುಂಬಿ ಕೊಡಿ. ಆ ಕೈಗಾರಿಕೆಗಳು ಮುಚ್ಚಿಹೋಗಿ, ಆ ಹೆಣ್ಣುಮಕ್ಕಳ ಶಾಪಕ್ಕೆ ಈ ಸರ್ಕಾರ ಹಾಳಾಗಿ ಹೋಗತಕ್ಕ ಸ್ಥಿತಿ ಬರಬಾರದು. ಖಂಡಿತ ಆ ಕೈಗಾರಿಕೆಗಳ ಹೆಣ್ಣುಮಕ್ಕಳ ಶಾಪ ನಿಮಗೆ ತಟ್ಟುತ್ತೆ. ಮಾನ್ಯ ಸಿದ್ದರಾಮಯ್ಯನವರಿಗೆ ಆ ಹೆಣ್ಣುಮಕ್ಕಳ ಶಾಪ ಬರುವುದು. ಏಕೆಂದರೆ, ಈಗ ತಾವು 65 ಕೋಟಿ ರೂ ಎಂದು ಹೇಳುತ್ತಿದ್ದೀರಿ. 65 ಕೋಟಿ ರೂ ಸಾಲ ತರದೇ ಮಾಡಿದ್ದೀರಿ ಎಂದು, ನಾನು ಅದಕ್ಕೆ ಅಭಿನಂದನೆ ಸಲ್ಲಿಸಿದ್ದೇನೆ. ನಿಮಗೆ ಆ ಹೆಣ್ಣುಮಕ್ಕಳ ಆಶೀರ್ವಾದ ಬರಬೇಕಾದರೆ, ಶುಭ ಕೋರಬೇಕಾದರೆ ಸಾಲವನ್ನಾದರೂ ತೆಗೆದುಕೊಂಡುಬಂದು ಇವತ್ತೇನು ಬಾಕಿ 160 ಕೋಟಿ ರೂ ಎಂದು ಹೇಳುತ್ತಿದ್ದೀರಿ, ಆ ಸಬ್ಸಿಡಿಯನ್ನು ಅವರಿಗೆ ಬಿಡುಗಡೆ ಮಾಡಿದರೆ ಖಂಡಿತ ಆ ಎಲ್ಲಾ ಕೈಗಾರಿಕೆಗಳು ಉಳಿಯುತ್ತೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಇಡೀ ರಾಜ್ಯದ ಸಣ್ಣ ಕೈಗಾರಿಕೆಗಳ ಪರವಾಗಿ ನಾನು ತಮಗೆ ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ.ಉದಾಸಿ(ಹಾನಗಲ್):- ಅಳಂದ್ ಸಕ್ಕರೆ ಕಾರ್ಖಾನೆಗೆ ತಾವು ಒಂದು ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೀರಿ. ಇಂತಹುದೇ ತೊಂದರೆಯನ್ನು ಅನುಭವಿಸತಕ್ಕ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ, ಹಾವೇರಿ ಇದೆ, ವಾಣಿ ವಿಲಾಸ್ ಇದೆ ಇವುಗಳಿಗೆ ತಾವು ಹಣ ಬಿಡುಗಡೆ ಮಾಡಲಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮಲ್ಲಿಯೂ ಇದೇ ಪರಿಸ್ಥಿತಿ ಇದೆ. ಸಂಬಳ ಕೊಡುವ ಸಲುವಾಗಿ, ಕಬ್ಬಿನ ಹಣ ಪಾವತಿ ಸಲುವಾಗಿ ಹಣ ಬೇಕಾಗಿದೆ. ಆದರೆ, ಕೇಳಿದ್ದನ್ನು ಆಳಂದ್ ಸಕ್ಕರೆ ಕಾರ್ಖಾನೆಗೆ ಕೊಟ್ಟಿರುವಾಗ, ಅಂಥಾದ್ದೇ ತೊಂದರೆ ಅನುಭವಿಸುತ್ತಿರತಕ್ಕ ನಮ್ಮ ಕಾರ್ಖಾನೆಗಳಿಗೆ ಕೊಟ್ಟಿಲ್ಲ ಎನ್ನುವುದನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಸಣ್ಣ ಕೈಗಾರಿಕೆಗಳಿಗೆ 65 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ಸ್ವಾಗತ ಮಾಡುತ್ತೇವೆ, ಅದರಲ್ಲಿ ಬೇರೆ ಮಾತೇನೂ ಇಲ್ಲ. ಆದರೆ ಕೊಡುವಾಗ ಮಾನ್ಯಮಾಧುಸ್ವಾಮಿಯವರು ಹೇಳಿದರು, ಈ ಕೋಳಿ ಸಾಕಾಣಿಕೆ, ಇಟ್ಟಿಗೆ ಕಾರ್ಖಾನೆಗಳು, ಹೆಂಚಿನ ಕಾರ್ಖಾನೆಗಳು . . . .

ಶ್ರೀ ಆರ್.ವಿ.ದೇಶಪಾಂಡೆ:– ನೀವು ಕೋಳಿಯನ್ನೇ ತಿನ್ನುವುದಿಲ್ಲ, ಕೋಳಿ ಬಗ್ಗೆ ನಿಮಗೇಕೆ ಚಿಂತೆ?

ಶ್ರೀ ವಾಟಾಳ್ ನಾಗರಾಜ್:– ನಮಗೇಕೆ, ನಿಮಗೇಕೆ ಎನ್ನುವ ಪ್ರಶ್ನೆ ಇಲ್ಲವೇ ಇಲ್ಲ. ಈಗ ಎಲ್ಲರಿಗೂ ಕೋಳಿ ಬೇಕು. ಮೊದಲನೆಯದಾಗಿ, ದೇಶಪಾಂಡೆಯವರಿಗೇ ಬೇಕು, ಅದರಲ್ಲೇನೂ ಬೇರೆ ಮಾತು ಇಲ್ಲವೇ ಇಲ್ಲ. ಇವರಿಗೆ ಐದು ಕೋಳಿ, ಮಾನ್ಯ ರಮೇಶ್ ಕುಮಾರ್‌ರವರಿಗೆ ಹತ್ತು ಕೋಳಿ. ಒಂದು ದಿನಕ್ಕೆ ಐದು ಕೆ.ಜಿ. ಅವರಿಗೆ ಬೇಕೇ ಬೇಕು. ಅವರು ಮತ್ತು ಅವರ ಸ್ನೇಹಿತರುಗಳಿಗೆ ಬೇಕು, ಅದರ ಬಗ್ಗೆ ಬೇರೆ ಪ್ರಶ್ನೆಯೇ ಇಲ್ಲ. ಆದ್ದರಿಂದ, ಕೋಳಿ ತಿನ್ನುವ ಬಗ್ಗೆ ಯಾರ್‍ಯಾರು ಎಂದು ನಾವು ವಿಗಂಡಣೆ ಮಾಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ರುಚಿ ಇರುತ್ತೆ, ಹೇಗೇಗೆ ತಿನ್ನಬೇಕು ಎಂಬುದು ತಮಗೆ ಗೊತ್ತಿದೆ. ಅದನ್ನು ಇಲ್ಲಿ ನೀವೇಕೆ ಹೇಳಿದಿರಿ ಎಂದರೆ ಹೇಗೆ? ನಾನಂತೂ ತಿನ್ನುವುದಿಲ್ಲ, ಇದು ಸ್ಪಷ್ಟ.

ಶ್ರೀ ಕೆ.ಆರ್.ರಮೇಶ್ ಕುಮಾರ್:– ಕೋಳಿ ತಿನ್ನುವುದಕ್ಕೂ ಧಂ ಬೇಕು. ನಾನು ತಿನ್ನುವುದಿಲ್ಲ ಎಂದರೆ, ಮಹಾ ದೊಡ್ಡಮನುಷ್ಯರು ಎಂದುಕೊಂಡಿರಾ . .

ಶ್ರೀ ವಾಟಾಳ್ ನಾಗರಾಜ್:– ಕೋಳಿ ತಿನ್ನುವುದಕ್ಕೂ ತಾಕತ್ತು ಬೇಕು. ನಾನು ಒಪ್ಪುತ್ತೇನೆ ಈ ಕೋಳಿ ಸಾಕಾಣಿಕೆ, ಇಟ್ಟಿಗೆ ಮತ್ತು ಹೆಂಚಿನ ಕಾರ್ಖಾನೆ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕು. ನೀವು ಅನೇಕರಿಗೆ ಸಹಾಯಧನವನ್ನು ಕೊಟ್ಟಿದ್ದೀರಿ. ಈ ಶಾಸಕರ ನಿಧಿಯನ್ನೂ ಇದರಲ್ಲೇ ತರಬಹುದಾಗಿತ್ತು. 300 ಕೋಟಿ ರೂಪಾಯಿಗಳನ್ನು ನಾವು ಶಾಸಕರ ನಿಧಿಗೆ ಕೊಟ್ಟಿದ್ದೇವೆಂದು ಇಲ್ಲಿತರಬಹುದಾಗಿತ್ತು. ಇದರಲ್ಲಿ ಹೇಳಬಹುದಾಗಿತ್ತು. ನೀವು ಎಲ್ಲವನ್ನೂ ಇದರಲ್ಲಿ ಹೇಳಿ, ಇದನ್ನು ಏಕೆ ಹೇಳಲಿಲ್ಲ? ಒಬ್ಬ ಶಾಸಕರಿಗೆ ಒಂದು ಕೋಟಿ ರೂಪಾಯಿಯಂತೆ 300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದರೆ, ಇಡೀ ಸದನದ ಎಲ್ಲಾ ಕಡೆಯಿಂದಲೂ ಅತ್ಯುನ್ನತವಾದ ಸ್ವಾಗತ ಸಿಗುತ್ತಿತ್ತು. ಏಕೆ ನೀವು ಅದರ ಬಗ್ಗೆ ಚಿಂತನೆ ಮಾಡುತ್ತಾ ಇಲ್ಲ. ಹೋದಸಾರಿ ಇಡೀ ದಿನ ನಿಮ್ಮ ಭಾಷಣ ಆಗುವವರೆಗೂ ನಾನು ಸತತವಾಗಿ ನಿಂತಿದ್ದೆ.

ಶ್ರೀ ಹಂಪನಗೌಡ ಬಾದರ್ಲಿ:– ಹೋದಸಲ ಬಜೆಟ್ ಅಧಿವೇಶನದಲ್ಲಿ ತಾವು ಆಶ್ವಾಸನೆ ಕೊಟ್ಟಿದ್ದಿರಿ. ಮುಂದಿನ ಬಜೆಟ್‌ಗೆ ಕೊಡುತ್ತೇವೆಂದು ಹೇಳಿದ್ದಿರಿ.

ಶ್ರೀ ವಾಟಾಳ್ ನಾಗರಾಜ್:– ಪೂರಕ ಬಜೆಟ್‌ನಲ್ಲಿ ತರೋಣ ಎಂದು ಎಲ್ಲೋ ಒಂದು ಕಡೆ ಹೇಳಿದ್ದಿರಿ.

ಚೇರ್ಮನ್:– ಮುಂದೆ ಬರುವ ಬಜೆಟ್‌ನಲ್ಲಿ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಹಣಕಾಸಿನ ಪರಿಸ್ಥಿತಿ ಉತ್ತಮವಾದರೆ ಕೊಡುತ್ತೇನೆ ಎನ್ನುವ ಭರವಸೆಯನ್ನು ಹಣಕಾಸಿನ ಸಚಿವರಾದ ಉಪ ಮುಖ್ಯಮಂತ್ರಿಗಳು ಹೇಳಿದ್ದರು. ನಿಮ್ಮ ಭಾಷಣದ ಪ್ರಕಾರವೇ, ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಹೇಳಿದ್ದೀರಿ; ಆರೋಗ್ಯಕರವಾಗಿದೆ, ನಮ್ಮ ರಾಜ್ಯ ಎಲ್ಲರಿಗಿಂತ ಮುಂದೆ ಇದೆ ಎನ್ನುವುದನ್ನು ಹೇಳಿದ್ದಿರಿ. ಅಂದಮೇಲೆ ತಾವು 300 ಕೋಟಿ ರೂಪಾಯಿಗಳನ್ನು ಇಲ್ಲಿ ಒದಗಿಸಬಹುದಾಗಿತ್ತು. ಏಕೆ ಉದ್ದೇಶ ಏನು? ತಕ್ಷಣಕ್ಕೆ 225 ಕೋಟಿ ರೂ.ಯನ್ನಾದರೂ ಈ ಸದನಕ್ಕೆ ಒದಗಿಸಬಹುದಾಗಿತ್ತಲ್ಲಾ ಒದಗಿಸದಿರುವುದಕ್ಕೆ ಕಾರಣ ಏನು? ಈಗ ಮುಖ್ಯಮಂತ್ರಿಗಳ ಗ್ರಾಮೀಣಾಭಿವೃದ್ಧಿ ಯೋಜನೆಯಡಿಯಲ್ಲಿ ಹಣ ಒದಗಿಸಿದ್ದೀರಿ.

ಪ್ರತಿ ಕ್ಷೇತ್ರಗಳಿಗೂ ಸಮಾನಾಂತರವಾಗಿ, ಎಲ್ಲಿ ನಿಜಕ್ಕೂ ತೊಂದರೆ ಇದೆ, ರಸ್ತೆಗಳಿಗೆಲ್ಲ ಅಪಾಯ ಇದೆ, ಎಲ್ಲಿ ನಿಜವಾಗಿಯೂ ಮಾಡಬೇಕಾಗಿರತಕ್ಕಂಥಾದ್ದನ್ನು, ಮಾಡಬೇಕು. ಯಾರೋ ಒತ್ತಡಕ್ಕೆ, ಯಾವುದೋ ರಾಜಕಾರಣಕ್ಕೆ, ಯಾವುದೋ ಕ್ಷೇತ್ರಕ್ಕೆ ಮಾಡುವುದಕ್ಕಿಂತ ಹೆಚ್ಚಾಗಿ, ಪ್ರತಿ ಕ್ಷೇತ್ರಗಳಿಗೂ ಸಮಾನವಾಗಿ, ನಿಜವಾಗಿಯೂ ಏನು ಮಾಡಬೇಕೆಂಬ ಬಗ್ಗೆ ತಾವು ಒಂದು ಚಿತ್ರ ತರಿಸಿ, ಅದಕ್ಕೆ ಹಂಚಿಕೆ ಮಾಡುವುದು ಒಳ್ಳೆಯದು.

ಶ್ರೀ ಸಿದ್ದರಾಮಯ್ಯ(ಉಪ ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ ರೂರಲ್ ಡೆವಲಪ್‌ಮೆಂಟ್ ಇಲಾಖೆಯಿಂದ ಸುಮಾರು 78 ಕೋಟಿ ರೂಪಾಯಿಗಳಷ್ಟು ಎಲ್ಲಾ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಅದನ್ನು ಡಾ: ನಂಜುಂಡಪ್ಪನವರ ವರದಿ ಆಧಾರ ಇಟ್ಟುಕೊಂಡು 114 ತಾಲ್ಲೂಕುಗಳಿಗೆ, ಅದರಲ್ಲಿ ಮೋಸ್ಟ್ ಬ್ಯಾಕ್‌ವರ್ಡ್, ಮೋರ್ ಬ್ಯಾಕ್‌ವರ್ಡ್, ಬ್ಯಾಕ್‌ವರ್ಡ್ ಅಂತ ಇದ್ದಾವಲ್ಲಾ ಅದನ್ನೂ ಕೂಡ ಗಮನದಲ್ಲಿ ಇಟ್ಟುಕೊಂಡು ಕೊಟ್ಟಿದ್ದಾರೆ. ಈಗ ಹೆಗ್ಗಡೆದೇವನಕೋಟೆಗೆ 40 ಲಕ್ಷ ರೂ ಹೋಗಿದೆ. ನಮ್ಮ ತಾಲ್ಲೂಕಿಗೆ 12 ಲಕ್ಷ ರೂ ಬಂದಿದೆ. ಚಾಮರಾಜನಗರಕ್ಕೂ ಜಾಸ್ತಿ ಹೋಗಿದೆ. ಅಲ್ಲಿ ಯಾವ ಯಾವುದು ಮೋಸ್ಟ್ ಬ್ಯಾಕ್‌ವರ್ಡ್ ಅಂತ 39 ತಾಲ್ಲೂಕುಗಳನ್ನು ಗುರುತಿಸಿದ್ದಾರೆ ಅದರಲ್ಲಿ ಬಾಗೇಪಲ್ಲಿ, ಕೋಲಾರ ಜಿಲ್ಲೆ, ಪಾವಗಡ ತುಮಕೂರು ಜಿಲ್ಲೆಯಲ್ಲಿ, ಎಲ್ಲೆಲ್ಲಿ ಜಾಸ್ತಿ ಮಾಡಿದ್ದಾರೆ ಅಲ್ಲಿ ಕೊಟ್ಟಿದ್ದಾರೆ. ಇಷ್ಟ ಬಂದ ಹಾಗೆ ಎಲ್ಲೂ ಕೊಟ್ಟಿಲ್ಲ. ಒಂದೇ ತರಹ ಕೊಟ್ಟಿದ್ದಾರೆ. ಡಾ: ನಂಜುಂಡಪ್ಪನವರ ವರದಿಯನ್ನು ಆಧಾರವಾಗಿಟ್ಟು ಕೊಂಡು ಮೋಸ್ಟ್ ಬ್ಯಾಕ್‌ವರ್ಡ್ ಮೋರ್ ಬ್ಯಾಕ್‌ವರ್ಡ್ ಬ್ಯಾಕ್‌ವರ್ಡ್ ಮತ್ತು ಬೇರೆ ತಾಲ್ಲೂಕುಗಳು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೆ ಹಂಚಿರುವುದು ಎನ್ನುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಸಡಕ್ ಯೋಜನೆಯಲ್ಲಿ ಡೈಲಿವೇಜಸ್ ಪಗಾರ ಹೋಗಿದೆ ನಮ್ಮಲ್ಲಿ 4 ಕೋಟಿ ರೂ.ಯಲ್ಲಿ 2 ಕೋಟಿ ರೂ.ಡೈಲಿವೇಜಸ್‌ಗೆ ಪಗಾರ ಹೋಗಿದೆ, ಡೆವಲಪ್‌ಮೆಂಟ್ ಏನೂ ಆಗಿಲ್ಲ. ರೋಡಿಗೆ ಕೊಟ್ಟಿದ್ದು, ಸಂಬಳಕ್ಕೆ ಹೋಗಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ...

ಶ್ರೀ ಆರ್.ಧ್ರುವ ನಾರಾಯಣ್:- ಮಾನ್ಯ ಅಧ್ಯಕ್ಷರೆ ನಮ್ಮ ತಾಲ್ಲೂಕಿನಲ್ಲಿ ಸಿ.ಆರ್.ಎಫ್ ಹಣ ಬಿಡುಗಡೆ ಮಾಡಿದ್ದಾರೆ. ಅದೆಲ್ಲವೂ ಕೂಡ ಡಾ: ನಂಜುಂಡಪ್ಪ ವರದಿ ಆಧರಿಸಿ ಯಾವುದು ಹಿಂದುಳಿದ ತಾಲ್ಲೂಕು ಇದೆಯೋ ಅದನ್ನು ಆಧರಿಸಿ ಹಣ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ ಲೋಕೋಪಯೋಗಿ ಇಲಾಖೆಯಲ್ಲಿ ಆ ತರಹ ಮಾಡಿಲ್ಲ. ಇವತ್ತು ಆರ್.ಡಿ.ಪಿ.ಆರ್.ನಲ್ಲಿ ಮಾಡಿದ್ದಾರೆ. ಅದೇ ತರಹ ಲೋಕೋಪಯೋಗಿ ಇಲಾಖೆಯಲ್ಲಿಯೂ ಮಾಡಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಸಕ್ಕರೆ ಕಾರ್ಖಾನೆಗಳಿಗೆ ನೀವು ಹಣ ಒದಗಿಸಿದ್ದೀರಿ. ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ ಅದನ್ನು ಉಳಿಸುವ ಬಗ್ಗೆ ಅದು ಸಂಪೂರ್ಣ ನಾಶದ ಅಂಚಿನಲ್ಲಿದೆ, ಅಲ್ಲಿನ ರೈತರು ಬೀದಿ ಪಾಲಾಗಿದ್ದಾರೆ. ಕಾರ್ಮಿಕರು ಬೀದಿ ಪಾಲಾಗಿದ್ದಾರೆ, ಆ ಮಹದೇಶ್ವರ ಸಕ್ಕರೆ ಕಾರ್ಖಾನೆ ಉಳಿಸುವ ಬಗ್ಗೆ ತಮ್ಮ ಸರ್ಕಾರ ಕೈಗೊಂಡಿರತಕ್ಕಂಥ ಕ್ರಮ ಏನು? ಈಗ ಕೆಲವು ಕಡೆ ಅನುಕೂಲ ಮಾಡುತ್ತಿದ್ದೀರಿ.

ಮುಚ್ಚಿರತಕ್ಕಂಥ ಸಕ್ಕರೆ ಕಾರ್ಖಾನೆಗಳನ್ನು ತೆಗೆಯುತ್ತಿಲ್ಲ ಅದರಲ್ಲಿ ಬಹಳ ಪ್ರಾಮುಖ್ಯವಾಗಿ ಮಹದೇಶ್ವರ ಸಕ್ಕರೆ ಕಾರ್ಖಾನೆ ಅತಿ ಮುಖ್ಯವಾಗಿ ಅದರ ಬಗ್ಗೆ ಅದರ ನೀತಿ ಬಗ್ಗೆ ಅದು ಮುಂದೆ ಆರಂಭ ಮಾಡುವ ಬಗ್ಗೆ ಅಥವಾ ಅದನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದೀರಾ. ಸರ್ಕಾರದ ನೀತಿ ಏನು, ಸರ್ಕಾರದಿಂದ ಸಹಾಯಧನ ಕೊಡುತ್ತೀರಾ, ಅದನ್ನು ಉಳಿಸತಕ್ಕಂಥಾದ್ದಕ್ಕೆ ಏನೇನು ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಬೇಕು. ಆದಾದ ಮೇಲೆ ಈ ಪ್ಯಾಕೇಜ್‌ಗಳು ಇದು ಒಂದು ತರಹ ದೊಡ್ಡ ಪ್ಯಾಕೇಜ್ ಮಾರಿ ಇದ್ದಂತೆ. ನನಗೆ ಅರ್ಥವಾಗುತ್ತಿಲ್ಲ. ಈಗ ಬಳ್ಳಾರಿಗೆ ಒದಗಿಸಿದ್ದೀರಿ. ಮಂಡ್ಯಕ್ಕೆ ಒದಗಿಸಿದ್ದೀರಿ, ಯಾರ್ಯಾರು ಮುಖ್ಯಮಂತ್ರಿಗಳು ಬರುತ್ತಾರೆ, ಯಾರ್ಯಾರು. . . .

ಶ್ರೀ **ಹೆಚ್.ಡಿ.ಬಸವರಾಜು**:- ಮಾನ್ಯ ಅಧ್ಯಕ್ಷರೆ ಹಿಂದಿನ ಮುಖ್ಯಮಂತ್ರಿಗಳು ಕೊಡಗು ಜಿಲ್ಲೆಗೆ ಪ್ಯಾಕೇಜ್ ಘೋಷಣೆ ಮಾಡಿದ್ದರು. ಆದರೆ ಅದು ಇದರಲ್ಲಿ ಸೇರಿಲ್ಲ. ಬಳ್ಳಾರಿಯನ್ನು ಆಯ್ಕೆ ಮಾಡಿದ್ದೀರಿ, ಮಂಡ್ಯ ಜಿಲ್ಲೆಯನ್ನು ಆಯ್ಕೆ ಮಾಡಿದ್ದೀರಿ, ಕೊಡಗು ಬಿಟ್ಟಿದ್ದೀರಿ. ಆದ್ದರಿಂದ ಕೊಡಗು ಜಿಲ್ಲೆಯನ್ನೂ ಸಹ ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ **ವಾಟಾಳ್ ನಾಗರಾಜ್**:- ಯಾರು ಮುಖ್ಯಮಂತ್ರಿಗಳಾಗಿ ಬರುತ್ತಾರೆ ಅವರು ಒಂದು ಪ್ಯಾಕೇಜ್ ಘೋಷಣೆ ಮಾಡುವುದು. ಉಪ ಮುಖ್ಯಮಂತ್ರಿಗಳು ಅವರು ಒಂದು ಪ್ಯಾಕೇಜ್ ಮಾಡುವುದು, ಮಂತ್ರಿಗಳದ್ದು ಒಂದು ಪ್ಯಾಕೇಜ್ ಇದು ಸರಿಯೇ? ಇದರ ಉದ್ದೇಶ ಏನಿದೆ? ಇದು ಸರಿಯಾದುದು ಅಲ್ಲ. ಈ ಬಗ್ಗೆ ಸರ್ಕಾರಕ್ಕೆ ಒಂದು ಸ್ಪಷ್ಟವಾದ ನಿಲುವು ಬೇಕು. ಈ ವಿಧಾನಕ್ಕೆ ತಾವು ಅವಕಾಶ ಕೊಡಬಾರದು ಅಂತ ಹೇಳುತ್ತೇನೆ. ಬೀದರ್ ಜಿಲ್ಲೆಗೆ ಪ್ಯಾಕೇಜ್ ಇಲ್ಲ. ಬೆಳಗಾಂ ಜಿಲ್ಲೆಗೆ ಪ್ಯಾಕೇಜ್ ಇಲ್ಲ. ರಾಯಚೂರು ಜಿಲ್ಲೆಗೆ ಪ್ಯಾಕೇಜ್ ಇಲ್ಲ. ಹಿಂದೆ ಮಂಡ್ಯ ಜಿಲ್ಲೆಯವರು ಮುಖ್ಯಮಂತ್ರಿಗಳಾಗಿದರೂ ಮಂಡ್ಯ ಜಿಲ್ಲೆಗೆ ಒಂದು ಪ್ಯಾಕೇಜ್. ಇದು ಆರೋಗ್ಯಕರವಾದ ಬೆಳವಣಿಗೆ ಅಲ್ಲ. ಇದಾದ ಮೇಲೆ ಜಯಲಲಿತರವರ ವಿಚಾರಣೆಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡುವುದು, ಕಾರಣ ಕರ್ನಾಟಕ ರಾಜ್ಯ ಶಾಂತಿಪ್ರಿಯವಾದ ರಾಜ್ಯ, ಆದ್ದರಿಂದ ಇಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸಿ ವಿಚಾರಣೆ ನಡೆಸುವುದು ಅವರು ಕರ್ನಾಟಕ ರಾಜ್ಯಕ್ಕೆ ಕಾವೇರಿ ವಿಷಯದಲ್ಲಿ ಮಾಡಿರತಕ್ಕಂಥ ಅನ್ಯಾಯ, ಕರ್ನಾಟಕ ರಾಜ್ಯದ ಜನರ ಬಗ್ಗೆ ಅವರು ತೋರಿಸಿರತಕ್ಕಂಥ ಅಗೌರವ, ಅವರು ಕರ್ನಾಟಕ ವಿರುದ್ಧ ಈಗಲೂ ಹೋರಾಟ ನಡೆಸುತ್ತಿದ್ದಾರೆ. ಕರುಣಾನಿಧಿಯವರು ಒತ್ತಾಯಕ್ಕೆ ಮಣಿದು ನ್ಯಾಯ ಮಂಡಳಿಯನ್ನು ರಚನೆ ಮಾಡಿ ಅದರ ಮುಂದೆ ನಾವು ಹೋಗಿ, ಈಗ ಅನುಭವಿಸುತ್ತಿರುವ ಸಂಕಟ, ಇದನ್ನೆಲ್ಲಾ ನೋಡಿದರೆ ನೀವು ಸುಪ್ರೀಂ ಕೋರ್ಟ್‌ಗೆ ಹೇಳಬೇಕಾಗಿತ್ತು, ಕರ್ನಾಟಕ ರಾಜ್ಯದಲ್ಲಿ ನಾವು ಅವರಿಗೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. ಇದು ನಮಗೆ ಬೇಕಾಗಿಲ್ಲ, ನಾವು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಬೇಕಾಗಿತ್ತು. ಕರ್ನಾಟಕ ರಾಜ್ಯ ಏನಾಗಿದೆ ಅಂದರೆ ಮೊನ್ನೆ ಪತ್ರಿಕೆಗಳಲ್ಲಿ ನಾನು ನೋಡಿದೆ ಬಿಹಾರದ ಅಪ್ಪು ಯಾದವ್ ಅವರನ್ನು ಕರ್ನಾಟಕದ ಜೈಲಿಗೆ ಕಳುಹಿಸಿಕೊಡಿ ಅಂತ. ಕರ್ನಾಟಕ ರಾಜ್ಯ ಅದರಲ್ಲೂ ಬೆಂಗಳೂರು ನಗರ ಎಲ್ಲರಿಗೂ ಬೇಕು. ಮಾಜಿ ಪ್ರಧಾನಿಗಳಿಗೆ ಇಲ್ಲಿ ಸೈಟ್ ಬೇಕು. ಮಾಜಿ ರಾಷ್ಟ್ರಪತಿಗಳಿಗೆ ಇಲ್ಲಿ ಸೈಟ್ ಬೇಕು. ಮಾಜಿ ರಾಜ್ಯಪಾಲರಿಗೆ ಇಲ್ಲಿ ಸೈಟ್ ಬೇಕು. ಬೆಂಗಳೂರು ನಗರ ಒಂದು ರೀತಿ ವಿಶ್ರಾಂತಿ ಧಾಮವಾಗಿದೆ. ಇದು ಸರಿಯಲ್ಲ. ಈ ಬಗ್ಗೆ ಸರ್ಕಾರ ಒಂದು ನೀತಿ ಮಾಡಬೇಕು. ಈ ರಾಜ್ಯವನ್ನು ಯಾವ ಯಾವುದೋ ರೂಪದಲ್ಲಿ ಲೂಟಿ ಹೊಡೆದು ಈ ರಾಜ್ಯವನ್ನು ನಾಶ ಮಾಡತಕ್ಕಂಥ ದಿಕ್ಕಿಗೆ ತಲುಪತಕ್ಕಂಥಾದ್ದು, ಈ ವಿಧಾನಗಳು. ಈ ವಿಧಾನಕ್ಕೆ ತಾವು ಅವಕಾಶ ಕೊಡಬಾರದು ಅಂತ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಸಕ್ಕರೆ ಕಾರ್ಖಾನೆಗಳ ಬಗ್ಗೆ ಬಹಳಷ್ಟು ಚರ್ಚೆಯಾಯಿತು. ಅದಕ್ಕಿಂತ ಮುಂಚೆ ಸಬ್ಸಿಡಿಯನ್ನು ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ತಾವು ಹಣ ಕೊಟ್ಟರೆ ಪುನಃ ಅಭಿನಂದಿಸಿ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ಕಾರಣ ಹೇಳುತ್ತೇನೆ, ತಾವು ಇಲ್ಲಿ ನೋಡಿ, ಆಳಂದ್ ಸಕ್ಕರೆ ಕಾರ್ಖಾನೆಗೆ ಒಂದು ಲಕ್ಷ, ನಾರಾಂಜಕ್ಕೆ 12 ಕೋಟಿ, ರೂ ಸೋಮೇಶ್ವರಕ್ಕೆ 10 ಕೋಟಿ ರೂ ಮಾರ್ಕಂಡೇಯಕ್ಕೆ 10 ಕೋಟಿ, ರೂ ನಮ್ಮ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಮೃದು 5 ಕೋಟಿ ರೂ ಸಾಲ ಕೊಡುತ್ತೇವೆಂದು ಹೇಳಿ ಕೊಟ್ಟಿದ್ದು 1 ಕೋಟಿ 92 ಲಕ್ಷ ರೂ.

ಶ್ರೀ ಆರ್.ವಿ.ದೇಶಪಾಂಡೆ(ಸಹಕಾರ ಸಚಿವರು):- ಈಗ ತಾವೇನು ಐದಾರು ಸಕ್ಕರೆ ಕಾರ್ಖಾನೆಗಳ ಹೆಸರನ್ನು ಹೇಳುತ್ತೀರಲ್ಲಾ, ಅವಕ್ಕೆ ಎನ್‌ಸಿಡಿಸಿಯಿಂದ ಹಣ ಮಂಜೂರಾದ ನಂತರ ಅ ಹಣ ನೇರವಾಗಿ ಸಕ್ಕರೆ ಕಾರ್ಖಾನೆಗೆ ಹೋಗುವುದಿಲ್ಲ. ಆ ಹಣ ಸರ್ಕಾರದ ಖಜಾನೆಗೆ ಬರುತ್ತದೆ ಅವರ ಮುಖಾಂತರ ಕೊಡಲಾಗುತ್ತದೆ. ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಕೊಟ್ಟ ಹಣ ಗೌರ್ನಮೆಂಟ್ ಟ್ರೆಜರಿಯಿಂದ ಸಾಲ ಕೊಟ್ಟಿದ್ದು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ನಾನು ಅದಕ್ಕೆ ಹೇಳಿದ್ದು, ಬ್ರಹ್ಮಾವರದ ಸಕ್ಕರೆ ಕಾರ್ಖಾನೆಯ 50 ಎಕರೆ ಜಾಗವನ್ನು ಮಾರಾಟ ಮಾಡಿ, ರೈತರಿಗೆ ಹಣ ಕೊಡುವುದಕ್ಕೆ ಹಣ ಕೊಟ್ಟಿದ್ದರೂ ಸಹ ಅವರಿಗೆ ಮರು ಪಾವತಿ ಮಾಡುವುದಕ್ಕೆ, ರೈತರ ಹಣ, ಕಾರ್ಮಿಕರ ಹಣ ಕೊಡುವುದಕ್ಕೆ ಜಾಗ ಮಾರಾಟ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ. ನಾನೇನು ಕೇಳಿಕೊಳ್ಳುತ್ತೇನೆಂದರೆ, ಈಗ ಸರ್ಕಾರದಿಂದ ಹಣ ಕೊಡಿ, ಏನು ಮಾರಾಟವಾಗಿ ಹಣ ಬರುತ್ತದೆಯೊ ನೀವು ಅದನ್ನು ಅಡ್ಜೆಸ್ಟ್ ಮಾಡಿಕೊಳ್ಳಿ. ಏಕೆಂದರೆ ಇವತ್ತು ಕಾರ್ಮಿಕರಿಗೆ ಊಟಕ್ಕೂ ಗತಿ ಇಲ್ಲ. ತಕ್ಷಣದಲ್ಲಿ ನೀವು ಕೊಡದೆ ಇದ್ದರೆ ಸಹಕಾರಿ ಸಂಸ್ಥೆಗಳು ಉಳಿಯುವುದಿಲ್ಲ, ಇದನ್ನು ಆಲೋಚನೆ ಮಾಡಿ ಇವತ್ತು ಹಣ ಕೊಡಿ, ಮಾರಾಟವಾಗಿ ಬಂದ ಹಣವನ್ನು ಇದಕ್ಕೆ ಅಡ್ಜೆಸ್ಟ್ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಹಣಕಾಸಿನ ಸಚಿವರೊಡನೆ ಮಾತನಾಡಿ ಪರಿಶೀಲನೆ ಮಾಡುತ್ತೇವೆ. ಏಕೆಂದರೆ, ನಮಗೆ ಸಕ್ಕರೆ ಕಾರ್ಖಾನೆಯಿಂದ ಏನು ಪ್ರಸ್ತಾವನೆ ಬಂತೆಂದರೆ ಇಷ್ಟು ಹಣ ಬಾಕಿ ಇದೆ, ಇಷ್ಟು ಜಾಗ ಮಾರಾಟ ಮಾಡುವುಕದಕ್ಕೆ ನಮಗೆ ಅನುಮತಿ ಕೊಡಿ ಎಂದು ನಮಗೆ ಬರೆದರೆ ತಕ್ಷಣ ಅನುಮತಿಯನ್ನು ನಾವು ಕೊಟ್ಟು, ಟ್ರಾನ್ಸ್‌ಪರೆಂಟ್ ಆಗಿ ಪಬ್ಲಿಕ್ ಆಕ್ಷನ್ ಮುಖಾಂತರ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಈಗ ತಾವೇನು ಸಲಹೆ ಕೊಡುತ್ತಿದ್ದೀರಲ್ಲಾ, ಸರ್ಕಾರದಿಂದ ತಕ್ಷಣ ಕೊಡುವುದಕ್ಕೆ ಕಷ್ಟವಾಗಬಹುದು ನಮ್ಮ ಅಪೆಕ್ಸ್, ಡಿಸಿಸಿ ಬ್ಯಾಂಕ್ ಜೊತೆ ಮಾತನಾಡಿ ಏನಾದರೂ ಸಾಧ್ಯವಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ಅಪೆಕ್ಸ್ ಬ್ಯಾಂಕ್ ಮತ್ತು ಡಿಸಿಸಿ ಬ್ಯಾಂಕ್‌ನಿಂದ ಕೊಡಿಸಿದರೆ ಸಾಕು, ಅದೊಂದು ಒಳ್ಳೆಯ ಕೆಲಸವಾಗುತ್ತದೆ. ಇನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು, ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ಯೋಜನೆ ದಯವಿಟ್ಟು ಆ ಒಂದು ವ್ಯವಸ್ಥೆ ಹೇಗಾಗಿದೆ ಎಂದು ತರಿಸಿ ನೋಡಿದರೆ, ನೀವು ನಿಮಗೆ 12 ಲಕ್ಷ ರೂಪಾಯಿ ಬಂದಿದೆ ಎಂದು ಹೇಳಿದಿರಿ, ಒಂದು ಭಾಗ ಪಟ್ಟಣ ಪ್ರದೇಶವಿದೆ, ನಿಮ್ಮದು ಒಂದು ಭಾಗ ಗ್ರಾಮೀಣ ಪ್ರದೇಶವಿರಬಹುದು, ಆದರೆ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಿ, ನೀವು ರಸ್ತೆಗೆ ಹಣ ಕೊಡುವಾಗ ಅಭಿವೃದ್ಧಿಗೆಂದು ಹೇಳಿದರೆ, ನಾನು ಕೇಳುವುದು, ಪ್ರತಿಯೊಂದು ಏರಿಯಾದಲ್ಲಿ ಎಷ್ಟು

ಕಿ.ಲೋ.ಮೀಟರ್ ರಸ್ತೆ ಇದೆ, ಯಾವ ಕಂಡೀಷನ್ ಇದೆ ಯಾವ ಕ್ಲೈಮೆಟಿಕ್ ಕಂಡೀಷನ್ ಇದೆ, ಇದನ್ನು ನೋಡಿಕೊಂಡು ಕೊಡುವುದು ಬಿಟ್ಟು, ನಾನು ಬೆಳಿಗ್ಗೆ ಮಾತನಾಡುವಾಗ ತಾವು ಇರಲಿಲ್ಲ, ನಮ್ಮನ್ನು ತೆಗೆದುಕೊಂಡು ಹೋಗಿ ಉತ್ತರ ಕರ್ನಾಟಕದ ರೀತಿಯಾಗಿ ಮಾಡಬೇಡಿ. ನಮ್ಮಲ್ಲಿ ಮಳೆ ಬಂದಾಗ ನೀವು ಎಷ್ಟು ರಸ್ತೆ ದುರಸ್ತಿ ಮಾಡಿದರೂ ಉಳಿಯುವುದಿಲ್ಲ, ಅದನ್ನು ಅಧಿಕಾರಿಗಳು ನೋಡಬೇಕು. ಕೇವಲ ಇಲ್ಲಿ ಕುಳಿತುಕೊಂಡು ಲೆಕ್ಕಾ ಹಾಕಿ ರಸ್ತೆಗೆ ಹಣವನ್ನು ಕೊಟ್ಟರೆ, ಅಲ್ಲಿ ನಾವು ಉತ್ತರ ಹೇಳಬೇಕು. ಈಗ ತಾಲ್ಲೂಕಿಗೆ 21 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ನನ್ನ ಕ್ಷೇತ್ರದಲ್ಲಿ ಮೂರು ತಾಲ್ಲೂಕುಗಳು ಇದೆ; ನಾಲ್ಕುವರೆ ಲಕ್ಷ ಬರುತ್ತದೆ, ಮಾನ್ಯ ದೇಶಪಾಂಡೆಯವರದು ಹೇಗಾಗಿದೆಯೋ ಗೊತ್ತಿಲ್ಲ. ಕಳೆದ ಬಾರಿ ಯಾವ್ಯಾವ ಕ್ಷೇತ್ರಕ್ಕೆ ಕಡಿಮೆ ಹಣವನ್ನು ಕೊಟ್ಟಿದ್ದೀರಿ, ಅದರ ಜೊತೆಗೆ ಸೇರಿಸಿಕೊಡುವುದಕ್ಕೆ ಪ್ರಯತ್ನ ಮಾಡಿ. ಈಗ 100 ಕೋಟಿ ಕೊಡುತ್ತಿದ್ದೀರಿ, ಇಲ್ಲಿ ಬಿಲ್ ಪಾಸ್ ಮಾಡುವುದು ಅಲ್ಲಿ ಹೋಗಿ ನಾವು ಬೈಯಿಸಿಕೊಳ್ಳುವುದು ಇದು ಆಗಬಾರದು. ದಯವಿಟ್ಟು ನಿಮ್ಮ ಅಧಿಕಾರಿಗಳಿಗೆ ಹೇಳಿ, ಆ ಭಾಗದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಿ ನಮ್ಮ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಿ ಹಣವನ್ನು ವಿತರಣೆ ಮಾಡುವಾಗ ಸರಿಯಾಗಿ ಮಾಡಿ. ಡಿ.ಎಂ.ನಂಜುಂಡಪ್ಪ ವರದಿಯನ್ನು ಜಾರಿಗೆ ತಂದಿದ್ದೀರಿ, ಆಹಾರ ಧ್ಯಾನವನ್ನು ಕೊಡಿ, ನಮ್ಮ ಭಾಗಕ್ಕೆ ಬೇಕಾಗುವುದಿಲ್ಲ ಎಂದೇನೂ ಇಲ್ಲ ಅಲ್ಲ ಅದರ ಅಗತ್ಯವಿದೆ. ಬೆಳಿಗ್ಗೆ ಇನ್ನೊಂದು ಪ್ರಶ್ನೆಯನ್ನು ಕೇಳಿದೆ, ಇಷ್ಟರವರೆಗೆ ಅನುದಾನವನ್ನು ಕೊಟ್ಟಿದ್ದರಲ್ಲಿ ನಮ್ಮ ಭಾಗಕ್ಕೆ ಜಾಸ್ತಿ ಆ ಭಾಗಕ್ಕೆ ಕಡಿಮೆ ಕೊಡಲಾಗಿದೆಯೇ ಇಲ್ಲವಲ್ಲ. ಅಲ್ಲಿ ಸರಿಯಾಗಿ ಉಪಯೋಗ ಮಾಡದ್ದಕ್ಕೆ ಯಾರನ್ನು ಹೊಣೆ ಮಾಡುತ್ತೀರಿ, ನಮ್ಮ ಜನರಿಗೆ ಶಿಕ್ಷೆ ಕೊಡುತ್ತೀರಾ? ಆದಾಗಬಾರದು, ದಯವಿಟ್ಟು ಇದನ್ನು ಪರಿಗಣಿಸಿ, ಯಾವ ಭಾಗಕ್ಕೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ ಆ ಭಾಗಕ್ಕೆ ಜಾಸ್ತಿ ಹಣವನ್ನು ಕೊಡಿ, ಎಲ್ಲಾ ಕಡೆಗೆ ಒಂದೇ ಕೊಟ್ಟಾಗ ಪುನಃ ಅಲ್ಲಿ ಅಭಿವೃದ್ಧಿಯಾಗಲಿಲ್ಲವೆಂದು ಹೇಳುವುದು, ಯಾವ ಕಾರಣಕ್ಕಾಗಿ ಅಭಿವೃದ್ಧಿಯಾಗಲಿಲ್ಲ, ಯಾರು ಅಭಿವೃದ್ಧಿ ಮಾಡಲಿಲ್ಲ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. ಅದನ್ನು ಬಿಟ್ಟು ಪುನಃ ಹಣ ಕೊಟ್ಟರೆ ಪುನಃ ಅದೇ ಪರಿಸ್ಥಿತಿ, ಹಣ ಖರ್ಚಾಗುವುದಿಲ್ಲ, ಪುನಃ ನಮ್ಮನ್ನು ಉತ್ತರ ಕರ್ನಾಟಕದವರ ಪರಿಸ್ಥಿತಿ ಬರಬಹುದು, ದಯವಿಟ್ಟು ಇದನ್ನು ಮಾಡಬೇಡಿ. ಆಟೋ ರಿಕ್ಷಾಗಳಿಗೆ ಕಿಟ್ ಕೊಡುವುದು ನನಗೆ ಗೊತ್ತಾಗಲಿಲ್ಲ.

ಶ್ರೀ ಸಿದ್ಧರಾಮಯ್ಯ:— ಡೀಸೆಲ್ ಪೆಟ್ರೋಲ್‌ನಿಂದ ಬದಲಾವಣೆ ಮಾಡಿಕೊಂಡು ಯಾರು ಗ್ಯಾಸ್ ಅಳವಡಿಸಿಕೊಂಡು ವಾಹನ ಓಡಿಸುತ್ತಾರೆ, ಅವರಿಗೆ ಸಬ್ಸಿಡಿಯನ್ನು ಕೊಡ್ತೇವೆ, ಪಲ್ಯೂಷನ್ ಕಡಿಮೆಯಾಗಲಿ ಎನ್ನುವ ಕಾರಣ ಮಾಡುತ್ತಿದ್ದೇವೆ, ಇದೊಂದು ರೀತಿ ಇನ್‌ಸೆಂಟಿವ್.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:— ಅದನ್ನು ಕೇವಲ ಬೆಂಗಳೂರಿಗೆ ಮಾತ್ರ ಜಾರಿಗೆ ತಂದಿದ್ದಿರಿ. ಎಲ್ಲಾ ಗ್ರಾಮೀಣ ಪ್ರದೇಶಕ್ಕೆ ಇದನ್ನು ತರಬೇಕಾಗುತ್ತದೆ ನಮ್ಮಲ್ಲಿ ಇಲ್ಲ, ಜಿಲ್ಲಾ ಹೆಡ್‌ಕ್ವಾರ್ಟಸ್‌ಗೆ ಬೆಂಗಳೂರು ಸಿಟಿಗೆ ಮಾತ್ರ ಇದೆ. ಈ ವ್ಯವಸ್ಥೆಯನ್ನು ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡಬೇಕಾಗುತ್ತದೆ. ತಾಲ್ಲೂಕು ಹೆಡ್ ಕ್ವಾರ್ಟ್ರಸ್‌ಗೆ ಏತಕ್ಕೆ ಬೇಡ? ಎಲ್ಲಾ ಭಾಗಕ್ಕೂ ಬೇಕಾಗುತ್ತದೆ. ಇದರಿಂದ ಅಲ್ಲಿ ಸ್ವಲ್ಪ ಬಾಡಿಗೆಯಾದರೂ ಕಡಿಮೆಯಾಗಲಿ, ಗ್ಯಾಸ್ ಸಿಲಿಂಡರ್ ಫಿಟ್ ಮಾಡಿದಾಗ ಗ್ರಾಮೀಣ ಪ್ರದೇಶದ ಜನರಿಗೂ ಕೂಡ ಇದರಿಂದ ಸಹಾಯವಾಗುತ್ತದೆ. ಪುನಃ ರಸ್ತೆ ಹಣವನ್ನು ವಿತರಣೆ ಮಾಡುವಾಗ ಸರಿಯಾಗಿ ನೋಡಿಕೊಳ್ಳಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್(ಶ್ರೀನಿವಾಸಪುರ):- ಮಾನ್ಯ ಅಧ್ಯಕ್ಷರೆ, 2004-05ನೇ ಸಾಲಿನ ಪೂರಕ ಅಂದಾಜುಗಳ ಪಟ್ಟಿಯನ್ನು ಮಾನ್ಯ ಹಣಕಾಸು ಮಂತ್ರಿಗಳು ಮಂಜೂರಾತಿಗಾಗಿ ಇಟ್ಟಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ಮಾತನಾಡುವಾಗ, ನಾನೂ ಒಂದು ರೀತಿಯ ಆತಂಕಕ್ಕೆ ಒಳಗಾದೆ; ಮತ್ತೆ ಹಣಕಾಸಿನ ಮಂತ್ರಿಗಳು ಎದ್ದು ತಮ್ಮ ಸಮರ್ಥನೆ ಹೇಳಿದಾಗ, ನನ್ನ ಮನಸ್ಸಿಗೆ ಸಮಾಧಾನವಾಯಿತು. ನಾವು ಬಹಳ ದಿವಸಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇವೆ. ಒಂದು ಸರ್ಕಾರ ಅದು ಈ ರೀತಿಯ ಸನ್ನಿವೇಶದಲ್ಲಿ ಎಂಟು ತಿಂಗಳ ಅವಧಿಯೊಳಗೆ ಪ್ಲಾನ್ ಸೈಜ್ ಅನ್ನು ಕಟ್ ಮಾಡದೆ, ಪ್ಲಾನ್ ಎಂದರೆ ಅದೊಂದು ಕನಸು, ಆ ಕನಸನ್ನು ಭಗ್ನಗೊಳಿಸದೆ ಅಡಿಷನಲ್ ಸಂಪನ್ಮೂಲವನ್ನು ಮೊಬಿಲೈಸ್ ಮಾಡಿ ಏನು ಈ ಬೇಡಿಕೆಗಳನ್ನು ಇಟ್ಟಿದ್ದಾರೆ ನಿಜವಾಗಿಯೂ ಕೂಡ ಹೆಮ್ಮೆಪಡತಕ್ಕಂಥದ್ದು. ನಾನು ಸರ್ಕಾರವನ್ನು ಉಪ ಮುಖ್ಯಮಂತ್ರಿಯನ್ನು ಶ್ಲಾಘಿಸುತ್ತೇನೆ. ಅವರೇನು ಆಕ್ಸ್‌ಫರ್ಡ್ ಸ್ಕೂಲ್ ಆಫ್ ಎಕನಾಮಿಕ್ಸ್ ಓದಿ ಬಂದವರಲ್ಲ ಅಥವಾ ಬಾಸ್ಟನ್‌ಲ್ಲಿದ್ದವರೂ ಅಲ್ಲ. ಒಬ್ಬ ಮನುಷ್ಯ ಸಾರ್ವಜನಿಕ ಜೀವನದಲ್ಲಿ ಜವಾಬ್ದಾರಿ ಸ್ಥಾನದಲ್ಲಿದ್ದಾಗ ಪ್ರಜ್ಞಾಪೂರ್ವಕವಾಗಿ ಹೊಟ್ಟೆಯೊಳಗೆ ಭಯ ಇಟ್ಟುಕೊಂಡು ಕೆಲಸ ಮಾಡಿದರೆ ಅದರ ಫಲ ಜನರಿಗೆ ಸಿಗುತ್ತದೆ. ಮಾನ್ಯ ಮಾಧುಸ್ವಾಮಿಯವರು ಬಹಳ ಚೆನ್ನಾಗಿ ಮಾತನಾಡಿದರು, ವಿರೋಧಪಕ್ಷದಲ್ಲಿರುವವರು ಸಿದ್ಧರಾಮಯ್ಯನವರನ್ನು ಹೊಗಳಿ ಮಾತನಾಡುವುದಕ್ಕಾಗುವುದಿಲ್ಲ, ಅದು ಬೇರೆ ಅರ್ಥವನ್ನೇ ಕೊಡುತ್ತದೆ, ಅವರ ವ್ಯಕ್ತಿತ್ವಕ್ಕೂ ಧಕ್ಕೆ ಬರುತ್ತದೆ. ರೀಇಂಬರ್ಸ್‌ಬಲ್ ಆದರೆ ಮಾತ್ರ ಒಪ್ಪಿಕೊಳ್ಳಿ ಎಂದು ಜಯಲಲಿತಾ ಟ್ರೈಯಲ್ ಕೇಸ್ ಹೇಳಿದ್ದು ಸಾದುವಾದ ಸಲಹೆ. ಮಾನ್ಯ ಸಿದ್ಧರಾಮಯ್ಯನವರನ್ನು ಮತ್ತೊಮ್ಮೆ ಅಭಿನಂದಿಸಿ ಅವರಿಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ, ನಾನು ಇವತ್ತು ಮಧ್ಯಾಹ್ನ ಅನೇಕ ಜನ ಸದಸ್ಯರೊಡನೆ ಮಾತನಾಡಿದೆ, ಅಭಿಯಾಚನೆ ಮೂರು ಮತ್ತು ನಾಲ್ಕು, ಐಎಎಸ್ ಆಫೀಸರ್ ಅಸೋಸಿಯೇಷನ್‌ಗೆ 5 ಲಕ್ಷ ರೂ ಕೊಡುವುದು, ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ಸ್ ಅಸೋಸಿಯೇಷನ್‌ಗೆ ಒಂದು ಕೋಟಿ ರೂ ಕೊಡುವುದು, ತಾವು ಏನು ಕಾರಣಕ್ಕೆ ಒಪ್ಪಿಗೆ ಕೊಟ್ಟಿದ್ದಿರೋ ಇಷ್ಟೆಲ್ಲಾ ಒಳ್ಳೆಯ ಕೆಲಸ ಮಾಡಿದಾಗ ನಿಮಗೆ ಅಷ್ಟು ಸ್ವಾತಂತ್ರ್ಯ ಇರಬಾರದೆಂದು ನಾನು ಹೇಳುವುದಿಲ್ಲ, ಇರಲಿ. ದಿವಂಗತ ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ, ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಯಾಗಿದ್ದಾಗ, ಡೆಲ್ಲಿಯಲ್ಲಿರುವ ಕಾನ್ಸಿಟ್ಯೂಷನ್ ಕ್ಲಬ್ ರೀತಿಯಲ್ಲಿ ನಾವು ಒಂದು ಕ್ಲಬ್ ಅನ್ನು ಶಾಸಕರು, ಮಾಜಿ ಶಾಸಕರಿಗಾಗಿ ಹಾಲಿ ಮತ್ತು ಮಾಜಿ ಸಂಸತ್ ಸದಸ್ಯರಿಗಾಗಿ ಒಂದು ಪ್ರೆಸ್ ಕಾನ್ಫರೆನ್ಸ್ ಮಾಡುವುದಕ್ಕೆ ರಜಾ ಇದ್ದಾಗ ಹೋಗಿ ಓದಿಕೊಳ್ಳುವುದಕ್ಕೆ ಲೈಬ್ರರಿ, ಟೆನ್ನಿಸ್, ಇತ್ಯಾದಿ ಎಲ್ಲಾ ರೀತಿಯ ಸೌಕರ್ಯ ತೀರ ಸರಳವಾಗಿ ಮದುವೆ ಕಾರ್ಯಕ್ರಮ ಮುಗಿಸಬೇಕೆಂದರೂ ಕೂಡ 40-50 ಜನ ಬೇಕಾಗುತ್ತದೆ. ಕಾನ್ಸ್ಟ್ಯೂಷನ್ ಕ್ಲಬ್‌ನಲ್ಲಿ ಇವೆಲ್ಲಾ ಮಾಡುತ್ತಾರೆ. ಅದಕ್ಕೆ ಬಾಲಬ್ರೂಯಿಯನ್ನು ಬಿಟ್ಟುಕೊಡಿ ಎಂದು ಕೇಳಿದೆ, ನಾವು ಅಷ್ಟು ತಿಳುವಳಿಕೆ ಇರುವವರಲ್ಲ, ಐಎಎಸ್ ಪಾಸ್ ಮಾಡಿದವರಲ್ಲ ಅಷ್ಟು ತಿಳುವಳಿಕೆ ಇರುವವರಲ್ಲ. ಕ್ಲಬ್ ಎಂದರೆ ನಮಗೆ ಲಾಯಕ್ಕೂ, ಇವರು ಅದನ್ನೆಲ್ಲ ಕೇಳುವುದೆಂದು ತಿಳಿದುಕೊಂಡಿರಬೇಕು, ಪಾಪ ಅವರದೇನೂ ತಪ್ಪಿಲ್ಲ, ಅವರು ಅದು ಬೇಡವೆಂದರು, ಆದರೆ ನೇರವಾಗಿ ಬೇಡವೆಂದು ಹೇಳಲಿಲ್ಲ. ಸ್ಟೇಟ್ ವಿಐಪಿಎಸ್ ಎಲ್ಲಾ ಬರುತ್ತಾರೆ ಅದಾಗುವುದಿಲ್ಲವೆಂದರು ಮಾಣಿಕ್‌ವೇಲ್ ಮ್ಯಾನ್‌ಷನ್ ನೋಡಿ ಎಂದು ಹೇಳಿದರು. ಅದನ್ನು ಹೋಗಿ ನೋಡಿಕೊಂಡು

ಬಂದು ಎಲ್ಲಾ ಅಂದಾಜು ಮಾಡಿ, ಅದನ್ನು ತೆಗೆದುಕೊಳ್ಳೋನವೆಂದು ಹೇಳಿದರೆ ಇಲ್ಲ ಇಲ್ಲ, ಅದನ್ನು ಅರಸುರವರ ಸಂಶೋಧನೆಗಾಗಿ ಇಟ್ಟಿದ್ದೇವೆಂದು ಹೇಳಿದರು. ನಮಗೆ ಸ್ವಲ್ಪ ಅರಸು ಅವರು ಎಂದರೆ ನಾವು ಭಾವುಕರಾಗುತ್ತೇವೆ. ಅರಸು ಅವರನ್ನು ತಂದು ಅಡ್ಡ ಇಟ್ಟು ಅಲ್ಲಿಂದ ಓಡಿಸಿಬಿಟ್ಟರು. ಆಮೇಲೆ ಈ ಕೆ.ಆರ್.ಸರ್ಕಲ್‌ಗೆ ಕಳುಹಿಸಿದರು. ಈ ಸರ್ವೆ ಸೆಟ್ಲ್‌ಮೆಂಟ್ ಆಫೀಸ್ ಇದೆ ಎಂದು. ಅಲ್ಲೇನೋ ಒಂದು ತೊಂದರೆ ಹೇಳಿದರು. ನಾನು ತಮಗೆ ಹೇಳುತ್ತೇನೆ, ಈಗ ಕೊಟ್ಟು ತೆಗೆದುಕೊಳ್ಳುವ ವ್ಯವಹಾರ. ಅವರಿಗೆ ಇದನ್ನು ಕೊಡುವುದಕ್ಕೆ ನಮ್ಮದೇನೂ ಆಕ್ಷೇಪನೆ ಇಲ್ಲ. ದಯಮಾಡಿ ಅವರನ್ನು ಮುಲಾಜಿಗೆ ತೆಗೆದುಕೊಂಡು ನಮಗೆ ಬಾಲಬ್ರೂಯಿಯನ್ನು ಬಿಟ್ಟುಕೊಡಿ. ಎರಡೇ ತಿಂಗಳಲ್ಲಿ ನಾವು ಕಾನ್ಸ್‌ಟಿಟ್ಯೂಷನ್ ಕ್ಲಬ್‌ನ್ನು ರೆಡಿ ಮಾಡುತ್ತೇವೆ. ನೀವು ನಮ್ಮ ತರಹ ಆಲೋಚನೆಯನ್ನು ಮಾಡತಕ್ಕಂಥವರು. ನೀವು ಮಾಡಿದ ಕೆಲಸದ ಬಗ್ಗೆ ಬಹಳ ಹೆಮ್ಮೆ ಇದೆ. ದಯಮಾಡಿ ಈ ಬೇಡಿಕೆಗಳನ್ನು ತೆಗೆದುಕೊಂಡು ಸಂತೋಷವಾಗಿ ಹೋಗುವ ಮೊದಲು ನಮಗೂ ಕೂಡ ಸಂತೋಷ ಉಂಟು ಮಾಡಬೇಕೆಂದು ಹೇಳಿ ಸನ್ಮಾನ್ಯ ಸಭಾಧ್ಯಕ್ಷರ ಮುಖಾಂತರ ನಿಮ್ಮನ್ನು ನಾನು ಕೇಳಿಕೊಂಡು ಈಗ ನೀವೇನು ಗ್ರೋಥ್ ರೇಟನ್ನು ಅಚೀವ್ ಮಾಡುತ್ತೀರಿ, Time is admirable. ದೇವರಾಜು ಅರಸ್‌ರವರು 1972ರಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕದ ರ್‍ಯಾಂಕ್ ಇಟ್ ವಾಸ್ 12. ಹರಿಯಾಣದ್ದು ರ್‍ಯಾಂಕ್(1) ಇತ್ತು. (4)ವರ್ಷಗಳಲ್ಲಿ he was able to reach No. one position. ಬಹಳ ಜನ ಅವಸರ ಕ್ರಿಟಿಕ್ಸ್, ರೈವಲ್ಸ್, ಡಿಟ್ರಾಕ್ಟರ್ಸ್ ಅವರ ಕರಪ್ಷನ್ ಬಗ್ಗೆ ಮಾತನಾಡಿದರೇ ಹೊರತು ಅವರ ಅಚೀವ್‌ಮೆಂಟ್ ಬಗ್ಗೆ ಮಾತನಾಡಲಿಲ್ಲ. ಬಹುಶಃ ನಿಮ್ಮ ಸ್ಥಾನದಲ್ಲಿ ಇನ್ಯಾರಾದರೂ ಇದ್ದಿದ್ದರೆ ಇಷ್ಟೊತ್ತಿಗೆ ಎಷ್ಟು ಎಡಿಟೋರಿಯಲ್ಸ್ ಬರೆಯುತ್ತಿದ್ದರೋ? ಎಷ್ಟು ದೊಡ್ಡ ದೊಡ್ಡ ವ್ಯಾಖ್ಯಾನಗಳೆಲ್ಲಾ ಬಂದಿರುತ್ತಿತ್ತೋ. ಪಾಪ, ನಿಮಗೆ ಅವೆಲ್ಲ ಸಿಗುವುದಿಲ್ಲ. ಆದರೂ don't worry. People are with you. We are all with you. ಆ ಎಡಿಟೋರಿಯಲ್ಸ್ ಎಲ್ಲದಕ್ಕಿಂತಲೂ ಕೂಡ ಪವಿತ್ರವಾದಂಥ ಪ್ರೀತಿ ನಮ್ಮದು. ಧ್ಯಯವಾಡಿ ಇದನ್ನು ಗೌರವಿಸುವುದಕ್ಕೋಸ್ಕರ ನಮ್ಮ ಬೇಡಿಕೆಯನ್ನು ಮಂಜೂರು ಮಾಡಿಕೊಡಬೇಕೆಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಾನು ವಾಟಾಳರು ಬೇರೆ ಬೇರೆ ಅಲ್ಲ. ವಾಟಾಳರು ಕೇಳಿದ ಮೇಲೆ ಪುನಃ ನಾನು ಕೇಳಿದರೆ ಅವರಿಗೆ ನಾನು ಅಗೌರವ ಮಾಡಿದಂತಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಪಟೇಲ್ ಕಳೆದುಕೊಂಡ, ರೈತರು ಕಟ್ಟಿದರು. ಶ್ಯಾನುಭೋಗಿಕೆ ಮಾಡುವುದಕ್ಕೇನಂತೆ?

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು):- ಮಾನ್ಯ ಅಧ್ಯಕ್ಷರೆ, ಇಲ್ಲಿ 72 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಅದನ್ನು ನಾನು ಖಂಡಿತವಾಗಿಯೂ ಸ್ವಾಗತ ಮಾಡುತ್ತೇನೆ. 72 ಕೋಟಿ ರೂಪಾಯಿ ಕೇಂದ್ರ ಸಹಾಯಧನವನ್ನು ಮ್ಯಾಚಿಂಗ್ ಗ್ರಾಂಟ್ ಆಗಿ ಉಳಿಸಿಕೊಳ್ಳುವುದನ್ನು ನಾನು ಸ್ವಾಗತ ಮಾಡುತ್ತೇನೆ. ವಿಶೇಷವಾಗಿ ನಮ್ಮ ಮಾನ್ಯ ಯಡಿಯೂರಪ್ಪನವರು ಮಾತನಾಡುವ ಸಂದರ್ಭದಲ್ಲಿ 150 ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರದ ಸಹಾಯಧನವನ್ನು ನಾವು ಕಳೆದ ವರ್ಷವೂ ಕಳೆದುಕೊಂಡಿದ್ದೇವೆ. ಅದರ ಹಿಂದೆ 200 ಕೋಟಿ ರೂ.ಯಷ್ಟು ಕಳೆದುಕೊಂಡಿದ್ದೇವೆ. ಮ್ಯಾಚಿಂಗ್ ಗ್ರಾಂಟನ್ನು ಒದಗಿಸುವುದಕ್ಕೆ ಆಗದೆ ಈ ಒಂದು 72 ಕೋಟಿ ರೂಪಾಯಿಗಳನ್ನು ಒದಗಿಸಿದ್ದಕ್ಕೆ ವಿಶೇಷವಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇದರ ಜೊತೆಯಲ್ಲಿ

ರಾಜಸ್ವದಿಂದ ಈ 72 ಕೋಟಿ ರೂಪಾಯಿಗಳನ್ನು ಕಳೆದರೆ 711 ಕೋಟಿ ರೂ.ಯಾವುದು ಇದೆ, ಅದರ ಬಗ್ಗೆ ನಾನು ನನ್ನ ಕೆಲವು ಆಕ್ಷೇಪಣೆಗಳನ್ನು ಹೇಳುವುದಕ್ಕೆ ಇಚ್ಚಿಸುತ್ತಿದ್ದೇನೆ. ಸುನಾಮಿ ಸಂತ್ರಸ್ಥರ ನಿಧಿ ಎಂದು ರಾಜ್ಯಸರ್ಕಾರದಿಂದ ಹತ್ತು ಕೋಟಿ ರೂಪಾಯಿ ಎಂದು ಮಾಡಿದ್ದೀರಿ. ಇದರಲ್ಲಿ ನನ್ನ ಒಂದು ಆಕ್ಷೇಪವೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದಲೇ 75 ಲಕ್ಷ ರೂಪಾಯಿಗಳು ಸಂಗ್ರಹವಾಗಿ ಬಂದಿದೆ. ಬೇರೆ ಬೇರೆ ಜಿಲ್ಲೆಗಳಿಂದಲೂ ಕೂಡ ಸಾಕಷ್ಟು ಹಣ ಬಂದಿರಬಹುದು. ಈ ನಿಟ್ಟಿನಲ್ಲಿ ಸಂಗ್ರಹವಾಗಿರುವ ಹತ್ತು ಕೋಟಿ ರೂ ತಾವು ಬಿಡುಗಡೆ ಮಾಡಬೇಕೆಂದಿರುವ ಹತ್ತು ಕೋಟಿ ರೂಪಾಯಿ ಅಲ್ಲದೆ, ಬಂದಿರುವ ಹಣವನ್ನೂ ಕೂಡ ತಾವು ಅದಕ್ಕೆ ಸುನಾಮಿ ಸಂತ್ರಸ್ಥರ ನಿಧಿಗೆ ಕೊಡುತ್ತೀರಾ? ಆ ಒಂದು ಕ್ಲಾರಿಫಿಕೇಷನ್‌ಗೆ ಉತ್ತರ ಬೇಕು. ಎರಡನೆಯದು, ಆಟೋರಿಕ್ಷಾಗಳಿಗೆ ಎಲ್‌ಪಿಜಿ ಕಿಟ್‌ಗೆ ಸಂಬಂಧಪಟ್ಟಿದ್ದು, ಬಹುಶಃ ಇದರ ಬಗ್ಗೆ ನಾನು ಒಂದು ವಿಶೇಷವಾದ ವಿನಂತಿಯನ್ನು ಮಾಡುತ್ತಿದ್ದೇನೆ, ಸ್ವಲ್ಪ ವಿಸ್ತಾರ ಮಾಡಿ ಇದರ ಬಗ್ಗೆ ಗ್ಯಾಸ್ ಆಧಾರಿತ ಅನಿಲ ಆಧಾರಿತವಾಗಿರುವ ಇಂಧನ ಯಾವುದು ಇದೆ, ಖಂಡಿತವಾಗಿಯೂ ಎನ್‌ವಿರಾನ್‌ಮೆಂಟ್ ಪಲ್ಯೂಷನ್ ಮಾಡುವುದಿಲ್ಲ. ಅನುಕೂಲ ಮತ್ತು ಎಕಾನಮಿ ಆಗಿರುವುದರಿಂದ ಬೇರೆ ನಮ್ಮ ವಾಹನಗಳಿಗೂ ಅನುಭವ ಆಗುವ ರೀತಿಯಲ್ಲಿ ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ನಂತರ ಪೇಜ್ 14 ರಲ್ಲಿ ಅಭಿಯಾಚನೆ ಸಂಖ್ಯೆ 8 ರಲ್ಲಿ ಕೋರ್ಟು ಡಿಕ್ರಿಗೆ 3 ಲಕ್ಷ ರೂಪಾಯಿ ಎಂದು ತಾವು ಹೇಳಿದ್ದೀರಿ. ಕೋರ್ಟು ಡಿಕ್ರಿ ಆಗಿದೆ ಎಂದು ಹೇಳಿ. ಅದಕ್ಕೋಸ್ಕರ ಮೂರು ಲಕ್ಷ ರೂಪಾಯಿ ಬೇಕೆಂದು ಹೇಳಿದ್ದೀರಿ. ಅದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೇಳುತ್ತಿದ್ದೇನೆ. ನಂತರ ಅಭಿಯಾಚನೆ ಸಂಖ್ಯೆ 10 ರಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡ ಇದಕ್ಕೆ 8 ಕೋಟಿ ರೂಪಾಯಿಗಳನ್ನು ಇಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಜೊತೆಯಲ್ಲಿ ಕಳೆದ ಹತ್ತು ವರ್ಷಗಳಿಂದ ನನ್ನ ಜಿಲ್ಲೆಯಲ್ಲಿ, ನನ್ನ ಮಂಗಳೂರು ಕ್ಷೇತ್ರದಲ್ಲಿ ಒಂದು ಪರಿಶಿಷ್ಟ ವಿದ್ಯಾರ್ಥಿನಿಲಯ 37 ಲಕ್ಷ ರೂಪಾಯಿ ಕಟ್ಟಡ ಕಟ್ಟಿ ಒಬ್ಬ ವಿದ್ಯಾರ್ಥಿ, ವಿದ್ಯಾರ್ಥಿನಿಗೆ ಉಪಯೋಗ ಮಾಡದಂಥ ಒಂದು ದುಸ್ಥಿತಿ ಇದೆ. ಅದನ್ನು ಕೆಡುವಂಥ ಸ್ಥಿತಿ ಬಂದಿದೆ. ಮಾನ್ಯ ಸಚಿವರ ಮೂಲಕ ನಾನು ಈ ನಿಟ್ಟಿನಲ್ಲಿ ವಿಶೇಷವಾಗಿರುವಂಥ ಕ್ರಮವನ್ನು ಅಲ್ಲಿ ತೆಗೆದುಕೊಳ್ಳಬೇಕು. ಅಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂಥ ಒಂದು ಹೊಸ ಕಟ್ಟಡವನ್ನು ಕಟ್ಟಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಅಭಿಯಾಚನೆ ಸಂಖ್ಯೆ 20 ರಲ್ಲಿ ರಾಜ್ಯಸರ್ಕಾರದ ಹೆಲಿಕಾಪ್ಟರ್ ನಿರ್ವಹಣೆಗೆ 1 ಕೋಟಿ 5 ಲಕ್ಷ ರೂಪಾಯಿ ಇಟ್ಟಿದ್ದಾರೆ. ಹೇಗೆ ಹೆಲಿಕಾಫ್ಟರ್‌ನ್ನು ಉಪಯೋಗ ಮಾಡುತ್ತಿದ್ದಾರೆಂದು ಹೇಳುವುದೂ ಕೂಡ ವಿವರಣೆಯನ್ನು ನಾನು ಕೇಳಬೇಕಾಗುತ್ತದೆ. ಅದರಲ್ಲಿ ಬಾಬ್ತು ಸಂಖ್ಯೆ 2 ರಲ್ಲಿ ರಸ್ತೆ ಮತ್ತು ಸೇತುವೆ ನಿರ್ವಹಣೆಗೆ 100 ಕೋಟಿ ರೂಪಾಯಿಗಳನ್ನು ಇಟ್ಟಿದ್ದನ್ನು ಸ್ವಾಗತ ಮಾಡಿ ಅದರಲ್ಲಿ ಒಂದೇ ಒಂದು ಕ್ಲಾರಿಫಿಕೇಷನನ್ನು ಕೇಳತಕ್ಕದ್ದು ಎಂದರೆ ಈ ಮೈನ್ಸ್ ಲಾರಿಗಳು ಇವೆಯಲ್ಲಾ, ಈ ಮೈನ್ಸ್ ಲಾರಿ ಬಂದು ದಿವಸದಿಂದ ತಾವು ಹಾಕಿರುವ ಫೆನಾಲ್ಟಿ ಕ್ಲಾಸ್ ಯಾವುದು ಇದೆ, ಫೆನಾಲ್ಟಿ ಹಿಂದೆ ಹೆಚ್ಚುವರಿ ಒಂದು ಟನ್‌ಗೆ ಎರಡು ಸಾವಿರ ರೂಪಾಯಿ ದಂಡ ಇದ್ದುದ್ದು, ಮೈನ್ಸ್ ಲಾರಿಗಳು ಓಡಾಡಲಿಕ್ಕೆ ಆರಂಭ ಮಾಡಿದ ಎರಡು ವರ್ಷಗಳಲ್ಲಿ ಅದನ್ನು ತಾವು 600 ರೂಪಾಯಿಗೆ ಇಳಿಸಿದ್ದೀರಿ. ಹಿಂದೆ ಒಂದು ಹೆಚ್ಚುವರಿ ಟನ್‌ಗೆ ಎರಡು ಸಾವಿರ ರೂಪಾಯಿ ಇತು. ನಂತರ ಒಂದೂವರೆ ಸಾವಿರ. ನಂತರದ ಟನ್‌ಗಳಿಗೆ ಇತ್ತು. ಈಗ ತಾವು 600–400

ರೂಪಾಯಿಗೆ ಇಳಿಸಿರುವುದು. ನನ್ನ ಜಿಲ್ಲೆಯಿಂದಲೇ ಸುಮಾರು ಒಂದು ಕೋಟಿ ರೂಪಾಯಿ ಸಂಗ್ರಹವಾಗಿದೆ. ಇಂಥ ರೀತಿ ತೆರಿಗೆ ಸಂಗ್ರಹವಾಗಿರುವುದನ್ನು ಈ ಫೆನಾಲ್ಟಿ ಸಂಗ್ರಹವಾಗಿರುವುದನ್ನು ಆಯಾ ಜಿಲ್ಲೆಗೆ ಕೊಡಬೇಕು. ಅದನ್ನು ರಸ್ತೆ ಸುಧಾರಣೆಗೆಂದು ಕೊಡಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಇನ್ನು ಅಭಿಯಾಚನೆ ಸಂಖ್ಯೆ 22 ರಲ್ಲಿ ಬೆಂಗಳೂರು ವಿಶೇಷ ನ್ಯಾಯಾಲಯ ಸ್ಥಾಪನೆಗೆ 50 ಲಕ್ಷ ರೂಪಾಯಿ ಕೊಟ್ಟಿದ್ದನ್ನೂ ಕೂಡ ನಾನು ಸ್ವಾಗತ ಮಾಡಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ನ್ಯಾಯಾಲಯಕ್ಕೆ 13 ಕೋಟಿ ರೂಪಾಯಿ ಮಂಜೂರಾತಿಯಾಗಿದೆ. ಇಷ್ಟು ಇದ್ದರೂ ಕೂಡ ಹಣ ಬಿಡುಗಡೆಯಾಗದೇ ಇರುವುದರ ಬಗ್ಗೆ ನಾನು ಆಕ್ಷೇಪವನ್ನು ಮಾಡಿ ಒಂದೇ ಒಂದು ನಯಾಪೈಸೆಯನ್ನೂ ಕೂಡ ಇದರಲ್ಲಿ ಇಟ್ಟಿಲ್ಲ. ಇದರ ಬಗ್ಗೆ ಆಕ್ಷೇಪ ಹೇಳಿ ಕೊನೆಯದಾಗಿ ನಮ್ಮ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಕೃಷಿ ಕಾರ್ಮಿಕರ ಒಂದು ಅನುಕೂಲಕ್ಕಾಗಿ, ಅವರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ತಾವು ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಕೂಡ ಸಹಾಯ ಮಾಡಬೇಕೆಂದು ಹೇಳುವ ವಿನಂತಿಯೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ(ಬೆಳ್ಳಾವಿ):– ಮಾನ್ಯ ಅಧ್ಯಕ್ಷರೆ, ಈಗ ಪೂರಕ ಅಂದಾಜುಗಳನ್ನು ತಂದಿದ್ದಾರೆ, ಈ ಪೂರಕ ಅಂದಾಜುಗಳನ್ನು ನಾವು ಸ್ವಾಗತ ಮಾಡುತ್ತಾ, ಪ್ರಮುಖವಾಗಿ ನನಗೆ ಹಣಕಾಸು ಸಚಿವರು ಒಳ್ಳೆಯ ಬಜೆಟನ್ನೂ ಕೂಡ ಮಂಡಿಸಿದ್ದಾರೆ. ಮುಂದೆಯೂ ಕೂಡ ಮಂಡಿಸುತ್ತಾರೆನ್ನುವ ನಂಬಿಕೆ ಇದೆ. ಈಗ ಪೂರಕ ಅಂದಾಜುಗಳನ್ನೂ ಕೂಡ ಚೆನ್ನಾಗಿ ತಂದಿದ್ದಾರೆ. ಏಕೆಂದರೆ ನಮ್ಮ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಯಾವುದೇ ಪ್ಲಾನ್ ಸೈಜನ್ನು ಕಟ್ ಮಾಡದೆ ಹೊಸ ಅಡಿಷನಲ್ ರಿಸೋರ್ಸ್ಸ್ ಅನ್ನು ಮೊಬಿಲೈಜ್ ಮಾಡಿ ಅದರಿಂದ ನಾವು ಈ ಹಣವನ್ನೂ ಕೊಡತಕ್ಕಂಥದ್ದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದುದು. ಮತ್ತು ನಾವು ಹಣಕಾಸಿನ ಸಚಿವರನ್ನೂ ಕೂಡ ಅಭಿನಂದನೆ ಮಾಡಬೇಕಾಗುತ್ತದೆ. ಆದರೆ ನಾನು ಅವರ ಗಮನಕ್ಕೆ ಕೆಲವು ಸಲಹೆಗಳನ್ನು ಈಗಾಗಲೇ ಮಾನ್ಯ ರಮೇಶ್‌ಕುಮಾರ್ ಅವರು ಕೊಟ್ಟಿರತಕ್ಕ ಸಲಹೆಯನ್ನು ಕೂಡ ನಾವು ಸ್ವಾಗತ ಮಾಡಿ ಆ ಸಲಹೆಯಂತೆ ಕಾರ್ಯಕ್ರಮವನ್ನು ಜಾಗ್ರತೆ ಜರುಗಿಸಬೇಕು ಎನ್ನತಕ್ಕಂಥದ್ದು. ತಾವು ಬಜೆಟ್ ಭಾಷಣದಲ್ಲಿ ಒಂದು ಆಶ್ವಾಸನೆಯನ್ನು ಸದನಕ್ಕೆ ಕೊಟ್ಟಿದ್ದಿರಿ. ಮುಂದೆ ರಿಸೋರ್ಸಸ್ ಬಹಳ ಚೆನ್ನಾಗಿ ಬಂದಂಥ ಕಾಲದಲ್ಲಿ ತಾವು ಶಾಸಕರಿಗೆ ನಿಧಿಯನ್ನು ಕೊಡುತ್ತೇನೆಂದು ಹೇಳಿದ್ದಿರಿ. ನೀವು ಕೊಟ್ಟಂಥ ಮಾತಿಗೆ ನೀವು ನಡೆಯುವವರು ಎಂದು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಇದನ್ನು ನೋಡಿದರೆ ಏಕೋ ಸ್ವಲ್ಪ ಅನುಮಾನ ಬರುತ್ತದೆ. ಆ ನಿಟ್ಟಿನಲ್ಲಿ ಏನಾದರೂ ಸ್ವಲ್ಪ ಈ ವರ್ಷಕ್ಕೆ ಐವತ್ತು ಲಕ್ಷ. ರೂ. ಯನ್ನಾದರೂ ಕೊಡಿ. ಮುಂದಿನ ವರ್ಷಕ್ಕೆ ಬೇಕಾದರೆ ಒಂದು ಕೋಟಿ ರೂ ಕೊಡುವಿರಂತೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಅವರಿಗೆ ಒಂದು ಕೋಟಿ ರೂಪಾಯಿ ಕೊಡುವಂತೆ ಮಾತನಾಡಿದ್ದೇವೆ. ಏಕೆ ಹೀಗೆ ಮಾಡುತ್ತೀರಿ?

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ:– ಎರಡು ಕೋಟಿ ರೂ ಕೊಟ್ಟರೆ ಬೇಡವೆನ್ನುತ್ತೇವಾ?

ಶ್ರೀ ಬಿ.ಎಸ್.ಯಡಿಯೂರಪ್ಪ:– ರೂಲಿಂಗ್ ಪಾರ್ಟಿಯವರು ನ್ಯಾಯವಾಗಿ ಎರಡು ಕೋಟಿ ರೂಪಾಯಿಗಳನ್ನು ಕೇಳಬೇಕು.

ಶ್ರೀ **ಕ್ಯಾತ್ಸಂದ್ರ ಎನ್.ರಾಜಣ್ಣ**:- ನಾವು ಕೇಳುತ್ತೇವೆ. ಅವರು ಹೆಚ್ಚು ಕೊಡತಕ್ಕದ್ದು ಆ ಒಂದು ದೊಡ್ಡ ಧಾರಾಳತನ ಅವರಲ್ಲಿದೆ.

ಶ್ರೀ **ಬಿ.ಎಸ್.ಯಡಿಯೂರಪ್ಪ**:- ಕೇಳಬೇಕಾದರೆ ಜಾಸ್ತಿ ಕೇಳಿ. ಕೊಡುವುದಕ್ಕೆ ಅವರು ರೆಡಿ ಇದ್ದಾರಲ್ಲ.

ಶ್ರೀ **ಕ್ಯಾತ್ಸಂದ್ರ ಎನ್.ರಾಜಣ್ಣ**:- ಅದು ಚೌಕಾಸಿಯಾಗುತ್ತದೆ. ಆದ್ದರಿಂದ ಹೆಚ್ಚು ಧಾರಾಳತನ ತೋರಿಸುತ್ತಾರೆ. ಸ್ವಲ್ಪ ಇರಿ. ಶಾಸಕರ ನಿಧಿ ಬಗ್ಗೆ ಹಿಂದೆ ಎರಡು ವರ್ಷ ಕಾಲ ಕೊಡುತ್ತೇವೆಂದು ಅವರು ಹೇಳಿದರೂ ಕೂಡ 10-20 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದು. ಹಿಂದೆ ಕೂಡ ಸರ್ಕಾರಗಳು ಶಾಸಕರಿಗೆ ನಿಧಿ ಬಿಡುಗಡೆ ಮಾಡಿರಲಿಲ್ಲ. ಎಷ್ಟೆಷ್ಟು ಆಗಿದೆ ಎಂದು ನನ್ನ ಹತ್ತಿರ ಲೆಕ್ಕ ಇದೆ. ಆದ್ದರಿಂದ ಈ ವರ್ಷವಾದರೂ ಕೂಡ ಏನಾದರೂ ನಮಗೆ ಕೆಲವು ಕಡೆ ಏನಾಗಿದೆ, 'ಫುಡ್ ಫಾರ್ ವರ್ಕ್' ಇವೆಲ್ಲಾ ಕೆಲಸಗಳು ಬರುತ್ತಿದ್ದವು. ಅವರು ಫುಡ್ ಕಾಂಪೋನೆಂಟ್ ಎಂದು ಕೊಟ್ಟಿದ್ದಕ್ಕೆ ನಾವು ಹಣವನ್ನು ಮ್ಯಾಚಿಂಗ್ ಮಾಡುವುದಕ್ಕೆ ಹಣವಂತೂ ಇರುವುದಿಲ್ಲ. ಅದರಿಂದಲಾದರೂ ಕೂಡ ಕೆಲಸಗಳನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಅವರು ಹಣವನ್ನು ಶಾಸಕರ ನಿಧಿಗೆ ಅಲ್ಪಸ್ವಲ್ಪವಾದರೂ ಕೂಡ ಅವರು ದಯಪಾಲಿಸಲೇಬೇಕು.

(ಗೊಂದಲ)

ಮಾನ್ಯ ಉಪ ಮುಖ್ಯಮಂತ್ರಿಗಳೆ, ರೀ, ಸುಮ್ಮನೆ ಕುಳಿತುಕೊಳ್ಳಿರಿ ನೀವು.

XX XX XX

ಶ್ರೀ **ಪಿ.ಟಿ.ಪರಮೇಶ್ವರ ನಾಯಕ್**:- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣನವರು ಅವರು ಹಿರಿಯರಿದ್ದಾರೆ. ನಮಗೆ ಅವರ ಬಗ್ಗೆ ಗೌರವ ಇದೆ.

XX XX XX

ಶ್ರೀ **ಕ್ಯಾತ್ಸಂದ್ರ ಎನ್.ರಾಜಣ್ಣ**:- ಅದು ನನಗೂ ಮತ್ತು ಅಲ್ಕೋಡ್ ಹನುಮಂತಪ್ಪನವರಿಗೆ ಬಿಡಿ.

ಶ್ರೀ **ಪಿ.ಟಿ.ಪರಮೇಶ್ವರ ನಾಯಕ್**:- ತಾವು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ನೀವು ಹಿರಿಯರಿದ್ದೀರಿ.

XX XX XX

ಶ್ರೀ **ಕ್ಯಾತ್ಸಂದ್ರ ಎನ್.ರಾಜಣ್ಣ**:- ಐ ಆಮ್ ಸಾರಿ.

ಶ್ರೀ **ಪಿ.ಟಿ.ಪರಮೇಶ್ವರ ನಾಯಕ್**:- ತಾವೂ ವಿಧಾನಪರಿಷತ್ತಿನಲ್ಲಿ ಕೆಲಸ ಮಾಡಿ ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ **ಕ್ಯಾತ್ಸಂದ್ರ ಎನ್.ರಾಜಣ್ಣ**:- ಸಾರಿ. ನಾನು ಆ ರೀತಿ ಅರ್ಥದಲ್ಲಿ ಅಲ್ಲ ಹೇಳಿದ್ದು.

ಶ್ರೀ **ಪಿ.ಟಿ.ಪರಮೇಶ್ವರ ನಾಯಕ್**:- ದಯಮಾಡಿ ಅದನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ **ಕ್ಯಾತ್ಸಂದ್ರ ಎನ್.ರಾಜಣ್ಣ**:- ಆಯಿತಪ್ಪ. ನಾನು ವಾಪಸ್ ತೆಗೆದುಕೊಳ್ಳುತ್ತೇನೆ.

ಶ್ರೀ **ಪಿ.ಟಿ.ಪರಮೇಶ್ವರ ನಾಯಕ್**:- ಇದು ತರವಲ್ಲ. ಅವರು ಹಿರಿಯರಿದ್ದಾರೆ.

ಶ್ರೀ **ಕ್ಯಾತ್ಸಂದ್ರ ಎನ್.ರಾಜಣ್ಣ**:- ನಾನು (x) ಅವರ ಹೆಸರನ್ನು ಹೇಳಿದೆ.

XX ಸನ್ಮಾನ್ಯ ಸದಸ್ಯರು ಕೆಲವು ಪದಗಳನ್ನು ವಾಪಸ್ಸು ತೆಗೆದುಕೊಂಡರು.

ಶ್ರೀ ಪಿ.ಟಿ.ಪರಮೇಶ್ವರ ನಾಯಕ್:- ಅವರು ಕ್ಷಮೆ ಕೇಳಬೇಕು. ಸನ್ಮಾನ್ಯ ಹಿಂದಿನ ಮುಖ್ಯಮಂತ್ರಿಗಳು ಮೊದಲನೆಯ ಕಂತಾಗಿ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎರಡನೇ ಸಲ ದುಡ್ಡನ್ನು ಕೊಡುವಾಗ ಅದನ್ನು ಬರಗಾಲಕ್ಕೆ ಹೊಂದಾಣಿಕೆ ಮಾಡಿದ್ದಾರೆ. ಮಾನ್ಯ ಶಾಸಕರುಗಳು ಏನು ಒತ್ತಾಯ ಮಾಡಿದ್ದಾರೆ? ಈಗ ನಾನು ಕೂಡ ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದೀರಿ. ಈಗ ಶಾಸಕರಿಗೆ ಅನಿವಾರ್ಯವಾಗಿ ಒಂದು ಕೋಟಿ ರೂ.ಯನ್ನಾದರೂ ಶಾಸಕರ ನಿಧಿಯೆಂದು ಕೊಡಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ:- ಸನ್ಮಾನ್ಯ ಅಧ್ಯಕ್ಷರೆ, ನಾನು ಯಾವುದೇ ಒಂದು ರೀತಿ ಯಾರಿಗೂ ಮನಸ್ಸಿಗೆ ನೋಯಿಸಲಿಕ್ಕೆ ಹೇಳಲಿಲ್ಲ. ಮಾನ್ಯ x x ನವರ ಬಗ್ಗೆ ಬಹಳ ವಿಶ್ವಾಸ. ಆದರಿಂದ ಅವರಿಗೆ ಅವಮಾನ ಮಾಡತಕ್ಕ ದೃಷ್ಟಿಯಲ್ಲಿ ಮಾತನಾಡಿದ್ದು ಅಲ್ಲ. ಆದ್ದರಿಂದ ಅವಮಾನ ಆಗತಕ್ಕದ್ದು ಎಂದು ಹೇಳಿ ನಮ್ಮ ಸ್ನೇಹಿತರು ಹೇಳುತ್ತಾರೆ. ಅದನ್ನು ವಾಪಸ್ ತೆಗೆದುಕೊಂಡಿದ್ದೇನೆ. ಈಗ ನಾನು ಏನು ಹೇಳಲಿಕ್ಕೆ ಹೊರಟಿದ್ದೆ ಎಂದರೆ ಈ ಬಾರ್ಡರ್ ಡೆವಲಪ್‌ಮೆಂಟ್‌ಗೆ ಹಣ ಕೊಡುತ್ತಿಲ್ಲ. ನಮಗೆ ಬರಗಾಲದಲ್ಲಿ, ಬಾರ್ಡರ್‌ನಲ್ಲಿ ಇರತಕ್ಕಂಥ ತಾಲ್ಲೂಕುಗಳಿಗೆ ಬಹಳ ತೊಂದರೆ ಆಗುತ್ತಿದೆ. ಹಾಗೆಯೇ ಬಯಲು ಸೀಮೆ ಮಂಡಳಿಗೆ ಕೂಡ ತಾವು ಹಣ ಕೊಟ್ಟಿಲ್ಲ. ಅದರ ಬಗ್ಗೆ ಕೂಡ ಹೇಳಬೇಕಾಗಿದೆ. ಏಕೆಂದರೆ ಸರ್ಕಾರದಲ್ಲಿ ಈಗ ಸಂಪನ್ಮೂಲ ಹೆಚ್ಚಿರತಕ್ಕಂಥ ಹಿನ್ನೆಲೆಯಲ್ಲಿ ಅದಕ್ಕೂ ಕೂಡ ಹಣವನ್ನು ಒದಗಿಸಿ ಕೊಡತಕ್ಕದ್ದನ್ನು ತಾವು ಮಾಡಬೇಕು. ಪ್ರಮುಖವಾಗಿ, ಸುಮಾರು ಮೂರು ವರ್ಷಗಳಿಂದ ಈ ರಾಜ್ಯದಲ್ಲಿ ಎಸ್‌ಸಿ ಎಸ್‌ಟಿ ಸ್ಕಾಲರ್‌ಶಿಫ್ ಮತ್ತು ಪ್ರವರ್ಗ(1)ರ ಬಗ್ಗೆ ಹಣ ಬಿಡುಗಡೆ ಆಗಿಲ್ಲ. ಇದು ಬಹಳ ಪ್ರಮುಖವಾದಂತಹದು. ಏನು ಫಿ ಕನ್ಸಿಷನ್ ಅನ್ನು ನೀವು ರೀಫಂಡ್ ಎಂದು ಮಾಡುತ್ತಿದ್ದೀರಿ, ಆ ಹಣ ಕೂಡ ಬಿಡುಗಡೆ ಆಗಿಲ್ಲ. ಮತ್ತೆ ಎಸ್‌ಟಿ ಸ್ಕಾಲರ್‌ಶಿಫ್ ಈ ರಾಜ್ಯದಲ್ಲಿ ಸುಮಾರು 14 ರಿಂದ 15 ಕೋಟಿ ರೂ.ಯಷ್ಟು ಹಣ ಬಿಡುಗಡೆ ಆಗದೇ ಬಾಕಿ ಇದೆ. ಅದರಿಂದ ಮಕ್ಕಳಿಗೆ ವಿದ್ಯಾಭ್ಯಾಸ ಮಾಡತಕ್ಕದ್ದಕ್ಕೆ ಬಹಳ ಅನಾನುಕೂಲ ಆಗಿದೆ. ಇದನ್ನು ನಾನೂ ಕೂಡ ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಅದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ತಾವು ಅದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ತಾವು ಈ ದಿವಸ ತಮ್ಮ ಉತ್ತರದಲ್ಲಿ ನಿರ್ದಿಷ್ಟವಾಗಿ ಆ ಹಣವನ್ನು ಇಷ್ಟು ತಿಂಗಳಲ್ಲಿ ಬಿಡುಗಡೆ ಮಾಡಿಕೊಡುತ್ತೇನೆ ಎಂದು ಹೇಳಬೇಕು. ಏಕೆಂದರೆ ನಾನು ನೋಡಿದೆ. ಏನಾದರೂ ಕೂಡ ಈ ಡಿಮಾಂಡ್ ನಂಬರ್:10ರಲ್ಲಿ ಬರುತ್ತದೇನೋ ಎಂದು ನೋಡಿದೆ. ಎಲ್ಲೂ ಅದರ ಬಗ್ಗೆ ಕಾಣುತ್ತಿಲ್ಲ. ಆದ್ದರಿಂದ ತಾವು ನಿರ್ದಿಷ್ಟವಾಗಿ ಆ ಹಣವನ್ನು ಕೊಡತಕ್ಕದ್ದಕ್ಕೆ ಪ್ರಯತ್ನ ಮಾಡಿ. ಏಕೆಂದರೆ ಎಸ್‌ಸಿ ಎಸ್‌ಟಿ ಸ್ಕಾಲರ್‌ಶಿಫ್, ಪ್ರವರ್ಗ-1, ಪ್ರವರ್ಗ-1ರಲ್ಲಿ ಬರತಕ್ಕ ಫೀ ರೀಫಂಡ್ ಅದರ ಬಗ್ಗೆ ತಾವು ನಿರ್ದಿಷ್ಟವಾಗಿ ಆಶ್ವಾಸನೆಯನ್ನು ಕೊಡಬೇಕೆಂದು ಹೇಳುತ್ತಾ ಮತ್ತೊಮ್ಮೆ ಏನಾದರೂ ಆಗಲಿ ಯಾವುದೇ ಕಾರಣಕ್ಕೂ ಎಂಎಲ್ಎ ಫಂಡ್‌ನ್ನು ತಾವು ಕೊಡಲೇಬೇಕು. ಇಷ್ಟನ್ನು ಹೇಳಿ ತಮಗೆ ವಂದಿಸುತ್ತೇನೆ.

---

xx ಸನ್ಮಾನ್ಯ ಸದಸ್ಯರು ಕೆಲವು ವಾದಗಳನ್ನು ವಾಪಸ್ಸು ತೆಗೆದುಕೊಂಡರು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ):- ಸ್ಸಾರ್, ನಾನು ಭಾಷಣ ಮಾಡುವುದಿಲ್ಲ. ಎಂಎಡಿಬಿ ಇದೆಯಲ್ಲ, ಅದನ್ನು ಬೀಗ ಹಾಕಿ ಇಲ್ಲವೇ ಕ್ಲೋಸ್ ಮಾಡಿ. ಇಲ್ಲದೇ ಇದ್ದರೆ ಅದಕ್ಕೆ ಹಣ ಕೊಡಿ. 20–25 ಕೋಟಿ ರೂಪಾಯಿ ಹಣ ಕೊಡಬೇಕು. ಅರ್ಧ ಬಿಲ್ಡಿಂಗ್ ಆಗಿದೆ, ಅರ್ಧ ಸೇತುವೆ ಆಗಿದೆ. ಇದೊಂದು ಸರ್ಕಾರದ ಸ್ಮಾರಕವಾ? ಆ ರೀತಿ ಮಾಡಿ ಇಡುತ್ತೀರಿ. ದಯವಿಟ್ಟು ಇಂತಹ ಪೂರಕ ಬಜೆಟನ್ನು ಮಂಡನೆ ಮಾಡುವಾಗ ಇಂತಹ ಅಂಶಗಳನ್ನೂ ನಾವು ನಿಮ್ಮಿಂದ ನಿರೀಕ್ಷೆ ಮಾಡುತ್ತೇವೆ ಸ್ವಾಮಿ. ಎಕ್ಸಸ್ ಹಣ ಬಂದಿದೆ ಎಂದಾಗ ನೀವೆಲ್ಲಾ ಸ್ಟೇಟ್‌ಮೆಂಟ್ ಕೊಟ್ಟಾಗ ನಾವೆಲ್ಲಾ ಸಂತೋಷ ಪಟ್ಟೆವು.

ಶ್ರೀ ಸಿದ್ದರಾಮಯ್ಯ:- ಈಗ ಎಲ್ಲಾ ಹಣ ಕೊಡುತ್ತಿದ್ದೇವಲ್ಲಾ.

ಶ್ರೀ ಅರಗ ಜ್ಞಾನೇಂದ್ರ:- ನಮ್ಮ ಹಣಕಾಸಿನ ಸಚಿವರು ಇಷ್ಟು ಶ್ರಮಪಟ್ಟು ಇಷ್ಟೊಂದು ಹಣ ಸಂಗ್ರಹ ಮಾಡಿದ್ದಾರೆ ಎಂದು ಸಂತೋಷ ಪಡುತ್ತೇವೆ. ಒಂದು 25 ಅಥವಾ 30 ಕೋಟಿ ರೂಪಾಯಿ ಪ್ರದೇಶಾಭಿವೃದ್ಧಿ ಮಂಡಳಿಗೆ ಕೊಡಿ. ಇವತ್ತು ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇರಬಹುದು, ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿ ಇರಬಹುದು, ಎಂಎಡಿಬಿ ಇರಬಹುದು. ಇವಕ್ಕೆ ಹಣ ಕೊಡಿ. ಇವುಗಳನ್ನು ಸ್ಮಾರಕಗಳನ್ನಾಗಿ ಮಾಡಬೇಡಿ. ನಿಮ್ಮ ಕಾಲದಲ್ಲಾದರೂ ಅಟ್‌ಲೀಸ್ಟ್ ಸ್ಮಾರಕಗಳನ್ನಾಗಿ ಮಾಡಬೇಡಿ. ಈ ಆನ್‌ಗೋಯಿಂಗ್ ವರ್ಕ್ಸ್ ಆದರೂ ಮುಗಿಸಿ ಬಾಕಿ ಬಿಲ್ ಅನ್ನು ಪಾವತಿ ಮಾಡಿ, ಬೀಗವನ್ನು ಜಡಿಯಿರಿ. ಆಶಯದಿಂದ ಅದನ್ನು ಪ್ರಾರಂಭ ಮಾಡಿದ್ದಿರೋ ಆ ಆಶಯಕ್ಕೆ ಇವತ್ತು ಬಂಗ ಬಂದಿದೆ. ಆದ್ದರಿಂದ ದಯವಿಟ್ಟು ಇದರಲ್ಲಾದರೂ ನೀವು ಒದಗಿಸಿಬಿಡಿ. ನೀವು ಉತ್ತರ ಹೇಳುವಾಗ 25 ಕೋಟಿ ರೂಪಾಯಿ ಏನು ಮಹಾ ಸಾರ್ ಒದಗಿಸಿ.

ಶ್ರೀ ಹೆಚ್.ಎಸ್.ಸೋಮಲಿಂಗಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ಸ್ವಾಗತ ಮಾಡುತ್ತಿದ್ದೇನೆ.

ಛೇರ್ಮನ್:- ಇಲ್ಲ, ಇಲ್ಲ, ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ತಾವು ಕೊಡಿ.

ಶ್ರೀ ಹೆಚ್.ಎಸ್.ಸೋಮಲಿಂಗಪ್ಪ:- ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಸ್ವಾಗತ ಮಾಡಬೇಕಾಗಿದೆ.

(ಗೊಂದಲ)

ಶ್ರೀ ಹೆಚ್.ಎಸ್.ಸೋಮಲಿಂಗಪ್ಪ:- ನಮ್ಮ ಯಾದಗಿರಿಯಲ್ಲಿ . . .

ಛೇರ್ಮನ್:- ಕೂಡಿ, ಅವರು ಉತ್ತರ ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರುಗಳಾದ ಮಾಧುಸ್ವಾಮಿ, ವಾಟಾಳ್ ನಾಗರಾಜ್, ರಮೇಶ್ ಕುಮಾರ್ ಎಲ್ಲರೂ ಮಾತನಾಡಿದ್ದಾರೆ.

ಛೇರ್ಮನ್:- ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಛೇರ್ಮರವರೆ, ತಾವು ನನ್ನ ಜೊತೆ ಬಂದು ಮಾತನಾಡಿ. ಇದು ನೋಡಲಿಕ್ಕೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಇಷ್ಟೊಂದು ದೊಡ್ಡ ಗಾತ್ರ ಇದೆ ಎಂದು ಕಾಣಿಸುತ್ತದೆ ನಿಜ. ಆದರೆ ಅಲ್ಲಿ ನಾವು ಯಾವ ರೀತಿ ಹಣವನ್ನು ಒದಗಿಸಿದ್ದೇವೆ ಮತ್ತು ಏತಕ್ಕೆ ಪೂರಕ ಅಂದಾಜುಗಳ ಮೂಲಕ ತಂದಿದ್ದೇವೆ ಮತ್ತು ಹೇಗೆ ತಂದಿದ್ದೇವೆ ಎನ್ನತಕ್ಕದ್ದನ್ನು ಕೂಡ ವಿಚಾರ ಮಾಡತಕ್ಕದ್ದು ಇದನ್ನು ಮಾನ್ಯ ಸದಸ್ಯರು ನೋಡಬೇಕೆಂದು ನನ್ನ ಮನವಿ. ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ಒಟ್ಟು 900 ಚಿಲ್ಲರೆ ಕೋಟಿ ರೂಪಾಯಿಗಳ ಒಳಗಡೆ 783 ಕೋಟಿ ರೂಪಾಯಿ ಕನ್‌ಸಾಲಿಡೇಟೆಡ್ ಫಂಡ್‌ನಿಂದ ಹೊರಗಡೆ ಹೊಗತಕ್ಕದ್ದು. ಕ್ಯಾಶ್ ಫ್ಲೋ ಇರತಕ್ಕದ್ದು ಅಷ್ಟು. ಇದರಲ್ಲಿ ಬಹಳ ದೊಡ್ಡ ಮೊತ್ತವಾಗಿ ಹೋಗುತಕ್ಕದ್ದು 300 ಕೋಟಿ ರೂಪಾಯಿ ಸಬ್ಸಿಡಿ ಅಕ್ಕಿ, ಬಡವರಿಗೆ ಕೊಡತಕ್ಕಂಥ ಅಕ್ಕಿ ಮತ್ತು ಗೋಧಿಗೆ ಕೊಡತಕ್ಕಂಥ ಹಣ, ಅದಕ್ಕೆ 300 ಕೋಟಿ ರೂಪಾಯಿ ಹೋಗುತ್ತಿದೆ. ರೋಡ್ಸ್ ಮತ್ತು ಬ್ರಿಡ್ಜಸ್ ಇದಕ್ಕೆ ಸುಮಾರು 200 ಕೋಟಿ ರೂಪಾಯಿನಷ್ಟು ಮಾಡಿದ್ದೇವೆ. ಸಣ್ಣ ಕೈಗಾರಿಕೆಗಳಿಗೆಲ್ಲಾ ಸಬ್ಸಿಡಿ ಕೊಡತಕ್ಕದ್ದಕ್ಕೆ 65 ಕೋಟಿ ರೂಪಾಯಿಗಳ ಸಾಲ ತೆಗೆದುಕೊಳ್ಳುವುದು ಬೇಡ ಎಂದು ಹೇಳಿ ನಾವೇ ಬಜೆಟ್‌ನಲ್ಲಿ ಕೊಟ್ಟಿದ್ದೇವೆ. ಸಾಲ ತೆಗೆದುಕೊಳ್ಳಬೇಕೆಂದು ಬಜೆಟ್‌ನಲ್ಲಿ ಹೇಳಿದ್ದೇನೆ. 65 ಕೋಟಿ ರೂಪಾಯಿ ನೀವು ಮಾರ್ಕೆಟ್‌ಗೆ ಹೋಗಿ ಸಾಲವನ್ನು ತೆಗೆದುಕೊಳ್ಳಿ. ಗೌರ್ವನ್‌ಮೆಂಟ್ ಗ್ಯಾರಂಟಿ ಕೊಡುತ್ತೇವೆ. ಸಬ್ಸಿಡಿ ತೀರಿಸಿ ಎಂದು ಹೇಳಿದ್ದೆ. ಆದರೆ ನಾನು ಯೋಚನೆ ಮಾಡಿದೆ. ಸಬ್ಸಿಡಿ ಲೋನ್ ಏಕೆ ತೆಗೆದುಕೊಳ್ಳಬೇಕು? ನಾವೇ ಕೊಡೋಣವೆಂದು ಹೇಳಿ ಕೊಟ್ಟಿದ್ದೇವೆ. ಆಮೇಲೆ ಹೊಸ ಎಲೆಕ್ಷನ್ಸ್ ಬಂತು. ಅದಕ್ಕೆ 24 ಕೋಟಿ ರೂಪಾಯಿ ಖರ್ಚಾಯಿತು. ಪಂಚಾಯತಿ ಚುನಾವಣೆಗಳು ಬಂದಿದ್ದಾವೆ, ಗ್ರಾಮ ಪಂಚಾಯತಿಗಳು ಬಂದಿದ್ದಾವೆ, ತಾಲ್ಲೂಕು ಪಂಚಾಯತಿ ಚುನಾವಣೆಗಳು ಬಂದಿದ್ದಾರೆ. ಇವಕ್ಕೆ 24 ಕೋಟಿ ರೂಪಾಯಿ ಇಟ್ಟಿದ್ದೇವೆ. ಮೇಜರ್ ಆಗಿ ಇವುಗಳನ್ನು ಕಳೆದರೆ 600 ಕೋಟಿ ರೂಪಾಯಿಗಳು ಇವೇ ಹೋಗಿ ಬಿಡುತ್ತದೆ. 783 ಕೋಟಿ ರೂಪಾಯಿಗಳಲ್ಲಿ 600 ಕೋಟಿ ರೂ. ಮೇಜರ್ ಅಮೌಂಟ್‌ಗಳು ಹೋದರೆ ಉಳಿಯತಕ್ಕದ್ದು ಬಹಳ ಅಲ್ಪ ಹಣ. ಬಹಳ ದೊಡ್ಡ ಪ್ರಮಾಣದ ಹಣವೇನೂ ಅಲ್ಲ. ನಾನು ಈಗಾಗಲೇ ಹೇಳಿದ ಹಾಗೆ ರೀಸೋರ್ಸ್‌ಸ್ ಕ್ರಂಚ್‌ನಿಂದ ಬಹಳ ತೊಂದರೆ ಆಗಿ ಬಿಟ್ಟಿದ್ದಾವೆ. ಬಜೆಟ್‌ನಲ್ಲಿ ಹೇಳಿರತಕ್ಕಂಥ ಕಾರ್ಯಕ್ರಮಗಳಿಗೆ ಹಣ ಕೊಡುವುದಕ್ಕೆ ಆಗಿಲ್ಲ. ಹೇಳಿರತಕ್ಕ ಕಾರ್ಯಕ್ರಮಗಳಿಗೆ ದುಡ್ಡನ್ನು ಖರ್ಚುಮಾಡಿದ್ದೇವೆ. ಪ್ಲಾನ್ ಕಟ್ ಮಾಡಿದ್ದೇವೆ. ಅಲ್ಲಿಂದ ತೆಗೆದುಳಲ್ಲಿ ರೀಅಪ್ರೋಪ್ರಿಯೇಷನ್ ಮಾಡಿಕೊಡುತ್ತಿದ್ದೇವೆ ಎಂದು ಎಲ್ಲೂ ಹೇಳಿಲ್ಲ. ನಾವು 300 ಕೋಟಿ ರೂಪಾಯಿಗಳನ್ನು ಫುಡ್ ಸಬ್ಸಿಡಿಗೆ ಏಕೆ ಇಟ್ಟಿದ್ದೇವೆ ಎಂದರೆ ಮಾನ್ಯ ಯಡಿಯೂರಪ್ಪನವರಿಗೆ ಬಹುಶಃ ಜ್ಞಾಪಕ ಇರಬಹುದು. ನೀವು ಇಲ್ಲಿ ಅಸೆಂಬ್ಲಿಯಲ್ಲಿ ರೈಸ್ ಮಾಡಿದ್ದೀರಿ. ಸುಮಾರು 14 ಲಕ್ಷ ಪಡಿತರ ಚೀಟಿ ಕೊಟ್ಟು ಬಿಟ್ಟಿದ್ದಾರೆ, ಕಾರ್ಡ್‌ದಾರರಿಗೆ. ಅವರನ್ನು ಸೇರಿಸಿ ಅಕ್ಕಿ ಕೊಡುತ್ತೇವೆಂದು ಹೇಳಿ ಇಲ್ಲಿ ಅಸೆಂಬ್ಲಿಯಲ್ಲಿ ನಾವು ಆಶ್ವಾಸನೆ ಕೊಟ್ಟಿದ್ದೇವೆ ಅದು 64 ಲಕ್ಷದಿಂದ 78 ಲಕ್ಷಕ್ಕೆ ಕಾರ್ಡ್ ಹೊರಟು ಹೋಯಿತು. 64 ಲಕ್ಷದಿಂದ 74 ಲಕ್ಷ ಕುಟುಂಬಕ್ಕೆ ಹೋಯಿತು. ಹಾಗಾಗಿ ಪ್ರತಿ ತಿಂಗಳೂ ಸಬ್ಸಿಡಿ ಜಾಸ್ತಿ ಆಯಿತು. ಅದಕ್ಕೋಸ್ಕರವಾಗಿ ನಾವು ಅಡಿಷನಲ್ ಆಗಿ 300 ಕೋಟಿ ರೂಪಾಯಿಗಳನ್ನು ಕೊಡಲೇಬೇಕಾಗಿ ಬಂತು. ಅದು ಕಮಿಟೆಡ್ ಪ್ರೋಗ್ರಾಮ್ ಆಗಿತ್ತು. ಮತ್ತು ಇದನ್ನೇನು ನಿಲ್ಲಿಸುತ್ತೇವೆ ಅಥವಾ ಅಕ್ಕಿ ರೇಟನ್ನು ಕಡಿಮೆ ಮಾಡುತ್ತೇವೆ, ಸಂಖ್ಯೆ ಕಡಿಮೆ ಮಾಡುತ್ತೇವೆ ಎಂದು ಅಲ್ಲ. ಮಾನ್ಯ ಮಾಧುಸ್ವಾಮಿ ಅವರು ಹೇಳಿದ ಹಾಗೆ ಎಲ್ಲಾ ನಾಲ್ಕು

ಸಾವಿರ ಕಡಿಮೆ ಮಾಡಿ ಎಂದು ಹೇಳಲಿಲ್ಲ. ಯಾರಿಗೂ ಹೇಳಲಿಲ್ಲ. ಇವತ್ತು ನಮ್ಮ ಮಾನ್ಯ ಆಹಾರ ಸಚಿವರಾದಂತಹ ಮಹದೇವ್ ಪ್ರಸಾದ್ ಅವರು ಇಲ್ಲಿ ಇಲ್ಲ ಅವರಿಗೆ ನಾವು ಸ್ಪಷ್ಟವಾಗಿ ಸೂಚನೆ ಕೊಟ್ಟಿದ್ದೇವೆ. ನಾನು ಸಹ ಎರಡು ಸಾರಿ ಮೀಟಿಂಗ್ ಮಾಡಿ ಹೇಳಿದ್ದೇನೆ. ಯಾರೇ ಬಡವರು ಬಡತನ ರೇಖೆಗಿಂತ ಕೆಳಗಡೆ ಇರತಕ್ಕವರು ಇದ್ದಾರೆ. ಯಾರಿಗೆ ಕೊಡುತ್ತೇವೆಂದು ಹೇಳಿದ್ದೇವೆ? ಅವರ್‍ಯಾರಿಗೂ ತಪ್ಪಿ ಹೋಗಬಾರದು ಎಂದು ಹೇಳಿದ್ದೇನೆ. ಆದರೆ ಯಾರು ಅನ್‌ಡಿಸರ್ವ್ ಇದ್ದಾರೆ? ಯಾರು ಎಲಿಜಿಬಲ್ ಇಲ್ಲ ಅವರನ್ನು ಎಲಿಮಿನೇಟ್ ಮಾಡಿ ಎಂದು ಹೇಳಿದ್ದೇವೆಯೇ ಹೊರತು, ಕೊಡುವ ಬಡವರ ಸಂಖ್ಯೆಯನ್ನು ಕಡಿಮೆ ಮಾಡಿ, ನಾವು ಸಬ್ಸಿಡಿ ಕಡಿಮೆ ಮಾಡುತ್ತೇವೆಂದು ನಾವು ಎಲ್ಲೂ ಡೈರೆಕ್ಷನ್ ಯಾವ ಜಿಲ್ಲಾಧಿಕಾರಿಗಳಿಗೂ ಕೊಟ್ಟಿಲ್ಲ. ಯಾವ ಫುಡ್ ಡಿಪಾರ್ಟ್‌ಮೆಂಟ್‌ಗೂ ಕೊಟ್ಟಿಲ್ಲ. ಯಾರಿಗೂ ಕೊಟ್ಟಿಲ್ಲ. ಆದ್ದರಿಂದ ಈಗ ಬಹಳ ವೈಜ್ಞಾನಿಕವಾಗಿ ಎರಡು ತಿಂಗಳಲ್ಲಿ ಸರ್ವೆ ಮಾಡಬೇಕೆಂದು ಹೇಳಿ ಸರ್ವೆ ಕಾರ್ಯ ಈಗ ಪ್ರಾರಂಭ ಆಗಿದೆ. ಆದರೆ ನಾವು ಕೊಡತಕ್ಕ 78 ಲಕ್ಷ ಕೊಡುತ್ತಿದ್ದೇವಲ್ಲ. 20 ಕೆ.ಜಿ. ಅಕ್ಕಿ, 5 ಕೆ.ಜಿ.ಗೋಧಿ. ಅಲ್ಲಿ ಸಣ್ಣ ಪುಟ್ಟ ದೋಷಗಳು ಇರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಯಾರೋ ಕೆಲವರು ಬಡವರ ಹೆಸರು ಬಿಟ್ಟು ಹೋಗಿರಬಹುದು. ಅನ್ ಡಿಸರ್ವ್‌ಡ್ ಫೆಲೋ ಕೆಲವರು ಸೇರಿಕೊಂಡಿರಬಹುದು. ನಾನು ಈ ವಿಷಯವನ್ನು ಡಿಸ್‌ಪ್ಯೂಟ್ ಮಾಡುತ್ತಿಲ್ಲ. ಆದರೆ ಬಡವರಿಗೆ ಕೊಡಬೇಕೆನ್ನತಕ್ಕ ಕಳಕಳಿಯನ್ನು ನಾವೇನು ಇಟ್ಟುಕೊಂಡು, ಬಡವರ ಪರವಾದಂತಹ ಕಾರ್ಯಕ್ರಮ ಮಾಡುತ್ತೇವೆಂದು ಹೇಳಿದ್ದೇವೋ ಮಾನ್ಯ ಯಡಿಯೂರಪ್ಪನವರೆ, ಹೋದ ಸರ್ಕಾರದಲ್ಲಿ ಒಟ್ಟು ಸಬ್ಸಿಡಿ ಅಕ್ಕಿಗೆ ಇದ್ದದ್ದು 180 ಕೋಟಿ ರೂಪಾಯಿಗಳು. ಈ ಸಾರಿ ನಾವು ಬಡವರಿಗೆ ಮೂರು ರೂಪಾಯಿಗೆ ಒಂದು ಕೆ.ಜಿ.ಅಕ್ಕಿ ಕೊಡುತ್ತೇವೆಂದು ಹೇಳಿದ ಮೇಲೆ ನಾವು ಪ್ರತಿತಿಂಗಳೂ 60 ಕೋಟಿ ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಡುತ್ತಿದ್ದೇನೆ.

ಶ್ರೀ ಕೆ.ಆರ್ ರಮೇಶ್‌ಕುಮಾರ್: ಮಾನ್ಯ ಛೇರ್ಮನ್‌ರೆ, ಮಾನ್ಯ ಸದಸ್ಯರಾದ ಜೆ.ಸಿ.ಮಾಧುಸ್ವಾಮಿಯವರು ಮಾಡಿರುವ observation ಬಹಳ valid ಆಗಿದೆ. ಅವರು ಏನು ಹೇಳುತ್ತಾರೆಂದರೆ, ಯೂನಿಫಾರ್ಮ್ ಆಗಿ ಇಪ್ಪತ್ತು ಕಿಲೋ ಅಂತ ಮಾಡಬೇಡಿ. ಅದರ ಬದಲು ನೀವು ಸರ್ವೆ ಮಾಡುವಾಗ size of the family ಇರುತ್ತದಲ್ಲಾ, ಹತ್ತು ಕಿಲೋ ಅಗತ್ಯವಿರುವವರಿಗೆ ಹತ್ತು ಕಿಲೋ ಅಕ್ಕಿ ಕೊಡುವುದು, ಮೂವತ್ತು ಕಿಲೋ ಅಗತ್ಯವಿರುವವರಿಗೆ ಅಷ್ಟೇ ಕೊಡಿ. Let there be some rationale. ಆದರೆ, ಯೂನಿಫಾರ್ಮ್ ಆಗಿ ಆ ರೀತಿ ಮಾಡುವುದರಲ್ಲಿ ಅರ್ಥವಿಲ್ಲ. ಕೆಲವು ಕಡೆಗಳಲ್ಲಿ ಹೆಚ್ಚುವರಿಯಾಗಿ ಕೊಡುತ್ತಿದ್ದರೂ ಅಲ್ಲಿ ಅಗತ್ಯವಿರುವುದಿಲ್ಲ. ಹೇಗೂ ನಿಮ್ಮ ಇಲಾಖೆಯವರು ಸರ್ವೆ ಮಾಡುತ್ತಿರುವುದರಿಂದ ಈ aspect ಕೂಡ ಗಮನಕ್ಕೆ ತೆಗೆದುಕೊಂಡರೆ, I think that would be right. That is a valid suggestion.

ಶ್ರೀ ಸಿದ್ದರಾಮಯ್ಯ: ನಾವು ಸರ್ವೆ ಮಾಡುವಾಗ ಮಾನ್ಯ ಸದಸ್ಯರಾದ ರಮೇಶ್‌ಕುಮಾರ್‌ರವರು ನೀಡಿರುವ ಸಲಹೆಯನ್ನು ಕೂಡ ಗಮನದಲ್ಲಿಟ್ಟುಕೊಳ್ಳುತ್ತೇವೆ. ಅದರ ಬಗ್ಗೆ ವಿಚಾರ ಮಾಡೋಣ. ಆದರೆ, ತಮಗೆಲ್ಲರಿಗೂ ಗೊತ್ತಿರುವ ರೀತಿಯಲ್ಲಿ ಸಮ್ಮಿಶ್ರ ಸರ್ಕಾರದಲ್ಲಿರುವ ಎರಡೂ ಪಕ್ಷದವರಾದ ನಾವು ಸೇರಿಕೊಂಡು Common Minimum Programme ಅಂತ ಮಾಡಿದೆವು. ಅದರಂತೆ ಬಡವರಿಗೆ ಮೂರು ರೂಪಾಯಿಗೆ ಅಕ್ಕಿ ಕೊಡಲು ತೀರ್ಮಾನಿಸಿದ್ದೇವೆ. ಅದರ ಆಧಾರದ ಮೇಲೆ ನಾವು ಬಜೆಟ್ ಮಂಡಿಸುವಾಗ ಮೂರು ರೂಪಾಯಿಗೆ ಅಕ್ಕಿ ಕೊಡುತ್ತೇವೆ,

ಐದು ಕಿಲೋ ಗೋಧಿ ಕೊಡುತ್ತೇವೆ. ಅದನ್ನು ಬಜೆಟ್‌ನಲ್ಲಿ ಅಳವಡಿಸುವ ಮೂಲಕ ಕಾರ್ಯಕ್ರಮವನ್ನು ಜಾರಿಗೊಳಿಸಿರುವುದಾಗಿದೆ. ಹಾಗಾಗಿ, additionality ಆಗಿ 300 ಕೋಟಿ ರೂಪಾಯಿಗಳಷ್ಟು ಹಣವನ್ನು ಹೆಚ್ಚಿಗೆ ಕೊಡಬೇಕಾದ ಪರಿಸ್ಥಿತಿ ಬಂತು. ಕಾರಣವೇನೆಂದರೆ, ಸುಮಾರು ಹದಿನಾಲ್ಕು ಲಕ್ಷಕ್ಕೂ ಹೆಚ್ಚು ಜನರಿಗೆ ಈ ಹಿಂದೆಯೇ ಬಿಳಿ ಚೀಟಿಗಳನ್ನು ಬರೆದುಕೊಡಲಾಗಿತ್ತು. ಅದನ್ನೆಲ್ಲವನ್ನೂ ನಿಲ್ಲಿಸುತ್ತಾರೆ ಎನ್ನತಕ್ಕದ್ದು ಬಂದಿದ್ದರಿಂದ additionality ಕೊಡಬೇಕಾದಂಥ ಪರಿಸ್ಥಿತಿ ನಿರ್ಮಾಣವಾಯಿತು. ಆದುದರಿಂದ, ಬಜೆಟ್ ರೂಪಿಸುವಾಗ ಇದೆಲ್ಲವನ್ನೂ ಲೆಕ್ಕಹಾಕಿಕೊಳ್ಳಬೇಕಾಗಿತ್ತು. ಊಹಿಸಿಕೊಳ್ಳಬೇಕಾಗಿತ್ತು ಎನ್ನುವುದರಲ್ಲಿ ಸತ್ಯವಿದ್ದರೂ ಕೂಡ ಮತ್ತು ಇದು ನಮ್ಮ ಊಹೆಗೆ ನಿಲುಕದೇ ಇರತಕ್ಕಂಥ ವಿಚಾರವಾಗಿರುವುದರಿಂದ, ಇದು additionality ಆಗಿ ಬಂದಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಸುಮಾರು 300 ಕೋಟಿ ರೂಪಾಯಿಗಳಷ್ಟು additionality ಆಗಿ ನಮ್ಮ ಸಂಪನ್ಮೂಲವನ್ನು ಹೆಚ್ಚಿಸಿಕೊಂಡು ಇದನ್ನು ಕೊಡುತ್ತಿದ್ದೇವೆ ಎನ್ನುವುದನ್ನು ಅವರ ಗಮನಕ್ಕೆ ತರಬಯಸುತ್ತಿದ್ದೇನೆ. ಮತ್ತು "15 ಕೆಜಿ, 20 ಜಾಸ್ತಿಯಾಯಿತು. ಇದು ಸಾಲುವುದಿಲ್ಲ. ಕೆಲವರಿಗೆ ಹೆಚ್ಚಾಗುತ್ತದೆ, ಬೇಕಾಗುವುದಿಲ್ಲ. ಕೆಲವು ಕುಟುಂಬದಲ್ಲಿ ಕಾರ್ಡುಗಳನ್ನು ಹೆಚ್ಚಿಸಿಕೊಂಡಿದ್ದಾರೆ" ಎಂದು ಇವರೆಲ್ಲರೂ ಏನು ಹೇಳುತ್ತಿದ್ದಾರೆ, ನಾವು ಸರ್ವೆ ಮಾಡುವ ಸಂದರ್ಭದಲ್ಲಿ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮುಂದೆ ಪರಿಶೀಲಿಸುತ್ತೇವೆ ಎನ್ನುವ ವಿಚಾರವನ್ನು ಕೂಡ ಅವರಿಗೆ ತಿಳಿಸಬಯಸುತ್ತಿದ್ದೇನೆ.

ಇನ್ನು ರಸ್ತೆಗಳ ಕುರಿತಂತೆ ಹೇಳುವುದಾರೆ, ನಾನು ಬಜೆಟ್ ಮಾಡುವಾಗ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಹೆಚ್ಚು ಪ್ರಮಾಣದಲ್ಲಿ ಹಣ ಮೀಸಲಿಡಲು ಸಾಧ್ಯವಾಗಲಿಲ್ಲ. ಸಂಪನ್ಮೂಲಗಳು ಎಷ್ಟಿದೆಯೋ, ಅಷ್ಟು ನೋಡಿಕೊಂಡು ರಸ್ತೆಗಳ ನಿರ್ವಹಣೆ, ಅಭಿವೃದ್ಧಿಗೆ ಹಣ ಮೀಸಲಿಟ್ಟಿದ್ದೇನೆ. ಅನಂತರ, ಹಳ್ಳಿ ರಸ್ತೆಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ರಸ್ತೆಗಳೆಲ್ಲವೂ ಬಹಳ ಕೆಟ್ಟುಹೋಗಿವೆ ಹಾಗೂ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳೂ ಹಾಳಾಗಿವೆ. ಆದರೆ, ಸುಮಾರು 278 ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ಸ್ ಇದ್ದುದ್ದನ್ನು ಈಗ ಕಡಿಮೆ ಮಾಡಿಕೊಂಡು ಬಂದಿದ್ದೇವೆ. ಅದಕ್ಕೋಸ್ಕರ, ನಾನು ಏನು ಮಾಡಿದೆನೆಂದರೆ, 100 ಕೋಟಿ ರೂಪಾಯಿಗಳಷ್ಟು ಹಣ ಹೆಚ್ಚು ಮಾಡಿ, ಈ ಹಿಂದೆ ರಸ್ತೆ ನಿರ್ವಹಣೆ ಮತ್ತು ಅಭಿವೃದ್ಧಿ ಲೆಕ್ಕ ಶೀರ್ಷಿಕೆ ಸಂಖ್ಯೆ 3054 ಇತ್ತಲ್ಲಾ, both state highways, district roads, and village roads, ಇದಕ್ಕೆ ಮೀಸಲಿಟ್ಟ ಹಣ ಕಡಿಮೆಯಾದ್ದರಿಂದ ಇನ್ನೂ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಒದಗಿಸಿಕೊಡೋಣವೆಂದು 100 ಕೋಟಿ ರೂಪಾಯಿಗಳಷ್ಟು ಹೆಚ್ಚಿಸಿದ್ದೇನೆ. ಇದರಲ್ಲಿ 80 ಕೋಟಿ ರೂಪಾಯಿಗಳು ರಾಜ್ಯ ಹೆದ್ದಾರಿಗೆ, ಜಿಲ್ಲಾ ರಸ್ತೆಗಳಿಗೆ, ಲೋಕೋಪಯೋಗಿ ರಸ್ತೆಗಳಿಗೆ ಕಲ್ಪಿಸಿಕೊಟ್ಟು, ಉಳಿದ 20 ಕೋಟಿ ರೂಪಾಯಿಗಳನ್ನು ಗ್ರಾಮ, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ನಿರ್ವಹಣೆ, ಅಭಿವೃದ್ಧಿಗೆ ನೀಡಿದ್ದೇನೆ. ಮತ್ತು ಇದಕ್ಕಿಂತಲೂ ಹೆಚ್ಚು ಹಣ ಕೊಡಬೇಕೆಂದು ತೀರ್ಮಾನ ಮಾಡಿದ್ದೇನೆ. ಇನ್ನೂ 60 ಕೋಟಿ ರೂಪಾಯಿಗಳನ್ನು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಕೊಡಬೇಕೆಂದು ಮಾಡಿದ್ದೇವೆ. ಅದನ್ನು ಮುಖ್ಯಮಂತ್ರಿಗಳ ಅಭಿವೃದ್ಧಿ ನಿಧಿಯೇನಿದೆಯಲ್ಲಾ ಅದಕ್ಕೆ ಕೊಟ್ಟು ಅದನ್ನು ಮಾಡುತ್ತೇನೆ. ಈಗ "ಕೆಲವು ಕಡೆ ಹೆಚ್ಚಾಗಿದೆ, ಕೆಲವು ಕಡೆ ಕಡಿಮೆಯಾಗಿದೆ" ಎನ್ನುವ ಮಾತನ್ನು ಹೇಳಿದ್ದಾರೆ. ಇದು ಜಿಲ್ಲಾ ಪಂಚಾಯತ್ ಮೂಲಕ ಹೋಗಿರತಕ್ಕಂಥಾದ್ದರಲ್ಲಿ

ಆತರಹ ಆಗಲಿಕ್ಕೆ ಸಾಧ್ಯವಿಲ್ಲ. ಆದರೆ, "ಪಿ.ಡಬ್ಲ್ಯೂ.ಡಿ.ಯಲ್ಲಿ ಜಿಲ್ಲಾ ರಸ್ತೆಗಳಿಗೆ ಈ ರೀತಿಯಾಗಿವೆ" ಯೆಂದು ನೀವು ಏನು ಹೇಳಿದ್ದೀರಿ, ಆ ಕುರಿತಾದ ವಿವರಗಳನ್ನು ಕೂಡ ತರಿಸಿನೋಡಿ ಮಾಡುತ್ತೇವೆ. ಅದು ಯಾವ ರೀತಿ ಆಗಿದೆ ಮತ್ತು ಆ ಕ್ಷೇತ್ರಗಳಲ್ಲಿ ಎಲ್ಲೆಲ್ಲಿ ರಸ್ತೆಗಳು ಜಾಸ್ತಿ ಇವೆ, ಎಲ್ಲಿ ರಸ್ತೆಗಳ ಅಭಿವೃದ್ಧಿಯಾಗಿಲ್ಲ. ಮುಖ್ಯವಾಗಿ ಡಾ:ಡಿ.ಎಂ.ನಂಜುಂಡಪ್ಪನವರ ವರದಿ ಆಧರಿಸಿ ಅದನ್ನೇ ಗಮನದಲ್ಲಿಟ್ಟುಕೊಂಡು ಮಾಡಬೇಕು ಎನ್ನತಕ್ಕಂಥ ಸೂಚನೆಯನ್ನೂ ಕೂಡ ಪಿ.ಡಬ್ಲ್ಯೂ.ಡಿ.ಗೆ ಕೊಡುತ್ತೇನೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ಅಡಿಶನಲ್ ಆಗಿ ಕರ್ನಾಟಕ ರಸ್ತೆ ಮತ್ತು ಸೇತುವೆ ಅಭಿವೃದ್ಧಿ ನಿಗಮ ಇದೆಯಲ್ಲಾ. . . .

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಈಗ ಹೊಸದಾಗಿ ರಸ್ತೆಗಳನ್ನು ನಿರ್ಮಾಣ ಮಾಡುವಾಗ ಡಾ:ಡಿ.ಎಂ.ನಂಜುಂಡಪ್ಪನವರ ವರದಿ ಪ್ರಕಾರ ಮಾಡಿ, ತೊಂದರೆಯಿಲ್ಲ. ಎಲ್ಲಾ ರಸ್ತೆಗಳ ನಿರ್ವಹಣೆ ಮಾಡಬೇಕಾಗುತ್ತದೆ. ಆದರೆ, ರಸ್ತೆಗಳ ನಿರ್ವಹಣೆಗೆ ಹಣ ಬಿಡುಗಡೆಯಾಗುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ರಸ್ತೆಗಳ ನಿರ್ವಹಣೆಗೆ ಹೆಚ್ಚುವರಿಯಾಗಿ ನಾನು ಕಲ್ಪಿಸಿಕೊಡುವಾಗ ಶೇಕಡ 40ರಷ್ಟಿರುವ ಪೆಂಡಿಂಗ್ ಬಿಲ್ಸ್‌ಗೂ ಕೊಡಬೇಕೆಂದು ಹೇಳಿದ್ದೇನೆ. ಅದೇ ರೀತಿ ಶೇಕಡ 60ರಷ್ಟು ಹಣವನ್ನು maintenance and ongoing works ಹೊಸ works ಗೂ ಸಹ ಕೊಡಬೇಕೆಂದು ಆ ಷರತ್ತುಗಳನ್ನು ಹಾಕಿ ಕೊಟ್ಟಿರತಕ್ಕಂಥಾದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದರಲ್ಲಿ ದಿನಗೂಲಿ ನೌಕರರಿಗೆ ಸಂಬಳ, ಸಾರಿಗೆ, ಭತ್ಯೆ, ಇನ್ನಿತರ ಬಾಬ್ತುಗಳನ್ನು ಕಟಾಯಿಸಿ ಕೊಡಬೇಕೆಂತಲೂ ಷರತ್ತುಗಳನ್ನು ವಿಧಿಸಿರುವ ಕಾರಣ, ಪೆಂಡಿಂಗ್ ಬಿಲ್ಸ್ ಒಳಗೊಂಡಂತೆ ಇನ್ನಿತರ ಉದ್ದೇಶಗಳಿಗೆ ಹಣ ಸಂದಾಯವಾದರೆ, ಕೊನೆಗೆ ನೀವು ಕೊಡುವ ಹಣದಲ್ಲಿ ಹೊಸದಾಗಿ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹತ್ತು ಪರ್ಸೆಂಟ್ ಹಣ ಸಹ ಅದರಲ್ಲಿ ಉಳಿಯುವುದಿಲ್ಲ.

ಶ್ರೀ ಸಿದ್ದರಾಮಯ್ಯ(ಉಪಮುಖ್ಯಮಂತ್ರಿಗಳು):- ಹೊಸ ಸೇತುವೆಗಳನ್ನು ನಿರ್ಮಿಸುವುದಕ್ಕೆಂದು 100 ಕೋಟಿ ರೂಪಾಯಿಗಳನ್ನು ಇಟ್ಟಿರುವುದು. ಯಾವ್ಯಾವ ಕಡೆಗಳಲ್ಲಿ, ಎಲ್ಲೆಲ್ಲಿ, ಎಷ್ಟೆಷ್ಟು ಹೊಸ ಸೇತುವೆಗಳನ್ನು ನಿರ್ಮಿಸಬೇಕೆಂಬ ಬಗ್ಗೆಯೂ ಪ್ರಸ್ತಾವನೆಗಳನ್ನು ತರಿಸಿಕೊಂಡಿದ್ದಾರೆ. ಸುಮಾರು 200 ಕೋಟಿ ರೂ.ಗಳಲ್ಲಿ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಸೇತುವೆಗಳನ್ನು ನಿರ್ಮಿಸಬೇಕೆಂಬ ಬಗ್ಗೆ ಆಲೋಚನೆ ಕೂಡ ಮಾಡುತ್ತಿದ್ದೇವೆ. ಇನ್ನು ಬಜೆಟ್‌ನಲ್ಲಿ ಕೆಪಿಟಿಸಿಎಲ್‌ಗೆ ಸಬ್ಸಿಡಿಗೆಂದು 1,400 ಕೋಟಿ ರೂಪಾಯಿಗಳನ್ನು ನಾವು ಮೀಸಲಿಟ್ಟಿದ್ದರೂ ಈಗ ಅದು 1,800 ಕೋಟಿ ರೂಪಾಯಿಗಳಾಗುತ್ತಿದೆ. ಅದಕ್ಕೋಸ್ಕರ, 400 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಇವೆಲ್ಲವೂ ಹೆಚ್ಚುವರಿ ಬಾಬ್ತುಗಳು. "ದುಡ್ಡು ಎಲ್ಲೆಲ್ಲಿ ಖರ್ಚು ಮಾಡಿದ್ದೀರಿ? ದುಡ್ಡು ಎಲ್ಲಿ ಹೋಗಿದೆ?" ಎಂದು ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಕೇಳಿದರು. ರಸ್ತೆಗಳ ಕಾಮಗಾರಿಗೆ ಹೆಚ್ಚುವರಿಯಾಗಿ 200 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಆ ಹಣವನ್ನು ರಸ್ತೆಗಳ ಕಾಮಗಾರಿಗಳಿಗೆ ಕೊಟ್ಟಂತಾಗಲಿಲ್ಲವೇ? ಬಡವರಿಗೆ ಅಕ್ಕಿಗೆಂದು 300 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಯಾರು ಕೊಂಡು ತಿನ್ನಲು ಅಶಕ್ತರಾಗಿದ್ದರೋ, ಅಂತಹವರಿಗೆ ಸುಮಾರು 600 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದೇವಲ್ಲಾ. ಇದು ಬಡವರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮವಲ್ಲವೇ? "ಐ.ಎ.ಎಸ್. ಆಫೀಸರ್

ಅಸೋಸಿಯೇಷನ್‌ಗೆ ಏಕೆ ಕೊಡುತ್ತಿದ್ದೀರಿ?" ಎಂದು ಕೇಳಿದ್ದಾರೆ. ಇದನ್ನು ನಾನೇನೂ ಹೊಸದಾಗಿ ಶುರು ಮಾಡಿರುವುದಲ್ಲ. ಈ ಹಿಂದೆ ಪ್ರತಿ ವರ್ಷವೂ ಐ.ಎ.ಎಸ್. ಆಫೀಸರ್ಸ್ ಅಸೋಸಿಯೇಷನ್‌ಗೆ ಕೊಟ್ಟುಕೊಂಡು ಬರುತ್ತಿದ್ದರು. ಅವರು ರೀಸರ್ಚ್ ಮಾಡುತ್ತಾರೆ, ಸೆಮಿನಾರುಗಳನ್ನು ಮಾಡುತ್ತಾರೆ ಅಂತ ಪ್ರತಿವರ್ಷ ಕೊಟ್ಟಿ ಕೊಂಡು ಬರುತ್ತಿದ್ದರು. ಈ ಸಾರಿ ಬಜೆಟ್‌ನಲ್ಲಿ ಹಣವನ್ನು ಮೀಸಲಿಟ್ಟಿರಲಿಲ್ಲ, ಬಿಟ್ಟುಹೋಗಿತ್ತು. ಎಂದು ಅದನ್ನು ಸೇರಿಸಿದ್ದೇವೆ, ಅಷ್ಟೆ. ನಾನೇನೂ ಹೊಸದಾಗಿ, ಐ.ಎ.ಎಸ್. ಅಧಿಕಾರಿಗಳನ್ನು ಸುಪ್ರೀತಗೊಳಿಸುವುದಕ್ಕಾಗಲಿ, ಮೆಹರ್ಬಾನಿ ಮಾಡುವುದಕ್ಕಾಗಲಿ ಕೊಟ್ಟಿರುವುದಿಲ್ಲ. ಅಲ್ಲದೆ, ಅದನ್ನು ನಾನು ಹೊಸದಾಗಿ ಸೃಷ್ಟಿಸಿದ್ದೂ ಅಲ್ಲ. ಆದರೆ, ಒಂದು ಕೋಟಿ ರೂಪಾಯಿ ಕೊಟ್ಟಿರುವುದು ನಿಜ. ನಮ್ಮ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಅವರ ಬೆನ್ನು ತಟ್ಟುವುದಕ್ಕೋಸ್ಕರ ಕೊಟ್ಟಿದ್ದೇನೆ. ಈಗ ಎಲ್ಲಾ ಅಸೋಸಿಯೇಷನ್‌ಗಳಿಗೆ, ಶಿಕ್ಷಕರ ಭವನ ನಿರ್ಮಿಸಲು ದುಡ್ಡು ಕೊಟ್ಟಿದ್ದೇವೆ. ಅದೇ ರೀತಿ ಎನ್.ಜಿ.ಓ. ಅಸೋಸಿಯೇಷನ್‌ನವರಿಗೆ, ಕೆ.ಎ.ಎಸ್. ಅಸೋಸಿಯೇಷನ್‌ಗೆ, ಐ.ಎ.ಎಸ್. ಅಸೋಸಿಯೇಷನ್‌ಗೆ ಭವನ ನಿರ್ಮಿಸಲು ಹಣ ಕೊಟ್ಟಿದ್ದೇವೆ. ವಾಣಿಜ್ಯ ತೆರಿಗೆ ಇಲಾಖೆಯವರು ಉತ್ತಮವಾಗಿ ಕಾರ್ಯ ನಿರ್ವಹಿಸುವ ಮೂಲಕ ಬೊಕ್ಕಸಕ್ಕೆ ಹೆಚ್ಚು ಹಣ ಸಂಗ್ರಹಿಸುತ್ತಿರುವುದರಿಂದ ಅವರನ್ನು ಪ್ರೋತ್ಸಾಹಿಸುವ ಸಲುವಾಗಿ ನಾನೇ ಸ್ವಯಂಪ್ರೇರಿತವಾಗಿ ಒಂದು ಕೋಟಿ ರೂಪಾಯಿ ಒದಗಿಸಿಕೊಟ್ಟಿದ್ದೇನೆ. ಕಳೆದ ವರ್ಷ ಅಂದರೆ, 2003–04ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 8,000 ಕೋಟಿ ರೂಪಾಯಿಗಳಷ್ಟು ತೆರಿಗೆ ಹಣ ಸಂಗ್ರಹವಾಗಿತ್ತು. ಆದರೆ, ಈ ವರ್ಷ, ಒಂದೇ ವರ್ಷದಲ್ಲಿ ಸುಮಾರು 2,000 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿ ಹಣ ಸಂಗ್ರಹವಾಗುತ್ತಿದೆ! 8,000 ಕೋಟಿ ರೂಪಾಯಿಗಳಿಂದ 10,000 ಕೋಟಿ ರೂಪಾಯಿಗಳವರೆಗೆ ಹೋಗತ್ತಿದೆ. Never in the history of Karnataka. 26.52% growth ಆಗಿದೆ. Karnataka stands No.1 in the the country followed by Orissa and other states.

ಶ್ರೀ ಸಿ.ಎಂ.ಉದಾಸಿ: ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಾಗಿದೆಯಲ್ಲ?

ಶ್ರೀ ಸಿದ್ಧರಾಮಯ್ಯ: ಆಯಿತು. ಒಂದು ಪರ್ಸೆಂಟ್ ಹೆಚ್ಚು ಕಡಿಮೆ ಕಡಿಮೆಯಾಗಬಹುದು. ಅಂದರೆ, 2000 ಕೋಟಿ ರೂಪಾಯಿಗಳು ಬರುತ್ತದೆಯಲ್ಲ? ಕಳೆದ ವರ್ಷ ಡೀಸೆಲ್ ಬೆಲೆ ಹೆಚ್ಚಾಗಿತ್ತು. ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಆಗಿಂದಾಗ್ಗೆ ಹೆಚ್ಚಾಗುತ್ತಾ ಹೋಗುತ್ತಿರುತ್ತದೆ. ಹೋದ ಸಲ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ 1,918 ಕೋಟಿ ರೂಪಾಯಿಗಳಾಗಿದ್ದರೆ, ಈ ಸಲ ಅದು 2,000 ಕೋಟಿ ರೂಪಾಯಿಗಳಾಗುತ್ತದೆ. ಹಾಗೆಂದ ಮಾತ್ರಕ್ಕೆ ಅದರಲ್ಲಿ 2,000 ಕೋಟಿ ರೂಪಾಯಿಗಳು ಹೆಚ್ಚಾಯಿತೇ? ಕಳೆದ ಸಲ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ 1,918 ಕೋಟಿ ರೂ.ಬಂದಿತ್ತು. ಈ ಸಲ ಡಿಸೆಂಬರ್‌ವರೆಗೆ 1,442 ಕೋಟಿ ರೂಪಾಯಿಗಳಷ್ಟು ಬಂದಿದೆ. We may reach Rs.2,000 crores, not much difference. ನಾನು ಹೇಳುವುದು ತಪ್ಪು ಅಂತಿದ್ದರೆ ನೀವೇ ಹೇಳಿ 200 ಕೋಟಿಗಿಂತಲೂ ಸ್ವಲ್ಪ ಹೆಚ್ಚಾಗಬಹುದು. . . .

ಶ್ರೀ ಸಿ.ಬಿ.ಕೃಷ್ಣ ಬೈರೇಗೌಡ:– ಮಾನ್ಯ ಉಪ ಮುಖ್ಯಮಂತ್ರಿಗಳೆ, ತಮ್ಮ ತೆರಿಗೆ ವಸೂಲಾತಿ ಬಹಳ ಚೆನ್ನಾಗಿ ಆಗುತ್ತಿದೆ, ಅದಕ್ಕೋಸ್ಕರ ಅವರಿಗೆ ಉತ್ತೇಜನ ಕೊಡುವ ಸಲುವಾಗಿ ಅವರ ಭವನಕ್ಕೊಂದು ನಿಧಿಯನ್ನು ಕೊಡುತ್ತಿದ್ದೇವೆ ಎಂದು ಹೇಳಿದಿರಿ. ನಾವೆಲ್ಲಾ ಹೊಸ ಶಾಸಕರಾಗಿದ್ದೇವೆ. ನಾವೂ ಸಹ ಕಷ್ಟಪಟ್ಟು ದುಡಿಯುತ್ತಿದ್ದೇವೆ. ನಮಗೂ ಏನಾದರೂ ಒಂದು ನಿಧಿ ಘೋಷಣೆ ಮಾಡಿದರೆ, ನಾವೂ ಸಹ ಅದರಿಂದ ಉತ್ತೇಜಿತರಾಗಿ ಇನ್ನೂ ಚೆನ್ನಾಗಿ ಕೆಲಸ ಮಾಡುತ್ತೇವೆ. ದಯವಿಟ್ಟು ಅದನ್ನು ಘೋಷಣೆ ಮಾಡಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಅವರಿಂದ ಹೆಚ್ಚು ತೆರಿಗೆ ಸಂಗ್ರಹವಾಗಿದೆ. ಅದಕ್ಕೋಸ್ಕರ ಅವರ ಬೆನ್ನು ತಟ್ಟುವ ಸಲುವಾಗಿ ಅವರಿಗೆ 1 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ನಾವೆಲ್ಲಾ ಇಷ್ಟುಕಷ್ಟ ಪಡುತ್ತಿದ್ದೇವೆ, ಆದ್ದರಿಂದ ನಮಗೆ ಏನಾದರೂ ಒಂದು ಕೊಡಿ ಎಂದು ಅವರು ಬಹಳ ದಿವಸಗಳಿಂದ ಡಿಮ್ಯಾಂಡ್ ಮಾಡುತ್ತಿದ್ದರು. . . . .

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ನಮಗೂ ಬೆನ್ನು ತಟ್ಟಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಎಲ್ಲರಿಗೂ ಬೆನ್ನು ತಟ್ಟುತ್ತೇವೆ. ನಾನೇನು ಹೇಳುತ್ತಿದ್ದೇನೆ ಎಂದರೆ, ಅವರಿಗೆ ದುಡ್ಡು ನೀಡಿದ್ದರಿಂದ ಅದೊಂದು ದೊಡ್ಡ ಅಪರಾಧವಾಗಿ ಹೋಯಿತು ಎಂದು ಹೇಳಬೇಕಾದ ಅಗತ್ಯವಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. 10 ಸಾವಿರ ಕೋಟಿ ರೂಪಾಯಿಗಳಷ್ಟು ತೆರಿಗೆ ಕಲೆಕ್ಟ್ ಮಾಡಿರುವಾಗ, ಅದನ್ನು ಕಲೆಕ್ಟ್ ಮಾಡಿರುವಂತಹ ಅಧಿಕಾರಿಗಳ association ಗೆ 1 ಕೋಟಿ ರೂಪಾಯಿಗಳನ್ನು ನೀವು ಭವನ ಮಾಡಿಕೊಳ್ಳಿ ಎಂದು ಕೊಟ್ಟರೆ, ದೊಡ್ಡ ಅಪರಾಧವಾಗಿ ಹೋಯಿತು ಎಂದು ನಾನು ಭಾವಿಸಿಕೊಂಡಿಲ್ಲ. ಅವರಿಗೆ ಬೆನ್ನು ತಟ್ಟುವುದಕ್ಕೋಸ್ಕರ ಕೊಟ್ಟಿದ್ದೇನೆ. ಬಹುಶಃ all members will appreciate that ಎಂದು ನಾನು ತಿಳಿದುಕೊಂಡಿದ್ದೇನೆ. ಆಮೇಲೆ ಸುಪ್ರೀಂಕೋರ್ಟ್‌ನವರು ಜಯಲಲಿತಾ ಕೇಸ್ ಇಲ್ಲಿ ನಡೆಯಬೇಕೆಂದು ಆದೇಶಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನೆಲ್ಲಾ ನಮ್ಮಲ್ಲಿಗೆ ಕಳುಹಿಸಿದ್ದಾರೆ. Federal structureನಲ್ಲಿ ಸುಪ್ರೀಂ ಕೋರ್ಟ್‌ನವರು ಹೇಳಿದರೆ, ನಮಗೆ ಆಗುವುದಿಲ್ಲ, ಹೋಗಿ, ಇನ್ಯಾವುದಾದರೂ ರಾಜ್ಯಕ್ಕೆ ಹಾಕಿ ಎನ್ನುವುದಕ್ಕಾಗುತ್ತದೆಯೇ? ಕೇಸ್ ಅನ್ನು ನಮಗೆ ಕಳುಹಿಸಿದ್ದಾರೆ, ಅದರ ವಿಚಾರಣೆಯ ಖರ್ಚನ್ನು ನಾವು reimburesement ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಮಾಡಿರಿ ಅಂತ ಹೇಳಿದ್ದೇವೆ. ಜಯಲಲಿತಾ ಇಲ್ಲಿಗೆ ಬಂದು ಬಿಟ್ಟರೆ ಗಲಾಟೆ ಆಗುತ್ತದೆ ಎನ್ನುವುದೆಲ್ಲಾ ನಿಜವಲ್ಲ. ಕೋರ್ಟ್‌ನಲ್ಲಿ ನಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವುದು ಬೇರೆ, ಕಾವೇರಿ ನೀರಿನ ಹಂಚಿಕೆಯಲ್ಲಿ ನಮಗೆ ನ್ಯಾಯ ಸಿಗಬೇಕು ಎಂದು ಹೋರಾಟ ಮಾಡುವುದೇ ಬೇರೆ. ನಮ್ಮ ಹಕ್ಕನ್ನು ಬಿಟ್ಟುಕೊಡಬಾರದು ಎನ್ನುವಂತಾದ್ದು ಬೇರೆ ವಿಚಾರ. ಒಂದು judicial process ನಲ್ಲಿ ಸುಪ್ರೀಂಕೋರ್ಟ್‌ನವರು ಜಯಲಲಿತಾ ಮೇಲಿನ ಪ್ರಕರಣದ ವಿಚಾರಣೆಯನ್ನು ತಮಿಳುನಾಡಿನ ಚೆನ್ನೈ ಕೋರ್ಟ್‌ಗಳಲ್ಲಿ ಮಾಡುವುದಕ್ಕಾಗುವುದಿಲ್ಲ, ಅದನ್ನು ಕರ್ನಾಟಕದ ಕೋರ್ಟ್‌ನಲ್ಲೇ ವಿಚಾರಣೆ ಮಾಡಬೇಕು ಎಂದು ಆದೇಶಿಸಿದಾಗ ಹಾಗೂ ಸದರಿ ವಿಚಾರಣೆಯ ಖರ್ಚನ್ನೂ ಸಹ ನಾವು ಕೊಡುತ್ತೇವೆ ಎಂದು ಹೇಳಿದಾಗ, ಇಲ್ಲಿ ಆಗುವುದಿಲ್ಲ ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಆ ತರಹ ಹೇಳುವುದಕ್ಕೆ ಬರುವುದಿಲ್ಲ, Under the federal structure and under the constitution ನಾವು ಆ ತರಹ ಹೇಳಲಿಕ್ಕಾಗುವುದಿಲ್ಲ, ನಾವೆಲ್ಲಾ ಒಂದು ಒಕ್ಕೂಟದಲ್ಲಿ ಬದುಕುವಾಗ ಹಾಗೆಲ್ಲಾ ಮಾಡಲಿಕ್ಕೆ ಬರುವುದಿಲ್ಲ. ಸದರಿ ವಿಚಾರಣೆ ನಡೆಸಲು ಏನು ಖರ್ಚು ಆಗುತ್ತದೋ ಅದನ್ನು ನಾವು ಭರಿಸಿ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಅದನ್ನು ಮಾಡತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಕೊನೆಗೆ ಮಾನ್ಯ ರಮೇಶ್ ಕುಮಾರ್‌ರವರು ಒಂದು ಮಾತನ್ನು ಹೇಳಿದ್ದಾರೆ. ಅದೆಲ್ಲಾ ಮಾಡುವುದೇನೋ ಸರಿ. ಅದರ ಬಗ್ಗೆ ನನ್ನದೂ ಕೂಡ ಸಹಮತ ಇದೆ. ನಾನು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ, ಅದರ ಬಗ್ಗೆ ಕ್ಯಾಬಿನೆಟ್‌ನಲ್ಲೂ ಕೂಡ ಚರ್ಚೆ ಮಾಡಿ, ಶಾಸಕರಿಗೆ ಒಂದು, ಅದೇನೋ, ಮೊದಲಿನಿಂದ ನಾವು ಯೋಚ್ನೆ ಮಾಡಿದ್ದೆವಲ್ಲಾ . . . . . ಬಾಲಬ್ರೂಯಿ

ಶ್ರೀ ವಾಟಾಳ್ ನಾಗರಾಜ್:– ಆಶ್ರಯ ಮನೆಯೇ?

ಶ್ರೀ ಸಿದ್ದರಾಮಯ್ಯ:– ಅವರು ಹಾಗೆಂದು ಹೇಳಿದರೇ?

ಶ್ರೀ ವಾಟಾಳ್ ನಾಗರಾಜ್:– ಅದು ಹಾಗೇ ಆಯಿತು. ಶಾಸಕರುಗಳಿಗೆ ಏನೋ ಕರುಣೆಯಿಂದ ಕೊಡೋಣ ಎಂದು ಹೇಳುವಂತಾದ್ದು ಆದರೆ. . . . .

ಶ್ರೀ ಸಿದ್ದರಾಮಯ್ಯ:– ಹಾಗಾದರೆ ನಾನು ಅದರ ಬಗ್ಗೆ ಹೇಳುವುದು ಬೇಡವೇ? ನಾನು ಕುಳಿತುಕೊಂಡು ಬಿಡಲೇ?

ಶ್ರೀ ವಾಟಾಳ್ ನಾಗರಾಜ್:– ತಾವು ಕುಳಿತುಕೊಳ್ಳಬೇಡಿ, ನಿಂತುಕೊಂಡೇ ಇರಿ. ಯಾರು ಬೇಡವೆನ್ನುತ್ತಾರೆ?

ಶ್ರೀ ಸಿದ್ದರಾಮಯ್ಯ:– ಮತ್ತೆ ಇದನ್ನು ಆಶ್ರಯ ಮನೆಯೇ ಎಂದು ಕೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್:– ತಾವು ಸಿಟ್ಟು ಮಾಡಿಕೊಳ್ಳಬೇಡಿ.

ಶ್ರೀ ಸಿದ್ದರಾಮಯ್ಯ:– ನಾನು ಸಿಟ್ಟು ಮಾಡಿಕೊಂಡಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನೀವು ಸಿಟ್ಟು ಮಾಡಿಕೊಳ್ಳಲಿಕ್ಕೆ ಹೊರಟಿದ್ದಿರಿ. ಇನ್ನೇನು ಅದು ಶುರುವಾಗುತ್ತಿತ್ತು.

ಶ್ರೀ ಸಿದ್ದರಾಮಯ್ಯ:– ನನಗೆ ಸಿಟ್ಟೇ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಸಿಟ್ಟು ಬರುವುದೇ ಇಲ್ಲವೇ? ನಾನು ನೀವು ಸಿಟ್ಟು ಮಾಡಿಕೊಂಡಿದ್ದನ್ನು ಹಲವಾರು ಬಾರಿ ನೋಡಿದ್ದೇನೆ. ನಾವಿಬ್ಬರೂ ಸಿಟ್ಟು ಮಾಡಿಕೊಂಡು ಇಲ್ಲಿ ಬಂದಿದ್ದು ನನಗೆ ನೆನಪಿನಲ್ಲಿದೆ. ನೀವು ಆ ಕಡೆಯಿಂದ ಬಂದಿರಿ, ನಾನು ಈ ಕಡೆಯಿಂದ ಬಂದೆ.

ಶ್ರೀ ಸಿದ್ದರಾಮಯ್ಯ:– ಯಾವಾಗ?

ಶ್ರೀ ವಾಟಾಳ್ ನಾಗರಾಜ್:– ನಾಲ್ಕು ವರ್ಷಗಳ ಹಿಂದೆ. ಆಗ ಸಿಟ್ಟು ಮಾಡಿಕೊಂಡು ಇಬ್ಬರೂ ಕೈ ಮಡಚಿಕೊಂಡೇ ಇಲ್ಲಿಗೆ ಬಂದೆವಲ್ಲಾ.

ಶ್ರೀ ಸಿದ್ದರಾಮಯ್ಯ:– ಅದು ಯಾವಾಗಲೋ ನನಗೆ ನೆನಪಾಗುತ್ತಿಲ್ಲ. ಛೇ! ಛೇ! ನಿಮ್ಮ ಜೊತೆ ನಾನು ಯಾವಾಗಲಾದರೂ ಜಗಳವಾಡಿದ್ದೀನಾ?

ಶ್ರೀ ವಾಟಾಳ್ ನಾಗರಾಜ್:– ಅದು ಸದನದಲ್ಲೇ ಆಯಿತಲ್ಲಾ!

ಶ್ರೀ ಸಿದ್ದರಾಮಯ್ಯ:– ಹೌದೇ, ಹೋಗಲಿ ಬಿಡಿ. ಇದು sympathy ಅಂತಲ್ಲ. ಶಾಸಕರುಗಳಿಗೂ ಕೂಡ ಸಾಯಂಕಾಲದ ಹೊತ್ತು ಸ್ವಲ್ಪ ಕಾಲ ಕಳೆಯುವುದಕ್ಕೆ relax ಮಾಡಲಿಕ್ಕೆ ಎಲ್ಲಕ್ಕಿಂತ ಮುಖ್ಯವಾಗಿ ಆರೋಗ್ಯ ಕಾಪಾಡಿಕೊಳ್ಳಲಿಕ್ಕೆ Health Club ಮಾಡಿಕೊಳ್ಳಲಿಕ್ಕೆ, Gymnasium ಮಾಡಲಿಕ್ಕೆ ಅವೆಲ್ಲಾ ಇರಬೇಕು. ಅದರ ಅರ್ಥ recreation ಅಂತಲ್ಲ. Recreation ಗೋಸ್ಕರ ಮಾಡಬೇಕು ಅನ್ನತಕ್ಕಂಥದ್ದು ಅಲ್ಲ. ಅವರು ಇನ್ನೆಲ್ಲಿ ಹೋಗಲಿಕ್ಕಾಗುತ್ತದೆ? ಆದ್ದರಿಂದ ಅದು ಬೇಕು ಎನ್ನತಕ್ಕಂಥದ್ದು ಇದೆ. ಅದನ್ನು ಗಂಭೀರವಾಗಿ ಪರಿಗಣಿಸಿ, ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಇದರ ಬಗ್ಗೆ ಮಾತನಾಡಿ ಒಂದು ತೀರ್ಮಾನ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಶಾಸಕರ ಏರಿಯಾ ಡೆವಲಪ್‌ಮೆಂಟ್ ಬಗ್ಗೆ ಹೇಳುವುದಾದರೆ, ಮಾನ್ಯ ಅಧ್ಯಕ್ಷರೆ, ನಾನು ಬಜೆಟ್ ಮಂಡಿಸಿದ್ದು ಜುಲೈ ತಿಂಗಳಿನಲ್ಲಿ. ನಾನು ಬರುವಾಗಲೇ ಹಿಂದಿನ ಸರ್ಕಾರದವರು ಬಜೆಟ್‌ವೊಂದನ್ನು ಮಂಡಿಸಿದ್ದರು. ಅದರಲ್ಲಿ ಶಾಸಕರಿಗೆ ಏರಿಯಾ ಡೆವಲಪ್‌ಮೆಂಟ್‌ಗೆ ದುಡ್ಡು ಕೊಡುತ್ತೇವೆ ಎಂದೇನೂ ಹೇಳಿರಲಿಲ್ಲ . . . . ಯಾರೋ ಒಬ್ಬರು ನಮ್ಮ ಸದಸ್ಯರು ಹೇಳಿದರು . . . . . .

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ಹೆಚ್ಚುವರಿಯಾಗಿದ್ದು ಕೊಟ್ಟಿದ್ದೀರಾ?

ಶ್ರೀ ಸಿದ್ಧರಾಮಯ್ಯ:– ಹೆಚ್ಚುವರಿಯಾಗಿದ್ದು ಕೊಟ್ಟು ಆಗಿಹೋಗಿಬಿಟ್ಟಿತು. ಹೆಚ್ಚುವರಿ ಬಂದಿದ್ದನ್ನು ನಾನು ಜೇಬಿನಲ್ಲಿ ಇಟ್ಟುಕೊಳ್ಳುವುದಕ್ಕಾಗುತ್ತದೆಯೇ? ಎಲ್ಲಾ ಕೊಟ್ಟು ಬಿಟ್ಟಿದ್ದೇವೆ. ಅಗತ್ಯ ಸೇವೆಗಳಿಗೆ ಏನೇನು ಬೇಕೋ ಅದಕ್ಕೆಲ್ಲಾ ಕೊಟ್ಟು ಬಿಟ್ಟಿದ್ದೇವೆ. ಮುಂದಿನ ಸಾರಿ . . . . .

ಶ್ರೀ ಕೆ.ಎಂ.ಕೃಷ್ಣಮೂರ್ತಿ(ಕಡೂರು):– ನೀವು ಹೋದ ವರ್ಷದ ಎಂಟು ಸಾವಿರ ಕೋಟಿ ರೂಪಾಯಿಗಳಿಗಿಂತ ಈ ವರ್ಷ ಹೆಚ್ಚುವರಿಯಾಗಿ 2 ಸಾವಿರ ಕೋಟಿ ರೂಪಾಯಿಗಳ ತೆರಿಗೆಯನ್ನು ವಸೂಲು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಅದನ್ನು ಮಾನ್ಯ ರಮೇಶ್ ಕುಮಾರ್‌ರವರು appreciate ಮಾಡಿದ್ದಾರೆ. ನಾವೂ ಕೂಡ ಅದನ್ನು ಒಪ್ಪಿಕೊಂಡಿದ್ದೇವೆ. ನೀವು Planning size ಏನೂ cut ಮಾಡಿಲ್ಲ. ಆದರೆ ಶಾಸಕರ ಪರಿಸ್ಥಿತಿ ಏನಾಗಿದೆ ಎಂದರೆ, ನೀವು ಯಾವುದೇ ಗ್ರಾಮೀಣಾಭಿವೃದ್ಧಿಗೆ ಕೊಡುವಂತಹ ಹಣ link documentಗೆ ಹೋಗುತ್ತದೆ, ಇಲ್ಲವೇ ತಾಲ್ಲೂಕು ಪಂಚಾಯಿತಿಗೆ ಹೋಗುತ್ತದೆ. ಕಳೆದ 9 ತಿಂಗಳ ಹಿಂದೆ ನಾವೇನು ಶಾಸಕರಾಗಿ ಆಯ್ಕೆಯಾಗಿ ಬಂದಿದ್ದೇವೋ, ನಾವು ಇಲ್ಲಿಯವರೆಗೂ ನಮ್ಮ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿಸಿದ್ದರೂ ಕೂಡ, ಅದರಿಂದ ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಗೆ ಹೆಸರು ಬರುತ್ತದೆಯೇ ಹೊರತು, ಶಾಸಕರಿಗೆ ಬರುತ್ತಿಲ್ಲ. ಇವತ್ತು ಯಾವುದೇ ಬಜೆಟ್‌ನ್ನು ಅಥವಾ supplementary Bill ನ್ನು ನಾವಿಲ್ಲಿ ಅನುಮೋದನೆ ಮಾಡಿ ಕೊಡುತ್ತಿದ್ದೇವೆ. ನೀವು ಮಾಡಿರುವಂತಹ ಹಣಕಾಸಿನ ವ್ಯವಸ್ಥೆ ಮತ್ತು ಮುಂದಿನ ಸಾರಿ ನಾವು ರೈತರಿಗೆ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳುತ್ತಿರುವಂತಹ ವಿಚಾರ ತುಂಬಾ ಶ್ಲಾಘನೀಯ. ಈ ವರ್ಷಕ್ಕೆ ನಮಗೆ ಕನಿಷ್ಟ 25 ಲಕ್ಷ ರೂಪಾಯಿಗಳನ್ನಾದರೂ ಕೊಡಿ. ಇನ್ನು ಒಂದೂವರೆ ತಿಂಗಳಿನಲ್ಲಿ ಏನೂ ಆಗುವುದಿಲ್ಲ. ಮಾರ್ಚ್ 31ಕ್ಕೆ ಅಂತ್ಯವಾಗುವ ಈ ಆರ್ಥಿಕ ವರ್ಷಕ್ಕೆ ನಮಗೆ 25 ಲಕ್ಷ ರೂಪಾಯಿಗಳನ್ನು ಕೊಡಿ. ಮುಂದಿನ ಆರ್ಥಿಕ ವರ್ಷ ಅಂದರೆ 2005–06ಕ್ಕೆ 1 ಕೋಟಿ ರೂಪಾಯಿಗಳನ್ನು ಕೊಡಿ. ಇಲ್ಲಿ ಏನಾಗುತ್ತದೆ ಎಂದರೆ ಕಾರ್ಯಕ್ರಮಗಳನ್ನು ನೀವು ನಿರ್ದಿಷ್ಟವಾಗಿ ಬಜೆಟಿನಲ್ಲಿ ಹೇಳಿರುತ್ತೀರಿ. ಅದನ್ನು ಅನುಷ್ಠಾನಕ್ಕೆ ತರಬೇಕಾದರೆ ನಾವು ಆ ಕಾರ್ಯಕ್ರಮದ ಅಡಿಯಲ್ಲೇ ಜಾರಿಗೆ ತರಬೇಕು. ಆದರೆ ಶಾಸಕರ ನಿಧಿ ಎಂದು ಮಾಡಿದರೆ ಏನಾಗುತ್ತದೆ ಎಂದರೆ, ಶಾಸಕರು ನಿರ್ದಿಷ್ಟವಾಗಿ ಗುರುತಿಸುವಂತಹ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಸಹಾಯವಾಗುತ್ತದೆ. ಈಗ ಯಾವ ರೀತಿಯಲ್ಲಿ ನೀವು ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳಿಗೆ ಎರಡು ಸಾವಿರ ಕೋಟಿ ರೂಪಾಯಿಗಳ ಹೆಚ್ಚುವರಿ ತೆರಿಗೆ ಸಂಗ್ರಹಿಸಿದ್ದಕ್ಕಾಗಿ ಅವರ ಬೆನ್ನು ತಟ್ಟಿದ್ದೇವೆ ಎಂದು ಹೇಳಿದ್ದೀರೋ, ಅದೇ ರೀತಿಯಲ್ಲಿ ನಮಗೂ ಬೆನ್ನು ತಟ್ಟಿ. ಶಾಸಕರು ನಿಮಗೆ ಶಕ್ತಿ ಕೊಟ್ಟಿದ್ದಾರೆ. ನಾವು ನಿಮಗಾಗಿ ಕೈ ಎತ್ತಿ ಅಧಿಕಾರ ಕೊಟ್ಟಿದ್ದೇವೆ. ನೀವು ನಮ್ಮ ಬೆನ್ನನ್ನೂ ಸಹ ತಟ್ಟಿ.

ಶ್ರೀ ಸಿದ್ಧರಾಮಯ್ಯ:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಎಲ್ಲರ ಒಪ್ಪಿಗೆಯೂ ಇದೆ. ಕೊಡಬೇಕು ಎಂಬುದಕ್ಕೆ ನನ್ನ ಒಪ್ಪಿಗೆಯೂ ಕೂಡ ಇದೆ. ಆದರೆ ಕೊಡುವುದಕ್ಕೆ ನಮಗೆ ದುಡ್ಡು ಬೇಕಲ್ಲಾ? ಇದ್ದಕ್ಕಿದ್ದ ಹಾಗೆ, ಎಲ್ಲಿಂದ ಮಾಡಲಿ? ದುಡ್ಡನ್ನು ಒಂದು ತಿಂಗಳಲ್ಲಿ ನಾನು ಪ್ರಿಂಟ್ ಮಾಡಲಿಕ್ಕಾಗುತ್ತದೆಯೇ? ಏನು additional resources ಬರುತ್ತದೋ, ಅದನ್ನು . . . . ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುವುದನ್ನು ಕೇಳಿ. ನಂತರ ಏನು ಬೇಕಾದರೂ ಮಾತನಾಡುವಿರಂತೆ.

ಛೇರ್ಮನ್:– ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುವುದನ್ನು ಕೇಳಿ.

ಶ್ರೀ ಸಿದ್ಧರಾಮಯ್ಯ:– ಮಾನ್ಯ ಅಧ್ಯಕ್ಷರೆ, ಏನು additional resources ಬಂದಿದೆಯೋ, ಅದನ್ನೆಲ್ಲಾ ನಾವು ಬಡವರ ಪರವಾಗಿ ಇರತಕ್ಕಂಥ ಕಾರ್ಯಕ್ರಮಗಳಿಗೆ ಕೊಟ್ಟಿದ್ದೇವೆ. ಈಗ 100 ಕೋಟಿ ರೂಪಾಯಿಗಳನ್ನು ರಸ್ತೆಗಳ ಅಭಿವೃದ್ಧಿಗೆಂದು ಕೊಟ್ಟಾಗ ರಸ್ತೆಗಳ ಅಭಿವೃದ್ಧಿಯ ಕೆಲಸವನ್ನು ತಾನೇ ಮಾಡುವುದು. Bridges ಗೆ additional ಆಗಿ 100 ಕೋಟಿ ರೂ.ಗಳನ್ನು ಕೊಟ್ಟರೆ, ಅದೂ ರಸ್ತೆಗಳ ಅಭಿವೃದ್ಧಿಗಾಗಿ ಕೊಟ್ಟಂತೆ ತಾನೇ? 400 ಕೋಟಿ ರೂಪಾಯಿಗಳ ಸಬ್ಸಿಡಿ ಕೊಟ್ಟರೆ, ರೈತರ ಪಂಪ್‌ಸೆಟ್‌ಗಳಿಗೆಲ್ಲಾ ಕೊಟ್ಟಂತಾಗಲಿಲ್ಲವೇ? ಇದರಿಂದ ಹಳ್ಳಿಯವರಿಗೆಲ್ಲಾ ಕೊಟ್ಟಂತಾಗಲಿಲ್ಲವೇ? ಆದ್ದರಿಂದ 60 ಕೋಟಿ ರೂಪಾಯಿಗಳನ್ನು ನಾನು ಮತ್ತೆ ಈಗ additional ಆಗಿ ಗ್ರಾಮ ಪಂಚಾಯಿತಿಗಳ ರಸ್ತೆಗಳಿಗೇ ಕೊಡಬೇಕೆಂದು ತಿರ್ಮಾನ ಮಾಡಿದ್ದೇನೆ. ಅಲ್ಲಿ ಎಂ.ಎಲ್.ಎ.ಗಳು ಹೇಳಿದ ರೀತಿಯಲ್ಲೇ ಕೆಲಸಗಳಾಗುತ್ತವೆ. ಅದರಲ್ಲಿ 20 ಕೋಟಿ ರೂಪಾಯಿಗಳು ಇದಕ್ಕೆ ಹೋಗುತ್ತದೆ, 40 ಕೋಟಿ ರೂಪಾಯಿಗಳು ಹೊಸ ಕೆಲಸಕ್ಕೆ ಹೋಗುತ್ತದೆ. ಈಗ ನಾವು ಫೆಬ್ರವರಿ ತಿಂಗಳಿಗೆ ಬಂದಿದ್ದೇವೆ. ಮಾರ್ಚ್ ತಿಂಗಳಿನಲ್ಲಿ ಮುಂದಿನ ಸಾಲಿನ ಬಜೆಟ್ ಅನ್ನು ನಾನು ಮಂಡಿಸುತ್ತಿದ್ದೇನೆ. ಮುಂದಿನ ಬಜೆಟ್ ಅನ್ನು ಮಂಡಿಸುವಾಗ, ಮಾನ್ಯ ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು, ಅವರ ಭಾವನೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಅವರು ಹೇಳಿದಂತಹ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ನಾನು ತೀರ್ಮಾನ ಮಾಡುತ್ತೇನೆ ಅನ್ನತಕ್ಕಂಥದ್ದನ್ನು ತಮ್ಮ ಮೂಲಕ ಅವರೆಲ್ಲರಿಗೂ ತಿಳಿಸಲಿಕ್ಕೆ ಬಯಸುತ್ತಿದ್ದೇನೆ. ಆದ್ದರಿಂದ ಈ ಪೂರಕ ಅಂದಾಜುಗಳಿಗೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:– ಮಾನ್ಯ ರಾಜಣ್ಣನವರು ಹೇಳಿರತಕ್ಕಂಥ ಎಸ್.ಸಿ. ಃ ಎಸ್.ಟಿ. ಹಾಸ್ಟೆಲ್‌ಗಳಿಗೆ ಸ್ಕಾಲರ್‌ಶಿಪ್ ಏನು ಬಾಕಿ ಉಳಿದಿದೆಯೋ, ಅದನ್ನು ಕೊಡಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ದಿನಾಂಕ 31.3.2005ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1, 3ರಿಂದ 10, 13, 15, 17, 18, 20, 21, 22, ಹಾಗೂ 27 ಇವುಗಳಿಗೆ ಸಂಬಂಧಿಸಿದಂತೆ, ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಛೇರ್ಮನ್:– 2004–05ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕುಂತು) ಬೇಡಿಕೆಗಳ ಪ್ರಸ್ತಾವಗಳನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

"ದಿನಾಂಕ 31.3.2005ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1, 3ರಿಂದ 10, 13, 15, 17, 18, 20, 21, 22 ಹಾಗೂ 27 ಇವುಗಳಿಗೆ ಸಂಬಂಧಿಸಿದಂತೆ, ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ"

ಪ್ರಸ್ತಾವಗಳನ್ನು ಅಂಗೀಕರಿಸಲಾಯಿತು ಮತ್ತು 2004-05ನೆಯ ಪೂರಕ ಅಂದಾಜುಗಳ (ಎರಡನೇ ಕಂತು) ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಛೇರ್ಮನ್‌ರವರ ಆದೇಶದ ಮೇರೆಗೆ ಮಂಜೂರಾದ 2004–05ನೆಯ ಪೂರಕ ಅಂದಾಜುಗಳ (ಎರಡನೇ ಕಂತು) ಬೇಡಿಕೆಗಳ ಪ್ರಸ್ತಾವಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ)

1. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಕೃಷಿ ಮತ್ತು ತೋಟಗಾರಿಕೆ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜ್ಯಸ್ವ ಲೆಕ್ಕದಲ್ಲಿ 540.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

3. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಆರ್ಥಿಕ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 3118.03 ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 575.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

4. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಸಿ.ಆ.ಸು.ಇ. ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 5.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

5. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಒಳಾಡಳಿತ ಮತ್ತು ಸಾರಿಗೆ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 200.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

6. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಇಲಾಖೆ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ಬಂಡವಾಳ ಲೆಕ್ಕದಲ್ಲಿ 285.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

7. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 6000.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

8. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 398.57 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

9. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಸಹಕಾರ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 159.74 ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 888.50 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಗಲನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

10. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಸಮಾಜ ಕಲ್ಯಾಣ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 2229.10 ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 1700.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

13. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ 'ಆಹಾರ ಮತ್ತು ನಾಗರಿಕ ಸರಬರಾಜು' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 30000.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

15. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಮಾಹಿತಿ ತಂತ್ರಜ್ಞಾನ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 26.62 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

17. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಶಿಕ್ಷಣ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 200.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

18. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ವಾಣಿಜ್ಯ ಮತ್ತು ಕೈಗಾರಿಕೆ 'ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 7865.76 ಲಕ್ಷ ರೂ.ಗಳು ಮತ್ತು ಬಂಡವಾಳ ವೆಚ್ಚದಲ್ಲಿ 4847.00 ಲಕ್ಷ ರೂ.ಗಳಿಗೆ ಮೀರಿದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

20. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಲೋಕೋಪಯೋಗಿ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 10105.43 ಲಕ್ಷ ರೂ.ಗಳು ಮತ್ತು ಬಂಡವಾಳ ವೆಚ್ಚದಲ್ಲಿ 18165.95 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

21. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಜಲಸಂಪನ್ಮೂಲ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 142.70 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 5345.50 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

22. 2005ನೇ ಮಾರ್ಚ್ 31ರ ಅಂತ್ಯದೊಳಗಾಗಿ ' ಆರೋಗ್ಯ ಮತ್ತು ಕುಟುಂಬ ಕಲ್ಯಾಣ ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 1022.12 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

27. 2005ನೇ ಮಾರ್ಚ್ 31ರ ಅಂತ್ಯದೊಳಗೆ ' ಕಾನೂನು ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿರುವುದರಿಂದ ರಾಜಸ್ವ ಲೆಕ್ಕದಲ್ಲಿ 50.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

13. ಶಾಸನ ರಚನೆ

6) ವಿಧೇಯಕದ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ಧನವಿನಿಯೋಗ ವಿಧೇಯಕ, 2005

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಛೇರ್ಮನ್: ಪ್ರಸ್ತಾವ ಏನೆಂದರೆ '2005ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರ):– ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಛೇರ್ಮನ್: ವಿಧೇಯಕವನ್ನು ಮಂಡಿಸಲಾಗಿದೆ.

x (ಅನುಬಂಧ–II)

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು) ಮಾನ್ಯ ಅಧ್ಯಕ್ಷರೆ, " 2005ರ, ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಛೇರ್ಮನ್: ಪ್ರಸ್ತಾವ ಏನೆಂದರೆ '2005ರ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು'

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಛೇರ್ಮನ್: ಪ್ರಶ್ನೆ ಏನೆಂದರೆ: "ಖಂಡ 2 ರಿಂದ 3ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"